ವಾಷಿಂಗ್ಟನ್: ಅಮೆರಿಕದ ಎಲ್ಲಾ ಹಡಗುಗಳು, ವಿಮಾನಗಳು ಮತ್ತು ಮಿಲಿಟರಿ ಸಿಬ್ಬಂದಿ, ಅಧಿಕೃತ ಒಪ್ಪಂದ ಪೂರ್ಣವಾಗಿ ಜಾರಿಯಾಗುವವರೆಗೆ ಇರಾನ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯೋಜಿತರಾಗಿರುತ್ತಾರೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಘೋಷಿಸಿದ್ದಾರೆ.

ಅಮೆರಿಕ ಮಿಲಿಟರಿ ಸ್ಥಿತಿ: ಯುಎಸ್ ಮಿಲಿಟರಿ ಹೆಚ್ಚುವರಿ ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳೊಂದಿಗೆ ತನ್ನ ಸ್ಥಾನಗಳಲ್ಲಿ ಮುಂದುವರಿದಿದೆ. ಒಪ್ಪಂದದ ಷರತ್ತುಗಳ ಅನುಸರಣೆಯನ್ನು ಖಚಿತ ಪಡಿಸಿಕೊಳ್ಳಲು ಪಡೆಗಳು ಅಲ್ಲಿಯೇ ಇರುತ್ತವೆ. ಸೈನ್ಯ ಪ್ರಸ್ತುತ ಸನ್ನದ್ಧತೆಯನ್ನು ಕಾಯ್ದುಕೊಳ್ಳುವ ಜತೆಗೆ ಮುಂದಿನ ಕಾರ್ಯಾಚರಣೆಗಳಿಗೆ ಸಿದ್ಧವಾಗುತ್ತಿದೆ ಎಂದು ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ.

ಒಪ್ಪಂದದ ನಿಯಮಗಳು: ಹಾರ್ಮುಜ್ ಜಲಸಂಧಿ ಸಂಚಾರಕ್ಕೆ ಮುಕ್ತವಾಗಿರಬೇಕು ಮತ್ತು ಸುರಕ್ಷಿತವಾಗಿರಬೇಕು, ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ. ವರದಿಯಾಗಿರುವ ನಿಯಮಗಳ ಪ್ರಕಾರ, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ, ಒಂದು ವೇಳೆ ಒಪ್ಪಂದ ಪಾಲಿಸದಿದ್ದರೆ ಮಿಲಿಟರಿ ಕ್ರಮ ಒಂದು ಆಯ್ಕೆಯಾಗಿ ಉಳಿಯಲಿದೆ ಎಂದು ಟ್ರಂಪ್ ಸೂಚಿಸಿದ್ದಾರೆ.

ಹೆಜ್ಬೊಲ್ಲಾ ಮುಖ್ಯಸ್ಥನ ಸಲಹೆಗಾರ ಹತ

ಇರಾನ್‌ನೊಂದಿಗಿನ ಅಮೆರಿಕ-ಇಸ್ರೇಲಿ ಯುದ್ಧದಲ್ಲಿ ಕದನ ವಿರಾಮ ಘೋಷಣೆಯ ಹೊರತಾಗಿಯೂ ಲೆಬನಾನ್ ಮೇಲೆ ಇಸ್ರೇಲಿ ದಾಳಿಗಳು ಮುಂದುವರೆದಿದ್ದು, ಬೈರೂತ್ ಮೇಲೆ ದಾಳಿಯಲ್ಲಿ ಹೆಜ್ಬೊಲ್ಲಾ ನಾಯಕ ನೈಮ್ ಖಾಸಿಮ್‌ನ ಸೋದರಳಿಯನನ್ನು ಹತ್ಯೆಗೈದಿದ್ದೇವೆ ಎಂದು ಇಸ್ರೇಲ್ ಗುರುವಾರ ಹೇಳಿದೆ. ಐಡಿಎಫ್ ಬೈರೂತ್ ಪ್ರದೇಶದಲ್ಲಿ ದಾಳಿ ನಡೆಸಿ ಹೆಜ್ಬೊಲ್ಲಾ ಪ್ರಧಾನ ಕಾರ್ಯದರ್ಶಿ ನೈಮ್ ಖಾಸಿಮ್ ಸೋದರಳಿಯ ಮತ್ತು ವೈಯಕ್ತಿಕ ಕಾರ್ಯದರ್ಶಿ ಅಲಿ ಯೂಸುಫ್ ಹರ್ಷಿಯನ್ನು ನಿರ್ಮೂಲನೆ ಮಾಡಿದೆ ಎಂದು ಸೇನೆ ತಿಳಿಸಿದೆ.

ಇಸ್ರೇಲ್ ದಾಳಿಗೆ ಲೆಬನಾನ್‌ನ 203 ಸಾವು

ಬೈರೂತ್: ಮಧ್ಯ ಬೈರೂತ್ ಮತ್ತು ಲೆಬನಾನ್‌ನ ಇತರ ಪ್ರದೇಶಗಳಲ್ಲಿ ಇಸ್ರೇಲಿ ದಾಳಿಯಲ್ಲಿ ಕನಿಷ್ಠ 203 ಮಂದಿ ಮೃತಪಟ್ಟಿದ್ದು, 1,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ. ಇಸ್ರೇಲ್ ಮತ್ತು ಲೆಬನಾನಿನ ಉಗ್ರಗಾಮಿ ಗುಂಪು ಹೆಜ್ಬೊಲ್ಲಾಹ್ ನಡುವೆ ಐದು ವಾರಗಳಿಗೂ ಹೆಚ್ಚು ಕಾಲ ನಡೆದ ಯುದ್ಧದಲ್ಲಿ ಬುಧವಾರ ಲೆಬನಾನ್‌ನ ಒಂದೇ ದಿನದ ಗರಿಷ್ಠ ಸಾವಿನ ಸಂಖ್ಯೆಯಾಗಿದೆ. ಇಸ್ರೇಲಿ ಮಿಲಿಟರಿ ಹೆಜ್ಬೊಲ್ಲಾ ತಾಣಗಳನ್ನು ಗುರಿಯಾಗಿಸಿ ಕೊಂಡಿದೆ ಎಂದು ಹೇಳಿದೆ. ಮಧ್ಯಾಹ್ನದ ಜನದಟ್ಟಣೆ ವೇಳೆ ಅಪ್ಪಳಿಸಿದ ಕ್ಷಿಪಣಿ ಕಟ್ಟಡಗಳು ದಟ್ಟವಾದ ವಾಣಿಜ್ಯ ಮತ್ತು ವಸತಿ ಮೇಲೆ ಬಿದ್ದಿದ್ದೆ. ಇದು ವ್ಯಾಪಕ ನಾಗರಿಕ ಸಾವುನೋವುಗಳಿಗೆ ಕಾರಣವಾಗಿದೆ.

ಹಾರ್ಮುಜ್ ಹಾದು ಹೋಗುವ ಹಡಗುಗಳಿಗೆ ಇರಾನ್‌ನಿಂದ ಶುಲ್ಕ

ಹೊಸದಿಲ್ಲಿ: ಎರಡು ವಾರಗಳ ಕದನ ವಿರಾಮದ ಅವಧಿಯಲ್ಲಿ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುವ ಹಡಗುಗಳು ಕ್ರಿಪ್ಟೋಕರೆನ್ಸಿ ಅಥವಾ ಚೀನೀ ಯುವಾನ್‌ನಲ್ಲಿ ಶುಲ್ಕ ಪಾವತಿಸಬೇಕು ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಸೂಚಿಸಿದೆ. ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿಯ ಪ್ರಕಾರ, ಸರಕು ತುಂಬಿದ ಟ್ಯಾಂಕರ್‌ಗಳಿಗೆ ಇರಾನ್ ಪ್ರತಿ ಬ್ಯಾರೆಲ್‌ಗೆ ಸುಮಾರು 1 ಡಾಲರ್ ಶುಲ್ಕ ವಿಧಿಸುತ್ತಿದೆ. ಹಡಗುಗಳು ತಮ್ಮ ಸರಕಿನ ವಿವರಗಳನ್ನು ಮುಂಚಿತವಾಗಿ ಇಮೇಲ್ ಮೂಲಕ ನೀಡಬೇಕು ಮತ್ತು ಇರಾನ್ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು. ಬಳಿಕ ಖೇಶ್ಮ್ ಮತ್ತು ಲಾರಕ್ ದ್ವೀಪಗಳ ನಡುವಿನ ಉತ್ತರದ ಕಾರಿಡಾರ್ ಅನ್ನು ಬಳಸಬೇಕಾಗುತ್ತದೆ.

ಕಿರುಸುದ್ದಿ

ರಾಜ್ಯಸಭೆ ಸದಸ್ಯರಾಗಿ ಇಂದು ನಿತೀಶ್ ಪ್ರಮಾಣ



ಹೊಸದಿಲ್ಲಿ: ಬಿಹಾರದ ದೀರ್ಘಕಾಲದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಶುಕ್ರವಾರ ರಾಜ್ಯಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ರಾಜ್ಯಸಭೆಯ ಸಭಾಪತಿ ಸಿ. ಪಿ. ರಾಧಾಕೃಷ್ಣನ್ ಅವರ ಕೊಠಡಿಯಲ್ಲಿ ಅವರಿಗೆ ಮೇಲ್ಮನೆಯ ಸದಸ್ಯರಾಗಿ ಪ್ರಮಾಣ ವಚನ ಬೋಧಿಸಲಾಗುವುದು. ನಿತೀಶ್ ಈಗಾಗಲೇ ರಾಜ್ಯ ವಿಧಾನ ಪರಿಷತ್ತಿನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ರಾಜ್ಯಸಭೆಗೆ ಆಯ್ಕೆಯಾದ ನಂತರ ಮಾ. 30ರಂದು ಎಂಎಲ್‌ಸಿ ಹುದ್ದೆಗೆ ರಾಜೀನಾಮೆ ನೀಡಿದ್ದರು.

3 ಮಕ್ಕಳನ್ನು ಹೊಂದಬೇಕು: ಹಿಂದುಗಳಿಗೆ ಸೀಮಾ ಹೈದರ್

ಹೊಸದಿಲ್ಲಿ: ಭಾರತದಲ್ಲಿರುವ ಪ್ರತಿ ಹಿಂದು ಕುಟುಂಬವು ಕನಿಷ್ಠ 2 ರಿಂದ ಮೂರು ಮಕ್ಕಳನ್ನು ಹೊಂದಬೇಕು . ಸಣ್ಣ ಕುಟುಂಬಗಳಿಂದ ಜನಸಂಖ್ಯಾ ಸಮತೋಲನದ ಮೇಲೆ ದುಷ್ಪರಿಣಾಮ ಬೀರಬಹುದು ಎಂದು ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ಸೀಮಾ ಹೈದರ್ ಹೇಳಿದ್ದಾರೆ.ಸೀಮಾ ಅವರು ಪಾಕಿಸ್ತಾನದಿಂದ ನೇಪಾಳ ಮೂಲಕವಾಗಿ ಭಾರತಕ್ಕೆ ಬಂದು ಸಚಿನ್ ಮೀನಾ ಅವರನ್ನು ವಿವಾಹವಾಗಿದ್ದರು. ಸಂದರ್ಶನವೊಂದರಲ್ಲಿ ಮಾತನಾಡುತ್ತಾ ಮಕ್ಕಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡ ಸೀಮಾ ಹೈದರ್, ದೇಶದಲ್ಲಿ ಇಂದು ಅನೇಕರು ಜನರು ಒಂದು ಅಥವಾ ಎರಡು ಮಕ್ಕಳನ್ನು ಮಾತ್ರ ಹೊಂದುತ್ತಿದ್ದಾರೆ. ಇದರಿಂದ ಹಿಂದು ಜನಸಂಖ್ಯೆಯಲ್ಲಿ ಕುಸಿತಕ್ಕೆ ಕಾರಣವಾಗುತ್ತಿದೆ ಎಂದಿದ್ದಾರೆ.

ಕತಾರ್‌ಗೆ ಸಚಿವ ಪುರಿ ಭೇಟಿ

ಹೊಸದಿಲ್ಲಿ: ಎರಡು ದಿನಗಳ ಭೇಟಿಗಾಗಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಗುರುವಾರ ಕತಾರ್‌ಗೆ ಭೇಟಿ ನೀಡಿದ್ದಾರೆ.ಇರಾನ್ ಯುದ್ಧದಿಂದ ಉಂಟಾದ ಇಂಧನ ಪೂರೈಕೆಯ ಕಳವಳದ ನಡುವೆ ಈ ಭೇಟಿ ಪ್ರಾಮುಖ್ಯತೆ ಹೊಂದಿದೆ. ಭಾರತವು ತನ್ನ ಎಲ್‌ಎನ್‌ಜಿ ದಾಸ್ತಾನಿನ ಶೇ.50ರಷ್ಟನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಆಮದು ಮಾಡಿಕೊಳ್ಳುತ್ತದೆ ಎಂದು ತೈಲ ಅರ್ಥಶಾಸ್ತ್ರಜ್ಞ ಕಿರಿಟ್ ಪಾರಿಖ್ ಹೇಳಿದ್ದಾರೆ.

ಸಂಸ್ಕೃತಿಗೆ ವಿರುದ್ಧವಾದ ಸ್ಥಳದ ಹೆಸರು ಬದಲು

ಕೋಲ್ಕತ್ತಾ: ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸಿದರೆ ಪಶ್ಚಿಮ ಬಂಗಾಳದ ಸಂಸ್ಕೃತಿ ಮತ್ತು ನೀತಿಗೆ ವಿರುದ್ಧವಾದ ಸ್ಥಳಗಳ ಹೆಸರುಗಳನ್ನು ಬದಲಾಯಿಸುತ್ತದೆ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಗುರುವಾರ ಹೇಳಿದ್ದಾರೆ.

ಬಾಂಗ್ಲಾದೇಶದ ಒಳನುಸುಳುಕೋರರು ರಾಜ್ಯದಲ್ಲಿ ಮಹಿಳೆಯರ ಭದ್ರತೆಗೆ ಅಪಾಯವನ್ನುಂಟುಮಾಡುತ್ತಿದೆ ಎಂದು ಪ್ರತಿಪಾದಿಸಿದ ಅವರು, ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದರಿಂದ ಒಳನುಸುಳುಕೋರರು ಕಾನೂನುಕ ಕ್ರಮ ಎದುರಿಸುತ್ತಾರೆ. ಅವರನ್ನು ಮರಳಿ ಕಳುಹಿಸಲಾಗುತ್ತದೆ ಹೇಳಿದರು. ಉತ್ತರ ದಿನಾಜ್ಪುರ ಜಿಲ್ಲೆಯ ಚಾಕುಲಿಯಾದಲ್ಲಿ ಚುನಾವಣಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ನವೀನ್, ಅಲಿಪುರ್ದುವಾರ್‌ನಿಂದ ಇಸ್ಲಾಂಪುರದವರೆಗಿನ ಪಶ್ಚಿಮ ಬಂಗಾಳದ ಸಂಸ್ಕೃತಿಗೆ ವಿರುದ್ಧವಾದ ಸ್ಥಳಗಳ ಹೆಸರುಗಳನ್ನು ಬಿಜೆಪಿ ಸರ್ಕಾರದ ಅಡಿಯಲ್ಲಿ ಉಳಿಯಲು ಬಿಡುವುದಿಲ್ಲ ಎಂದು ಹೇಳಿದರು. ಮೇ 4ರ ನಂತರ, ಈ ಸ್ಥಳಗಳ ಹೆಸರುಗಳಲ್ಲಿನ ಬದಲಾವಣೆಗಳ ಜತೆಗೆ ನಿಮ್ಮ ಜೀವನದಲ್ಲಿ ಬದಲಾವಣೆಗಳು ಉಂಟಾಗುತ್ತವೆ ಎಂದು ಅವರು ಹೇಳಿದರು. ಈ ಚುನಾವಣೆಯು ರಾಜ್ಯದ ಭ್ರಷ್ಟಾಚಾರ, ದಬ್ಬಾಳಿಕೆ, ಕಾನೂನುಬಾಹಿರತೆ ಮತ್ತು 'ಮಹಾಜನ್ ಲಾಲ್ ರಾಜ್' ಅನ್ನು ಸೂಚಿಸುವ ದಬ್ಬಾಳಿಕೆಯ ಸರ್ಕಾರ ಮತ್ತು ದೇಶದ ಜನರಿಗೆ ನಂಬಿಕೆಯಿರುವ ಬಿಜೆಪಿ ನಡುವಿನ ಹೋರಾಟವಾಗಿದೆ ಎಂದು ನವೀನ್ ಹೇಳಿದರು. ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಡಬಲ್ ಎಂಜಿನ್ ಸರ್ಕಾರವನ್ನು ನೀಡಬೇಕೆಂದು ಅವರು ರಾಜ್ಯದ ಜನರನ್ನು ಒತ್ತಾಯಿಸಿದರು.

ಮಿಸ್ರಿ ಅಮೆರಿಕ ಭೇಟಿ: ಒಪ್ಪಂದಗಳ ಬಗ್ಗೆ ಚರ್ಚೆ



ವಾಷಿಂಗ್ಟನ್: ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಅಮೆರಿಕದ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ ರಕ್ಷಣಾ ಮತ್ತು ವ್ಯಾಪಾರ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದರು.

ಇಂಡೋ-ಪೆಸಿಫಿಕ್ ಮತ್ತು ಪಶ್ಚಿಮ ಏಷ್ಯಾದ ಬೆಳವಣಿಗೆಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಇಲ್ಲಿ ಮೂರು ದಿನಗಳ ಭೇಟಿಯಲ್ಲಿ, ಮಿಸ್ರಿ ಅವರು ರಕ್ಷಣಾ ಇಲಾಖೆಯ ಕಾರ್ಯದರ್ಶಿಗಳಾದ ಮೈಕೆಲ್ ಡಫಿ ಮತ್ತು ಎಲ್ಬ್ರಿಡ್ಜ್ ಕಾಲ್ಬಿ ಮತ್ತು ವಾಣಿಜ್ಯ ಇಲಾಖೆಯ ಅಧೀನ ಕಾರ್ಯದರ್ಶಿಗಳಾದ ಜೆಫ್ರಿ ಕೆಸ್ಲರ್ ಮತ್ತು ವಿಲಿಯಂ ಕಿಮ್ಮಿಟ್ ಅವರನ್ನು ಭೇಟಿಯಾದರು.

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಪೆಂಟಗನ್‌ನಲ್ಲಿ ಅಂಡರ್ ಸೆಕ್ರೆಟರಿ ಆಫ್ ವಾರ್ ಫಾರ್ ಪಾಲಿಸಿ ಎಲ್ಬ್ರಿಡ್ಜ್ ಕೋಲ್ಬಿ ಅವರೊಂದಿಗೆ ಇಂಡೋ-ಪೆಸಿಫಿಕ್ ಪ್ರದೇಶ ಮತ್ತು ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಒಳಗೊಂಡ ಮತ್ತೊಂದು ವ್ಯಾಪಕವಾದ ಸಂಭಾಷಣೆಯನ್ನು ನಡೆಸಿದರು.

ಕರಾವಳಿ ರಾಜ್ಯಗಳ ಸವಾಲು ಅವಕಾಶಗಳಾಗಿ ಪರಿವರ್ತನೆ

ಪಣಜಿ: ಕರಾವಳಿ ರಾಜ್ಯಗಳು ತಮಗೆದುರಾದ ಸವಾಲುಗಳನ್ನೇ ಅವಕಾಶಗಳಾಗಿ ಪರಿವರ್ತಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಈ ಸಾಧನೆ ಮೆರೆದಿದ್ದಾರೆ ಎಂದು ಲೋಕಸಭಾ ಸಭಾಪತಿ ಓಂ ಬಿರ್ಲಾ ಗುರುವಾರ ಪ್ರಶಂಸೆಯ ನುಡಿಯಾಡಿದ್ದಾರೆ.

ಸಂಪನ್ನ ಭಾರತ ನಿರ್ಮಾಣದಲ್ಲಿ ಶಾಸಕಾಂಗ ಸಂಸ್ಥೆಗಳ ಪಾತ್ರ ಅತಿ ನಿರ್ಣಾಯಕ. ಸಂಪನ್ನ ಭಾರತದ ಗುರಿ ಸಾಕಾರದಲ್ಲಿ ಯುವ ಶಾಸಕರಿಗೆ ಮಹಾನ್ ಜವಾಬ್ದಾರಿಯಿದೆ. ಗುಜರಾತ್, ಮಹಾರಾಷ್ಟ್ರ, ಗೋವಾದಂತಹ ಕರಾವಳಿ ರಾಜ್ಯಗಳು ಹಲವು ಸವಾಲುಗಳನ್ನು ಎದುರಿಸುತ್ತಿರುವ ರಾಜ್ಯಗಳು.ಆದರೂ ಈ ರಾಜ್ಯಗಳ ನಾಯಕತ್ವ ಸವಾಲುಗಳನ್ನು ಅವಕಾಶವಾಗಿ ಪರಿವರ್ತಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಬರಗಾಲ, ಸುದೀರ್ಘ ಕರಾವಳಿ ವ್ಯಾಪ್ತಿ, ಬುಡಕಟ್ಟು ವಲಯಗಳು ಹೀಗೆ ಸಾಕಷ್ಟು ಸವಾಲುಗಳ ಸರಮಾಲೆ ಅವರೆದುರಿಗಿತ್ತು. ಆದರೆ ಮೋದಿ ಕೈಗಾರಿಕೀಕರಣವನ್ನು ಉತ್ತೇಜಿಸಿದರು. ವ್ಯಾಪಾರ, ಪ್ರವಾಸೋದ್ಯಮಕ್ಕೆ ಉತ್ತೇಜನವಿತ್ತರು. ಸಂಕಷ್ಟಗಳನ್ನು ಅಭಿವೃದ್ಧಿಯಾಗಿ ಪರಿವರ್ತಿಸಿಬಿಟ್ಟರು. ಜಲಕ್ಷಾಮವಿದ್ದ ಪ್ರದೇಶಗಳಿಗೆ ನರ್ಮದೆಯ ನೀರು ಹರಿಸಿದರು. ಜಾಗತಿಕ ಬದಲಾವಣೆಗಳಿಗೆ ಪೂರಕವಾಗಿ ಹೊಸ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಿದರು ಎಂದು ಬಿರ್ಲಾ ಕೊಂಡಾಡಿದರು. ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಶನ್ (ಸಿಪಿಎ) ಇಂಡಿಯಾ ರೀಜನ್ ಝೋನ್ 7ರ ಸಮಾವೇಶ ಉದ್ಘಾಟಿಸಿ ಬಿರ್ಲಾ ಮಾತನಾಡಿದರು.

ಇದೇ ತೆರ ಇತರ ಕೆಲವು ರಾಜ್ಯಗಳೂ ನೈಸರ್ಗಿಕ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿವೆ.

ಸುನೇತ್ರಾ ಪವಾರ್ ಅವಿರೋಧ ಆಯ್ಕೆ ಖಚಿತ

ಬಾರಾಮತಿ: ಏ.23ರಂದು ನಡೆಯಲಿರುವ ಬಾರಾಮತಿ ವಿಧಾನಸಭಾ ಉಪ ಚುನಾವಣೆಯಲ್ಲಿ ಸುನೇತ್ರಾ ಪವಾರ್ ಅವರ ಅವಿರೋಧ ಆಯ್ಕೆಗಾಗಿ ಪಕ್ಷದ ಅಭ್ಯರ್ಥಿ ಆಕಾಶ್ ಮೋರ್ ಅವರ ನಾಮಪತ್ರವನ್ನು ಹಿಂಪಡೆಯಲಾಗುವುದು ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ಹರ್ಷವರ್ಧನ್ ಸಪ್ಕಲ್ ಘೋಷಿಸಿದ್ದಾರೆ.

ಜ.28ರಂದು ವಿಮಾನ ಅಪಘಾತದಲ್ಲಿ ಮೃತರಾದ ನ್ಯಾಶನಲಿಸ್ಟ್ ಕಾಂಗ್ರೆಸ್ ಪಕ್ಷದ ನಾಯಕ ಅಜಿತ್ ಪವಾರ್ ಅವರ ಗೌರವಾರ್ಥವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಾಂಗ್ರೆಸ್ ಆರಂಭದಲ್ಲಿ ಸುನೇತ್ರಾ ಪವಾರ್ ವಿರುದ್ಧ ಮೋರ್ ಅವರನ್ನು ಕಣಕ್ಕಿಳಿಸಿತ್ತು. ಆದರೆ, ಹಿರಿಯ ರಾಜಕಾರಣಿಗೆ ಗೌರವ ಸಲ್ಲಿಸಲು ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಎನ್‌ಸಿಪಿ-ಎಸ್‌ಪಿ ನಾಯಕಿ ಸುಪ್ರಿಯಾ ಸುಳೆ ಮಾಡಿದ ಮನವಿಯ ಮೇರೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಹಿಂಪಡೆದಿದೆ.ತಮ್ಮ ವೃತ್ತಿಜೀವನವನ್ನು ಕಾಂಗ್ರೆಸ್‌ನಿಂದ ಪ್ರಾರಂಭಿಸಿದ್ದ ಅಜಿತ್ ಪವಾರ್ ಪಕ್ಷದೊಂದಿಗೆ ಸುದೀರ್ಘ ಸಂಬಂಧ ಹೊಂದಿದ್ದರು.

ಕೇಂದ್ರ ಸರ್ಕಾರದಿಂದ ಬಲವಾದ ವಾದ ಮಂಡನೆ | ಶಬರಿಮಲೆ ವಿಚಾರಣೆ ವೇಳೆ ನಾನಾ ಸಂಗತಿ ಚರ್ಚೆ

ಅರ್ಚಕರ ನೇಮಕ ಧಾರ್ಮಿಕ ವಿಷಯ

ಹೊಸದಿಲ್ಲಿ: ದೇವಾಲಯಗಳಲ್ಲಿ ಅರ್ಚಕರ ನೇಮಕಾತಿ ಸರ್ಕಾರದ ಮಂಡಳಿಗಳ ನಿಯಂತ್ರಣಕ್ಕೆ ಒಳಪಡುವ ಲೌಕಿಕ ಕ್ರಮವಲ್ಲ, ಅದು ಧಾರ್ಮಿಕ ಪರಂಪರೆ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯವಾಗಿದೆ ಎಂದು ಸುಪ್ರೀಂಕೋರ್ಟ್ ಮುಂದೆ ಕೇಂದ್ರ ಸರ್ಕಾರ ವಾದ ಮಂಡಿಸಿದೆ. ಹಾಗೆಯೇ, ಪಂಥಾಧಾರಿತವಾಗಿ ದೇವಾಲಯ ಪ್ರವೇಶ ನಿರ್ಬಂಧಿಸಿದರೆ ಹಿಂದೂ ಧರ್ಮವೇ ಹಾನಿಗೊಳಗಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದ ಪ್ರಸಂಗವೂ ನಡೆಯಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಮಹಿಳೆಯರ ಧಾರ್ಮಿಕ ಸ್ಥಳ ಪ್ರವೇಶ, ಧಾರ್ಮಿಕ ಸ್ವಾತಂತ್ರ್ಯ, ಪಂಥಾಧಾರಿತ ಹಕ್ಕುಗಳು ಮತ್ತು ದೇವಾಲಯ ನಿರ್ವಹಣೆಯ ವ್ಯಾಪ್ತಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸುತ್ತಿದೆ.

ಅರ್ಚಕರ ನೇಮಕ ಧಾರ್ಮಿಕ ವಿಷಯ: ಕೇಂದ್ರ ಸರ್ಕಾರದ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದಿಸಿ, ಅರ್ಚಕರ ನೇಮಕಾತಿಯನ್ನು 'ಸೆಕ್ಯುಲರ್ ಆಕ್ಟ್' ಎಂದು ಹಿಂದಿನ ತೀರ್ಪುಗಳಲ್ಲಿ ಪರಿಗಣಿಸಿರುವುದು ತಪ್ಪು ಎಂದರು. ದೇವಸ್ಥಾನಗಳ ಆಗಮ, ಸಂಪ್ರದಾಯ, ಆಚರಣೆಗಳ ಪ್ರಕಾರ ಅರ್ಹತೆಯುಳ್ಳವರನ್ನು ಆಯ್ಕೆ ಮಾಡುವ ಹಕ್ಕು ಸಂಬಂಧಿತ ಧಾರ್ಮಿಕ ಸಮುದಾಯಕ್ಕೇ ಸೇರಬೇಕು; ಸರ್ಕಾರದ ಮಂಡಳಿಗಳಿಗೆ ಅಲ್ಲ ಎಂದು ಹೇಳಿದರು.



ತಮಿಳುನಾಡಿನಲ್ಲಿ ಅರ್ಚಕರ ನೇಮಕಾತಿ ಅಧಿಕಾರವನ್ನು ಸರ್ಕಾರದ ಮಂಡಳಿಗಳಿಗೆ ನೀಡಿದ ಕಾನೂನಿಗೆ ಸುಪ್ರೀಂ ಕೋರ್ಟ್ ಮಾನ್ಯತೆ ನೀಡಿರುವುದನ್ನು ಉಲ್ಲೇಖಿಸಿ, 'ಇದರಿಂದ ಧಾರ್ಮಿಕ ಪಂಥಗಳ ಸಂಪ್ರದಾಯಗಳಲ್ಲಿ ರಾಜ್ಯ ಹಸ್ತಕ್ಷೇಪಕ್ಕೆ ದಾರಿ ತೆರೆದಂತಾಗಿದೆ. ಇದೇ ತರ್ಕ ಮುಂದುವರಿದರೆ ನಾಳೆ ಶಂಕರಾಚಾರ್ಯರನ್ನೂ ತೆಗೆದುಹಾಕುವ ಪರಿಸ್ಥಿತಿ ಬರಬಹುದು' ಎಂದು ಮೆಹ್ತಾ ಎಚ್ಚರಿಸಿದರು.

ಸುಧಾರಣೆ ಹೆಸರಿನಲ್ಲಿ ಧರ್ಮಕ್ಕೆ ಧಕ್ಕೆ ಬೇಡ

ಧರ್ಮ ಮತ್ತು ನಂಬಿಕೆಗಳ ವಿಚಾರದಲ್ಲಿ ನ್ಯಾಯಾಲಯಗಳು 'ಸೆಕ್ಯುಲರಿಸಂ' ಮತ್ತು 'ಸಂವಿಧಾನಾತ್ಮಕ ನೈತಿಕತೆ' ಹೆಸರಿನಲ್ಲಿ ಹಸ್ತಕ್ಷೇಪ ಮಾಡಬಾರದು. ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳನ್ನು ವಿಧಾನಮಂಡಲವೇ ನಿರ್ಧರಿಸಬೇಕು ಎಂದು ತುಷಾರ್ ಮೆಹ್ತಾ ವಾದಿಸಿದರು. ಇದಕ್ಕೆ ಪೀಠ ಪ್ರಾಥಮಿಕವಾಗಿ ಒಪ್ಪಿಗೆ ಸೂಚಿಸಿ, 'ಸುಧಾರಣೆಯ ಹೆಸರಿನಲ್ಲಿ ಮೂಲ ನಂಬಿಕೆ ಮತ್ತು ಭಕ್ತಿಗೆ ಧಕ್ಕೆಯಾಗುವಂತಿಲ್ಲ; ಧರ್ಮಕ್ಕೇ ಹಾನಿಯಾಗಬಾರದು' ಎಂದು ಅಭಿಪ್ರಾಯಪಟ್ಟಿತು.

ರಾಜ್ಯ ಮಧ್ಯ ಪ್ರವೇಶಕ್ಕೆ ಸಂವಿಧಾನ ಅವಕಾಶ

ಪೀಠವು ಸಂವಿಧಾನದ ವಿಧಿ 25(2)(ಬಿ) ಅಡಿಯಲ್ಲಿ ಎಲ್ಲ ವರ್ಗಗಳಿಗೂ ದೇವಾಲಯ ಪ್ರವೇಶ ಕಲ್ಪಿಸಲು ರಾಜ್ಯ ಮಧ್ಯಪ್ರವೇಶಿಸಬಹುದು ಎಂದು ಸ್ಪಷ್ಟಪಡಿಸಿತು. ವಿಧಿ 26(ಬಿ)ಯ ಧಾರ್ಮಿಕ ಪಂಥ ಹಕ್ಕುಗಳನ್ನು ಪ್ರತ್ಯೇಕವಾಗಿ ಓದಲು ಸಾಧ್ಯವಿಲ್ಲ, ಅವು ವಿಧಿ 25ರೊಂದಿಗೆ ಹೊಂದಾಣಿಕೆಯಲ್ಲಿ ಪರಿಗಣಿಸಬೇಕೆಂದು ಸೂಚಿಸಿತು.

ಪಂಥಾಧಾರಿತ ಪ್ರವೇಶ ನಿರ್ಬಂಧಕ್ಕೆ ಪೀಠದ ಆಕ್ಷೇಪ

ಅಯ್ಯಪ್ಪ ಭಕ್ತರ ಪರ ಹಿರಿಯ ವಕೀಲ ಸಿ.ಎಸ್. ವೈದ್ಯನಾಥನ್, ಶಬರಿಮಲೆ ಶಬರಿಮಲೆ ಅಯ್ಯಪ್ಪ ದೇವಸ್ಥಾನ ಭಕ್ತರು ಪ್ರತ್ಯೇಕ ಧಾರ್ಮಿಕ ಪಂಥವಾಗಿದ್ದು, ಪಂಥಾಧಾರಿತ ದೇವಸ್ಥಾನಗಳು ತಮ್ಮ ಪಂಥದವರಿಗಷ್ಟೇ ಪ್ರವೇಶ ನೀಡುವ ಹಕ್ಕು ಹೊಂದಿವೆ ಎಂದು ವಾದಿಸಿದರು. ಆದರೆ ನ್ಯಾ. ಬಿ.ವಿ. ನಾಗರತ್ನಾ ತೀವ್ರ ಆಕ್ಷೇಪ ವ್ಯಕ್ತಪಡಿಸಿ, 'ಪ್ರತಿ ಪಂಥವೂ ತಮ್ಮದೇ ದೇವಸ್ಥಾನಕ್ಕೆ ಮಾತ್ರ ಪ್ರವೇಶ ಎಂದು ಹೇಳಲಾರಂಭಿಸಿದರೆ ಅದು ಹಿಂದೂಧರ್ಮಕ್ಕೆ ಹಾನಿಕಾರಕ. ದೇವಾಲಯಗಳು ಮತ್ತು ಮಠಗಳು ಎಲ್ಲರಿಗೂ ಮುಕ್ತವಾಗಿರಬೇಕು' ಎಂದು ಹೇಳಿದರು. ನ್ಯಾ. ಅರವಿಂದ ಕುಮಾರ್ ಸಹ, ಇಂತಹ ನಿರ್ಬಂಧಗಳು ಸಮಾಜವನ್ನು ವಿಭಜಿಸುವ ಅಪಾಯವಿದೆ ಎಂದು ಅಭಿಪ್ರಾಯಪಟ್ಟರು.



ಶಬರಿಮಲೆ ಕುರಿತು ಭಕ್ತರ ವಾದ

ವೈದ್ಯನಾಥನ್, 'ಶಬರಿಮಲೆಯಲ್ಲಿ ಯಾರಿಗೂ ಧರ್ಮದ ಆಧಾರದ ಪ್ರವೇಶ ನಿಷೇಧ ಇಲ್ಲ, ಕ್ರೈಸ್ತರು, ಮುಸ್ಲಿಮರೂ ಅಯ್ಯಪ್ಪನಲ್ಲಿ ನಂಬಿಕೆ ಇಟ್ಟು 40 ದಿನಗಳ ವ್ರತ ಪಾಲಿಸಿದರೆ ಬರಬಹುದು' ಎಂದು ವಾದಿಸಿದರು. 2018ರ ಶಬರಿಮಲೆ ತೀರ್ಪಿನಲ್ಲಿ ವೈಯಕ್ತಿಕ ಹಕ್ಕುಗಳಿಗೆ ಸಮೂಹ ಧಾರ್ಮಿಕ ಹಕ್ಕುಗಳಿಗಿಂತ ಮೇಲುಗೈ ನೀಡಿದ್ದು ತಪ್ಪು ಎಂದೂ ಅಭಿಪ್ರಾಯಪಟ್ಟರು. ವಿಚಾರಣೆ ಮುಂದಿನ ವಾರವೂ ಮುಂದುವರಿಯಲಿದೆ.

ಸಂಪಾದಕೀಯ

ಪ್ರಜಾಪ್ರಭುತ್ವದ ಹಬ್ಬಕ್ಕೆ ಮತದಾರನ ಮುದ್ರೆ

ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಏಪ್ರಿಲ್ 9 ಮಹತ್ವದ ದಿನವಾಗಿ ದಾಖಲಾಗಿದೆ. ದಕ್ಷಿಣದ ಕೇರಳ, ಪುದುಚೇರಿ ಮತ್ತು ಈಶಾನ್ಯದ ಅಸ್ಸಾಂ ರಾಜ್ಯಗಳಲ್ಲಿ ನಡೆದ ವಿಧಾನಸಭೆ ಚುನಾವಣೆಗಳು ಮತದಾರರ ಉತ್ಸಾಹಕ್ಕೆ ಸಾಕ್ಷಿಯಾಗಿವೆ. ಮತಗಟ್ಟೆಗಳ ಮುಂದೆ ಕಂಡುಬಂದ ಸುದೀರ್ಘ ಸಾಲುಗಳು ಭಾರತೀಯರು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಇಟ್ಟಿರುವ ಅಚಲ ನಂಬಿಕೆಯನ್ನು ಮತ್ತೊಮ್ಮೆ ಜಗತ್ತಿಗೆ ಸಾರಿದೆ. ವಿಶೇಷವೆಂದರೆ, ಎಸ್ಐಆರ್ ಮುಗಿದ ಮೇಲೆ ಈ ರಾಜ್ಯಗಳಲ್ಲಿ ಮತದಾನವಾಗಿದ್ದು, ಎಸ್ಐಆರ್‌ನ ಪ್ರಭಾವವೂ ಇಲ್ಲಿ ಗೊತ್ತಾಗಿದೆ. ಅಂದರೆ, ಕೇಂದ್ರ ಚುನಾವಣಾ ಆಯೋಗವು ಈಗಾಗಲೇ ನಕಲಿ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಿದ ಪರಿಣಾಮ ನೈಜ ಮತದಾರರಷ್ಟೇ ಪಟ್ಟಿಯಲ್ಲಿ ಉಳಿದಿದ್ದಾರೆ. ಹೀಗಾಗಿ, ಮತದಾನವೂ ಚೆನ್ನಾಗಿ ಆಗಿದೆ. ಎಸ್ಐಆರ್ ಅನ್ನು ಟೀಕಿಸುತ್ತಿದ್ದವರಿಗೆ ಈ ಚುನಾವಣೆ ತಕ್ಕ ಪಾಠವನ್ನೇ ಕಲಿಸಿದೆ. ಎಲ್ಲೂ ತಮ್ಮ ಹೆಸರು ಮತದಾರರ ಪಟ್ಟಿಯಿಂದ ನಾಪತ್ತೆಯಾಗಿದೆ ಎಂಬ ಕೂಗು ಕೇಳಿಸಿಲ್ಲ ಎಂಬುದು ವಿಶೇಷ.



ಪ್ರಾಥಮಿಕ ವರದಿಗಳ ಪ್ರಕಾರ, ಪುದುಚೇರಿಯಲ್ಲಿ ಶೇ. 89ಕ್ಕೂ ಹೆಚ್ಚು ದಾಖಲೆ ಮತದಾನವಾಗಿದ್ದರೆ, ಅಸ್ಸಾಂನಲ್ಲಿ ಶೇ. 85 ಹಾಗೂ ಕೇರಳದಲ್ಲಿ ಶೇ. 77ಕ್ಕೂ ಹೆಚ್ಚು ಮತದಾನವಾಗಿದೆ. ಅಸ್ಸಾಂನಲ್ಲಿ ಹಿಮಂತ ಬಿಸ್ವ ಶರ್ಮಾ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತದ ಅಳಿವು-ಉಳಿವು ನಿರ್ಧಾರವಾಗಬೇಕಿದ್ದರೆ, ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗದ ಭವಿಷ್ಯ ಅಡಗಿದೆ. ಈ ಬಾರಿ ಅಸ್ಸಾಂನಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಹಿಂಸಾಚಾರದ ಘಟನೆಗಳು ವರದಿಯಾಗಿದ್ದರೂ, ಒಟ್ಟಾರೆಯಾಗಿ ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ಸಾಗಿರುವುದು ಸಮಾಧಾನದ ಸಂಗತಿ. ಅಸ್ಸಾಂನ ಮತದಾರರು ಭೂಮಿ ಮತ್ತು ಅಸ್ಮಿತೆಯ ರಕ್ಷಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಹೊರಬಂದಿರುವುದು ಗಮನಾರ್ಹ. ಕೇರಳದಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು, ಸಾಂಪ್ರದಾಯಿಕ ಎಡರಂಗ(ಎಲ್‌ಡಿಎಫ್) ಮತ್ತು ಕಾಂಗ್ರೆಸ್ ನೇತೃತ್ವದ (ಯುಡಿಎಫ್) ಮೈತ್ರಿಕೂಟಗಳ ನಡುವೆ ಬಿಜೆಪಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಪುದುಚೇರಿಯಲ್ಲಿ ಎನ್. ರಂಗಸ್ವಾಮಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಪಾರಮ್ಯವನ್ನು ಎದುರಿಸಲು ಕಾಂಗ್ರೆಸ್-ಡಿಎಂಕೆ ಮೈತ್ರಿಕೂಟ ಹೋರಾಟ ನಡೆಸಿದೆ. ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಮನೆಯಿಂದಲೇ ಮತದಾನ ಮಾಡುವ ಅವಕಾಶ ಹಾಗೂ ಮೊದಲ ಬಾರಿಗೆ ಮತ ಚಲಾಯಿಸುವ ಯುವಕರಿಗೆ ಸೌಲಭ್ಯಗಳನ್ನು ನೀಡಿದ ಚುನಾವಣಾ ಆಯೋಗದ ಕ್ರಮಗಳು ಶ್ಲಾಘನೀಯ. ಒಟ್ಟಾರೆಯಾಗಿ, ಈ ಬೃಹತ್ ಮತದಾನವು ಆಡಳಿತ ವಿರೋಧಿ ಅಲೆಯೋ ಅಥವಾ ಆಡಳಿತ ಪರವಾದ ಒಲವೋ ಎಂಬುದು ಮೇ 4ರ ಫಲಿತಾಂಶದಂದು ತಿಳಿಯಲಿದೆ. ಆದರೆ, ಮತದಾನದ ಪ್ರಮಾಣ ಹೆಚ್ಚಾಗಿರುವುದು ಬದಲಾವಣೆಯ ಸಂಕೇತವೋ ಅಥವಾ ಬಲಿಷ್ಠ ಸ್ಥಿರತೆಯ ಬಯಕೆಯೋ ಎಂಬ ಕುತೂಹಲ ರಾಜಕೀಯ ಪಂಡಿತರಲ್ಲಿ ಮನೆಮಾಡಿದೆ. ದೇಶದ ಭವಿಷ್ಯವನ್ನು ನಿರ್ಧರಿಸುವ ಈ ನಿರ್ಣಾಯಕ ಹಂತದಲ್ಲಿ ಮತದಾರರು ನೀಡಿರುವ ತೀರ್ಪು ಇವಿಎಂ ಯಂತ್ರಗಳಲ್ಲಿ ಭದ್ರವಾಗಿದ್ದು, ಹೊಸ ಸರ್ಕಾರದ ಹಾದಿ ಸುಗಮಗೊಳಿಸಲಿದೆ.

ಇರಾನ್ ಸಮರದಿಂದ ಬಯಲಾದ ಮಿಥ್ಯೆಗಳು!

▸ **ಉತ್ಪಲ್ ಕುಮಾರ್**

ಇರಾನ್ ಯುದ್ಧವು ಎಲ್ಲ ಯುದ್ಧಗಳಂತೆ ಕೊಲ್ಲಿಯಲ್ಲಿ ನಡೆದ ಒಂದು ಸಂಘರ್ಷವಲ್ಲ, ಅದರ ಆಯಾಮ ಇನ್ನೂ ವಿಸ್ತಾರವಾಗಿದೆ. ಮುಖ್ಯವಾಗಿ ಅದು ದಶಕಗಳಿಂದ ಬೆಳೆದುಕೊಂಡು ಬಂದಿದ್ದ ಹಲವಾರು ಮಿಥ್ಯೆಗಳನ್ನು ನಾಶಪಡಿಸಿದೆ. ವ್ಯವಸ್ಥಿತವಾಗಿ ಕಟ್ಟಿದ ಹಲವು ಸುಳ್ಳುಗಳನ್ನು ಬಹಿರಂಗಪಡಿಸಿದೆ.ಈ ಯುದ್ಧವು ಭೌಗೋಳಿಕ ವ್ಯವಸ್ಥೆಯನ್ನೆ ಮರುರೂಪಿಸುವಂತಿದೆ.

'ಅರಬ್ ಏಕತೆ' ಎಂಬ ಕಲ್ಪನೆಯನ್ನೇ ನೋಡೋಣ. ಕಳೆದ ಕೆಲವು ದಶಕಗಳಿಂದ ಅರಬ್ ಏಕತೆಯ ಕುರಿತು ಅತಿರಂಜಿತವಾಗಿ ಹೇಳಲಾಗುತ್ತಿತ್ತು. ಗಮಾಲ್ ಅಬ್ದುಲ್ ನಾಸೀರ್‌ನಿಂದ ಹಿಡಿದು ಸದ್ದಾಂ ಹುಸೇನ್, ಮುಹಮ್ಮದ್ ಗಡ್ಡಾಫಿವರೆಗೆ ಎಲ್ಲರೂ 'ಪಾನ್ ಅರಬ್' ಅಥವಾ 'ಪಾನ್ ಖಲೀಫತ್' ಕುರಿತು ಮುಸ್ಲಿಮರಲ್ಲಿ ಕನಸು ಬಿತ್ತಿದ್ದರು. ಆದರೆ ಅದು ಎಂದಿಗೂ ಕಾರ್ಯಸಾಧ್ಯ ಕಲ್ಪನೆಯಾಗಿರಲಿಲ್ಲ, ಮುಸ್ಲಿಮರಲ್ಲಿ ಉನ್ಮಾದ ಸೃಷ್ಟಿಸುವ, ಭಿನ್ನಮತ ಅಳಿಸಿ ಹಾಕುವ ಮತ್ತು ಅಸ್ಥಿರತೆಯ ಮನಸ್ಥಿತಿ ಮರೆಯಾಗಿಸುವ ತಂತ್ರವಾಗಿತ್ತಷ್ಟೆ.

ಇರಾನ್ ಸಮರವು ಈ ಭ್ರಮೆಯನ್ನು ಬೆತ್ತಲುಗೊಳಿಸಿದೆ. ಅರಬ್ ಏಕತೆ ಎಂಬುದು ಅಸ್ತಿತ್ವದಲ್ಲೇ ಇಲ್ಲ ಎಂಬುದು ಸಾಬೀತಾಗಿದೆ. ಇರಾನಿನ ಡ್ರೋನ್‌ಗಳು ಮತ್ತು ಕ್ಷಿಪಣಿಗಳು ನೇರವಾಗಿ ಅರಬ್ ರಾಷ್ಟ್ರಗಳ ಮೇಲೆಯೇ ಎರಗುತ್ತಿದ್ದರೆ, ಈ ಎಲ್ಲಾ ಅರಬ್ ದೇಶಗಳು ಆತಂಕದಿಂದ ಚಡಪಡಿಸುತ್ತಿದ್ದವು.

'ಅರಬ್ ಸುರಕ್ಷತೆ' ಎಂಬ ಮಿಥ್ಯೆ ಕೂಡ ಈಗ ಚೂರಾಗಿದೆ. ಕೆಲವಾರು ವರ್ಷಗಳಿಂದ ಗಲ್ಫ್ ರಾಷ್ಟ್ರಗಳು ತಮ್ಮ ಶಕ್ತಿ ಇರುವುದೇ ಮೈತ್ರಿ ಕೂಟ ರಚಿಸುವುದರಲ್ಲಿ ಹಾಗೂ ಸುಧಾರಿತ ಶಸ್ತ್ರಾಸ್ತ್ರ ಪಡೆಯುವುದರಲ್ಲಿ ಎಂದು ಭಾವಿಸಿದ್ದವು. ಇದರ ಜತೆಗೇ ಅಮೆರಿಕದ ರಕ್ಷಣಾ ಕೊಡೆಯೂ ಅವುಗಳಿಗಿತ್ತು. ಆದರೆ ಇರಾನ್‌ನ ಕ್ಷಿಪಣಿ ಮತ್ತು ಡ್ರೋನ್‌ಗಳು ಈ ಗಲ್ಫ್ ರಾಷ್ಟ್ರಗಳ ಗುರಿಗಳ ಮೇಲೆ ಬಂದೆರಗಿದವು.ಅಲ್ಲಿಗೆ 'ಗಲ್ಫ್ ಒಂದು ಕೋಟೆ' ಎಂಬ ಭ್ರಮೆ ಛಿದ್ರವಾಯಿತು. ಗಲ್ಫ್ ಪ್ರದೇಶವು ಒಂದು ಗಾಜಿನ ಕೋಟೆ ಎಂಬುದು ಸಾಬೀತಾಯಿತು.

ಗಲ್ಫ್‌ನಲ್ಲಿದ್ದ ಅಮೆರಿಕನ್ ಸೇನಾ ನೆಲೆಗಳ ಸ್ಥಿತಿಯನ್ನೇ ನೋಡಿ. ಅವು ಅಮೆರಿಕದ ಮಿತ್ರರಾದ ಕೊಲ್ಲಿ ರಾಷ್ಟ್ರಗಳನ್ನು ಸಂರಕ್ಷಿಸಲು ಇರುವುದೆಂದು ಭಾವಿಸಲಾಗಿತ್ತು. ವಿಪರ್ಯಾಸವೆಂದರೆ ಅವುಗಳ ಕಾರಣದಿಂದಲೇ ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನಿನ ಬಾಂಬ್‌ಗಳು ಬಂದು ಬಿದ್ದವು.

ಯುದ್ಧದ ಕಂಪನಗಳು ಕೊಲ್ಲಿ ಪ್ರದೇಶಕ್ಕಷ್ಟೇ ಸೀಮಿತವಾಗಿಲ್ಲ, ಜಾಗತಿಕವಾಗಿ ಪ್ರತಿಯೊಂದು ದೇಶವೂ ಹಾನಿ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಯುದ್ಧವು ಅಂತಾರಾಷ್ಟ್ರೀಯ ಗಮನವನ್ನು ಇನ್ನಿತರ ಕೆಲವು ಸಂಘರ್ಷಗಳಿಂದ ದೂರ ಸೆಳೆದಿದೆ. ಮುಖ್ಯವಾಗಿ ಉಕ್ರೇನ್ ಸಮರವನ್ನು ಜನರು ಮರೆತುಬಿಟ್ಟಿದ್ದಾರೆ. ಇದು ರಷ್ಯಾಕ್ಕೆ ಜಾಗತಿಕವಾಗಿ ತನ್ನ ಸ್ಥಾನಮಾನ ಬಲಪಡಿಸಲು ನೆರವಾಗಿದೆ. ಆದರೆ ಇಲ್ಲೊಂದು ವಿಪರ್ಯಾಸವೂ ಇದೆ. ದುರ್ಬಲಗೊಂಡ ಇರಾನ್ ಪಶ್ಚಿಮ ಏಷ್ಯಾದಲ್ಲಿ ರಷ್ಯಾದ ಸ್ಥಿತಿಯನ್ನೂ ದುರ್ಬಲಗೊಳಿಸುತ್ತದೆ. ಆದ್ದರಿಂದ ರಷ್ಯಾಕ್ಕೆ ಲಾಭದ ಜತೆಗೆ ನಷ್ಟವೂ ಸಂಭವಿಸಿದೆ.

ಇತ್ತ ಚೀನಾ ಕೂಡಾ ಇಕ್ಕಟ್ಟಿನಲ್ಲಿ ಸಿಲುಕಿದೆ. ಅಮೆರಿಕವು ಅನವಶ್ಯ ಯುದ್ಧವೊಂದರಲ್ಲಿ ತೊಡಗಿರುವುದು ಚೀನಾದ ಪಾಲಿಗೆ ಒಂದು ಸುಸಂಧಿಯಾಗಬೇಕಿತ್ತು. ಅದಕ್ಕೆ ತೈವಾನ್ ಜಲಸಂಧಿ ಸೇರಿದಂತೆ ಇನ್ನಿತರ ಪ್ರದೇಶಗಳಲ್ಲಿ ತನ್ನ ಹಿತಾಸಕ್ತಿಯನ್ನು ಬಲಗೊಳಿಸಲು ಅವಕಾಶ ಒದಗಿತ್ತು. ಆದರೆ ಭೌರಾಜಕೀಯವು ಅಷ್ಟು ಸರಳವಲ್ಲ! ಚೀನಾದ ಇಂಧನ ಭದ್ರತೆಗೆ ಇರಾನೇ ಮೂಲ. ಪ. ಏಷ್ಯಾದಲ್ಲಿ ಚೀನಾದ ಮಹತ್ವಾಕಾಂಕ್ಷೆ ಈಡೇರಿಸಲೂ ಇರಾನ್ ಬೇಕು. ದೌರ್ಭಾಗ್ಯವೆಂದರೆ ವೆನೆಜುವೆಲಾದ ಬಳಿಕ ಇರಾನ್ ಕೂಡ ಅಸ್ಥಿರಗೊಂಡಿರುವುದು ಚೀನಾದ ದೀರ್ಘಾವಧಿ ಆಟಕ್ಕೆ ತಡೆ ಹಾಕಿದೆ.

ಈ ಯುದ್ಧದಲ್ಲಿ ನಿಜವಾದ ವಿಜೇತನೆಂದರೆ ಅದು ಇಸ್ರೇಲ್. ಇಸ್ರೇಲ್‌ನ ಪಾಲಿಗೆ ಇರಾನ್ ಅತೀ ದೊಡ್ಡ ಅಪಾಯವಾಗಿತ್ತು.ಇದೀಗ ಇರಾನ್ ದುರ್ಬಲಗೊಳ್ಳುವುದರೊಂದಿಗೆ ಇಸ್ರೇಲ್ ಹೆಚ್ಚು ಸುರಕ್ಷಿತ ಎಂದು ಭಾವಿಸುವಂತಾಗಿದೆ. ಇರಾನಿನಲ್ಲಿ ಆಡಳಿತ ಬದಲಾವಣೆ ಯುದ್ಧದ ನಿಜವಾದ ಉದ್ದೇಶವೇ ಆಗಿರಲಿಲ್ಲ, ಇರಾನಿನ ಬಲ ಕುಂದಿಸುವುದೇ ಈ ಸಮರದ ಮುಖ್ಯ ಉದ್ದೇಶವಾಗಿತ್ತು. ಅದು ಸಾಧಿಸಲ್ಪಟ್ಟಿದೆ.



ಆದರೆ ಅಮೆರಿಕ ಮಾತ್ರ ಈ ಕಾರ್ಯಸೂಚಿಯಲ್ಲಿ ಎಡವಿದಂತೆ ತೋರುತ್ತಿದೆ. ಇರಾನಿನ ಕೆಲವು ಪ್ರಮುಖ ವ್ಯಕ್ತಿಗಳ ಮೇಲೆ ದಾಳಿ ನಡೆಸುವುದರಿಂದ ಅದು ಆಂತರಿಕವಾಗಿ ಕುಸಿಯಬಹುದೆಂದು ಅಮೆರಿಕ ಲೆಕ್ಕಾಚಾರ ಹಾಕಿತ್ತು. ಇದಕ್ಕೆ ವಿರುದ್ಧವಾಗಿ ಇರಾನ್‌ನಲ್ಲಿ ಅಧಿಕಾರವು ಸೇನೆಯ ಕೈಯಲ್ಲಿ ಹೆಚ್ಚು ಕೇಂದ್ರೀಕೃತಗೊಂಡಿತು. ಇರಾನ್‌ಗೆ ಬರೆ ಬಿದ್ದಿರಬಹುದು. ಆದರೆ ಅದು ಛಿದ್ರವಾಗಿಲ್ಲ, ಅದು ದೀರ್ಘಾವಧಿ ಯುದ್ಧಕ್ಕೆ ಸನ್ನದ್ಧವಾಗಿ ನಿಂತಿದೆ.

ಇವೆಲ್ಲದರ ಮಧ್ಯೆ ಭಾರತದ ವಿದೇಶಾಂಗ ನೀತಿಯು ಶ್ಲಾಘನೀಯ ಪ್ರಬುದ್ಧತೆ ತೋರಿದೆ. ಉಕ್ರೇನ್ ಸಮರದಿಂದಾರಂಭಿಸಿ ಇರಾನ್ ಯುದ್ಧದ ತನಕ ಭಾರತವು ತನ್ನ ಹಳೆಯ ಅಲಿಪ್ತ ನೀತಿಯನ್ನು ಕೈಬಿಟ್ಟು 'ಬಹುಮೈತ್ರಿ'ಯ ನೀತಿಯನ್ನು ಅನುಸರಿಸಿರುವುದು ಹಾಗೂ ಇದು ಉತ್ತಮ ಫಲ ನೀಡಿರುವುದು ಕಂಡುಬರುತ್ತಿದೆ.ಭಾರತದ ವಿದೇಶಾಂಗ ನೀತಿಯು ಈಗ ಹೆಚ್ಚು ಪ್ರಾಯೋಗಿಕ ಮತ್ತು ವಾಸ್ತವಿಕ. ಹೆಚ್ಚು ನಿಖರ ಮತ್ತು ಪ್ರಾಮಾಣಿಕ. ಸ್ಪಷ್ಟವಾಗಿ ಹೇಳಬೇಕೆಂದರೆ ಭಾರತವು ಈಗ ಬೇರಾವ ಪಕ್ಷವನ್ನೂ ವಹಿಸುವುದಿಲ್ಲ, ಬದಲಾಗಿ ತನ್ನದೇ ಪಕ್ಷವನ್ನು ವಹಿಸುತ್ತದೆ. ಸ್ವಂತ ಹಿತಾಸಕ್ತಿಗೇ ಆದ್ಯತೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಜೈಶಂಕರ್ ನೇತೃತ್ವದಲ್ಲಿ ಭಾರತವು ಇದನ್ನೊಂದು ಕಲೆಯನ್ನಾಗಿ ರೂಪಿಸಿದೆ.ಯಾರಿಗೂ ಸೇರದೆ, ಪ್ರತಿಯೊಬ್ಬರಲ್ಲೂ ಮಾತುಕತೆ ನಡೆಸುವ, ಸಖ್ಯ ಬೆಳೆಸುವ ಕಲೆಗಾರಿಕೆ ಸಿದ್ಧಿಸಿಕೊಂಡಿದೆ. ಈಗ ಭಾರತವು ಇಸ್ರೇಲಿಗೆ ಹಿಂದಿಗಿಂತ ಹೆಚ್ಚು ಆಪ್ತವಾಗಿದೆ. ಡೊನಾಲ್ಡ್ ಟ್ರಂಪ್‌ರ ವಿಧ್ವಂಸಕ ಕಾರ್ಯಶೈಲಿಯ ಹೊರತಾಗಿಯೂ ಅಮೆರಿಕದೊಂದಿಗಿನ ಸಂಬಂಧ ಗಟ್ಟಿಗೊಂಡಿದೆ. ಇದೇವೇಳೆ ಇರಾನ್ ಕೂಡಾ ಭಾರತವನ್ನು ವಿರೋಧಿ ಎಂದು ಪರಿಗಣಿಸುತ್ತಿಲ್ಲ, ಬದಲಾಗಿ ವಿಶ್ವಾಸಾರ್ಹ ದೇಶವೆಂದು ಭಾವಿಸುತ್ತಿದೆ. ಭಾರತದ ಈ ನೀತಿಯು ಗೋಡೆ ಮೇಲೆ ಕುಳಿತಂತಲ್ಲ, ಇದು ವ್ಯೂಹಾತ್ಮಕ ಸಾರ್ವಭೌಮತೆ.

ಟೀಕಾಕಾರರು, ಅದರಲ್ಲಿ ಮುಖ್ಯವಾಗಿ ಪಾಶ್ಚಿಮಾತ್ಯರು ಭಾರತದ ಈ ವಿದೇಶಾಂಗ ನೀತಿಯನ್ನು ತಪ್ಪರ್ಥಮಾಡಿಕೊಂಡಿದ್ದಾರೆ. ಅವರ ಪ್ರಕಾರ ಜಗತ್ತು ಎರಡೇ ವರ್ಗಗಳಾಗಿ ವಿಭಜನೆಗೊಂಡಿದೆ. ಒಂದೋ ಮಿತ್ರನಾಗಿರಬೇಕು ಇಲ್ಲವೇ ವೈರಿಯಾಗಿರಬೇಕು. ಭಾರತವು ಇಂತಹ ನೀತಿಯನ್ನು ತಿರಸ್ಕರಿಸಿದೆ. ಮೈತ್ರಿ ಎಂದರೆ ಶರಣಾಗತಿಯಲ್ಲ, ಸ್ವಂತ ಹಿತಾಸಕ್ತಿ ಕಾಪಾಡಿಕೊಳ್ಳುವುದು ಮುಖ್ಯ ಎಂದು ಭಾವಿಸಿದೆ.

ಇಂತಹ ನೀತಿಗೂ ಸ್ವಲ್ಪ ಮಟ್ಟಿನ ಬೆಲೆ ತೆರಬೇಕಾಗುತ್ತದೆ ಎಂಬುದು ನಿಜ. ತನ್ನ ವ್ಯೂಹಾತ್ಮಕ ಸಾರ್ವಭೌಮತೆಯನ್ನು ಬಿಟ್ಟುಕೊಡಲು ಒಪ್ಪದ ದೇಶವು ಏಕಾಂಗಿಯಾಗಿ ನಿಲ್ಲಬೇಕಾಗುತ್ತದೆ. ಭಾರತವು ಇಂತಹ ಪರಿಸ್ಥಿತಿಯನ್ನು ಹಿಂದೆ ಎದುರಿಸಿದೆ. ಉಕ್ರೇನ್ ಸಮರದ ವೇಳೆ ಮತ್ತು ಆಪರೇಷನ್ ಸಿಂದೂರ್‌ನ ವೇಳೆ ಭಾರತಕ್ಕೆ ಇಂತಹ ಪರಿಸ್ಥಿತಿಯೊದಗಿದೆ. ಭಾರತವು ಇದನ್ನು ಎದುರಿಸಲು ಸಜ್ಜಾಗಿದೆ. ಹಾಗಾಗಿ 'ಬಹುಮೈತ್ರಿ'ಯ ನೀತಿಯು ತಾಳ್ಮೆ ಮತ್ತು ಅಲ್ಪಕಾಲೀನ ಹಾನಿ ಮತ್ತು ನೋವನ್ನು ಅನುಭವಿಸುವ ಸಹನೆಯನ್ನು ಬೇಡುತ್ತದೆ. ಆದರೆ ಇದರಿಂದ ದೀರ್ಘಾವಧಿಯಲ್ಲಿ ದೊಡ್ಡ ಲಾಭವಿದೆ. ಇದೇವೇಳೆ, ಅಮೆರಿಕವು ಜಾಗತಿಕ ಪಾಲುದಾರಿಕೆಯ ಕುರಿತಾದ ತನ್ನ ನಿಲುವನ್ನು ಬದಲಿಸಬೇಕಾದ ಅಗತ್ಯವಿದೆ. 'ಒಂದೋ ನೀವು ನಮ್ಮೊಂದಿಗಿರಬೇಕು, ತಪ್ಪಿದರೆ ನೀವು ನಮ್ಮ ವೈರಿ' ಎಂಬ ಹಳೆಯ ಸಿದ್ಧಾಂತ ಇನ್ನು ಕೆಲಸಕ್ಕೆ ಬಾರದು. ಮುಖ್ಯವಾಗಿ ಭಾರತಕ್ಕೆ ಸಂಬಂಧಿಸಿ ಇಂಥ ನಿಲುವು ಫಲ ನೀಡದು ಎಂಬುದನ್ನು ಅರಿಯಬೇಕು.

ರಾಜತಾಂತ್ರಿಕತೆಗೆ ಸಂಬಂಧಿಸಿ ಭಾರತದ ವಸ್ತುನಿಷ್ಠ ನಿಲುವು ಪಾಶ್ಚಿಮಾತ್ಯ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಅಮೆರಿಕಕ್ಕೆ ಅಸಹನೆ ಸೃಷ್ಟಿಸುವುದು ಸಹಜ. ಅದೊಂದು ಅನಿವಾರ್ಯ ಪರಿಸ್ಥಿತಿ. ಅಮೆರಿಕದಲ್ಲಿರುವ ಕೆಲವು ನೀತಿ ನಿರೂಪಕರು ಭಾರತ ಕೂಡಾ ಚೀನಾದಂತೆಯೇ ಬೆಳೆಯುತ್ತಿರುವ ರಾಷ್ಟ್ರವಾಗಿದ್ದು, ಅದನ್ನು ನಿಯಂತ್ರಿಸಬೇಕು ಎಂದು ಭಾವಿಸುತ್ತಿದ್ದಾರೆ. ಅವರು ಅರ್ಥ ಮಾಡಿಕೊಳ್ಳಬೇಕಾದುದೆಂದರೆ, ಭಾರತದ ಪ್ರಗತಿಗೆ ಅಮೆರಿಕದ ಸಮ್ಮತಿಯೇನೂ ಬೇಕಾಗಿಲ್ಲ. ಅಮೆರಿಕದ ನೆರವು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ, ಭಾರತವಂತೂ ಬೆಳೆಯುತ್ತಲೇ ಸಾಗುತ್ತದೆ. ಇದು ಪಾಶ್ಚಿಮಾತ್ಯ ಕೇಂದ್ರಿತ ವ್ಯವಸ್ಥೆಯನ್ನು ಬಲಪಡಿಸುವುದೇ ಇಲ್ಲವೇ ಎಂಬುದೇ ಮುಖ್ಯ ಪ್ರಶ್ನೆ. ಚೀನಾ ಕೇಂದ್ರಿತ ನಿರಂಕುಶ ವ್ಯವಸ್ಥೆಗಿಂತ ಭಾರತದ್ದು ಒಳ್ಳೆಯ ವ್ಯವಸ್ಥೆ ಎಂಬುದನ್ನು ಅಮೆರಿಕ ಒಪ್ಪಿಕೊಳ್ಳಬೇಕು. ಚೀನಾವನ್ನು ನಿಯಂತ್ರಿಸುವುದು ಅದರ ಮುಖ್ಯ ಉದ್ದೇಶವಾಗಿದ್ದರೆ ಅದು ಭಾರತದ ಮುಖಾಂತರವೇ ಆಗಬೇಕಾಗುತ್ತದೆ. ಹಾಗೆಂದು ಭಾರತವನ್ನು ತನ್ನ ಅಧೀನ ರಾಷ್ಟ್ರವಾಗಿ ಪರಿಗಣಿಸಿ ಅಲ್ಲ, ಭಾರತಕ್ಕೆ ಒಂದು ಸಾರ್ವಭೌಮ ರಾಷ್ಟ್ರವೆಂಬ ಗೌರವವನ್ನು ನೀಡಿ ಅದನ್ನು ಸಾಧಿಸಬೇಕು.

ಇರಾನ್ ಯುದ್ಧವು ಮತ್ತೂ ಒಂದು ವಿಷಯ ನಿಚ್ಚಳಗೊಳಿಸಿದೆ. ಭಾರತವು ಬೆಳೆಯುತ್ತಿರುವುದು ಇತರ ದೇಶಗಳನ್ನು ಅಸ್ಥಿರಗೊಳಿಸಲಲ್ಲ, ಬದಲಾಗಿ ಸ್ಥಿರತೆಯ ಶಕ್ತಿಯಾಗಿ ಭಾರತವು ಕಾರ್ಯನಿರ್ವಹಿಸುತ್ತಿದೆ. ಈ ಸತ್ಯವನ್ನು ಎಲ್ಲರೂ ಅರಿತುಕೊಳ್ಳಬೇಕು.

ಬಹುಪಕ್ಷೀಯ ರಾಜತಾಂತ್ರಿಕ ತಂತ್ರವನ್ನು ಭಾರತವು ಸಮರ್ಥವಾಗಿ ನಿಭಾಯಿಸಿದೆ. ಬಲಪ್ರಯೋಗ, ಆಕ್ರಮಣ ಮುಂತಾದ ಮಾನದಂಡದಿಂದಲೇ ಒಂದು ರಾಷ್ಟ್ರದ ಜಾಗತಿಕ ಪ್ರಗತಿಯನ್ನು ಅಳೆಯುವ ಈ ಕಾಲಮಾನದಲ್ಲಿ ಭಾರತವು ಯಾವುದೇ ದೇಶವನ್ನು ಅಸ್ಥಿರಗೊಳಿಸದೆ, ಯಾರ ಮೇಲೂ ದಾಳಿ ನಡೆಸದೆ, ಯಾವುದೇ ದೇಶವನ್ನು ಲೂಟಿ ಮಾಡದೆ ಪ್ರಗತಿಯತ್ತ ಸಾಗುತ್ತಿದೆ. ಇದು ಭಾರತದ ವಿಶೇಷತೆ.

ಭಾರತದ ರಾಜತಾಂತ್ರಿಕತೆಯು ಅಪ್ಪಟ 'ಭಾರತೀಯತೆ'ಯನ್ನು ಒಳಗೊಂಡಿರುವುದು ಕೊಲ್ಲಿ ಸಮರದಿಂದ ಸ್ಪಷ್ಟವಾಗಿದೆ. ವಿಭಜಿತ ಜಗತ್ತಿನಲ್ಲಿ ಯಾವುದೇ ಒಂದು ಪಕ್ಷ ವಹಿಸಲು ಭಾರತ ನಿರಾಕರಿಸಿದೆ. ಇದು ಪ್ರಾಯೋಗಿಕ ನೀತಿ, ಆದರೆ ನೈತಿಕತೆಯನ್ನು ಉಲ್ಲಂಘಿಸಿದ್ದಲ್ಲ, ಇದು ಜಗತ್ತಿಗೇ ಬೆಳಕು ತೋರುವಂತಹ ನೀತಿ.

ವಾಸಕ್ಕಿಟ್ಟುಕೊಳ್ಳಬಾರದವರು

ಅಕರ್ಮಶೀಲಂ ಚ ಮಹಾಶನಂ ಚ ಲೋಕದ್ವಿಷ್ಟಂ ಬಹುಮಾಯಾಂ ನೃಶಂಸಮ್।
ಅದೇಶಕಾಲಜ್ಞಮನಿಷ್ಟವೇಷಮ್ ಏತಾನ್ ಗೃಹೇ ನ ಪ್ರತಿವಾಸಯೇತ ॥

-ಹಿತೋಪದೇಶ

ದುಷ್ಕರ್ಮಿ, ಹೊಟ್ಟೆಬಾಕ, ಮಾನವದ್ವೇಷಿ, ಮಹಾಮಾಯಾವಿ, ಕ್ರೂರಿ, ದೇಶಕಾಲಗಳ ಅರಿವಿಲ್ಲದವನು, ಇಷ್ಟವಿಲ್ಲದವನು ಇಂಥವರನ್ನು ಮನೆಯಲ್ಲಿ ವಾಸಕ್ಕಿಟ್ಟುಕೊಳ್ಳಬಾರದು - ಎಂಬುದು ಶ್ಲೋಕಾರ್ಥ.

ಸನಾತನ ಭಾರತೀಯರ ಆಚಾರವಿಚಾರ, ನಡೆ-ನುಡಿ, ಹೃದಯ ವೈಶಾಲ್ಯ ಸಾಮಾನ್ಯ ಕಲ್ಪನೆಗೆ ನಿಲುಕದ್ದು. ಜಗತ್ತಿನ ಇತರೆಡೆ ಕಾಣದ ವೈಶಿಷ್ಟ್ಯವನ್ನು ಸನಾತನ ಪರಂಪರೆಯಲ್ಲಿ ಕಾಣುತ್ತೇವೆ. ನಮಗೆ ಆಶ್ರಯ ಕೇಳಿ ಬಂದವರಿಗೆ ನಿರಾಕರಿಸಿ ಗೊತ್ತಿಲ್ಲ, ಹಸಿದವರೊಡನೆ ಹಂಚಿ ತಿನ್ನುವುದನ್ನು ಸನಾತನ ಧರ್ಮವೇ ಕಲಿಸಿದೆ. 'ಅತಿಥಿ ದೇವೋ ಭವ' ಎಂದು ನಂಬಿ ಮನೆಗೆ ಬಂದವರನ್ನು ಗೌರವಾದರಗಳಿಂದ ಸತ್ಕರಿಸುವ ಪರಂಪರೆಯ ಪಾಠ ನಮಗಿದೆ. ಅತಿಥಿ ಎಂದರೆ ಹೇಳದೇ ಕೇಳದೇ ಬರುವವನು.



ಪರಿಚಯವಿಲ್ಲದಿರಲೂಬಹುದು. ಅಪರಿಚಿತರಿಗೂ ಅಶನ, ವಸನ, ವಸತಿ ಕೊಟ್ಟು ಸತ್ಕರಿಸುವುದು ನಮ್ಮ ಜಾಯಮಾನ. ಇದು ಮಾನವತ್ವದ ಶ್ರೇಷ್ಠ ಪರಿಕಲ್ಪನೆಯೆನಿಸಿದರೂ ಬಲ್ಲವರು ಒಂದಿಷ್ಟು ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಮನೆಯಲ್ಲಿ ಇತರರು ನಿಲ್ಲುವುದಕ್ಕೆ ಅವಕಾಶ ಕಲ್ಪಿಸುವುದು ಮಾನವತ್ವದ ಧರ್ಮ ಮುಖ್ಯವೆನಿಸಿದರೂ, ಕೆಲವರಿಗೆ ಅವಕಾಶ ಕಲ್ಪಿಸಬಾರದು ಎಂಬ ನಿಯಮವಿದೆ. ಯಾರನ್ನೆಲ್ಲ ಮನೆಯಲ್ಲಿ ವಾಸಕ್ಕೆ ಇಟ್ಟುಕೊಳ್ಳಬಾರದು ಎಂಬುದನ್ನು ಪ್ರಕೃತ ಶ್ಲೋಕದಲ್ಲಿ ನಿರೂಪಿಸಲಾಗಿದೆ. ದುಷ್ಕರ್ಮಿಗೆ ಅವಕಾಶ ಕಲ್ಪಿಸಬಾರದು. ಮೊದಲೇ ದುಷ್ಕರ್ಮಿ. ಯಾವ ಬಗೆಯ ಕೆಡುಕನ್ನೆಸಗುವುದಕ್ಕೂ ಹೇಸುವುದಿಲ್ಲ, ಇಂಥವನಿಂದ ಕೇಡು ತಪ್ಪಿದ್ದಲ್ಲ, ಮನೆಗೆ ಮಾರಿ ಹೊಕ್ಕಂತಾಗುವುದರಿಂದ ಆಶ್ರಯವನ್ನು ನೀಡಬಾರದು. ವಿದೇಶಿ ನುಸುಳುಕೋರರು ನಮ್ಮ ದೇಶದಲ್ಲಿ ಎಂತೆಂತಹ ಅನ್ಯಾಯವೆಸಗುತ್ತಿದ್ದಾರೆ ಎಂಬುದನ್ನು ಗಮನಿಸಿದಾಗ ಈ ಹೇಳಿಕೆ ಅರ್ಥವಾಗುತ್ತದೆ.

ಹೊಟ್ಟೆಬಾಕನನ್ನು ಮನೆಯೊಳಗೆ ಸೇರಿಸಬಾರದು. ಇವನಿಂದಾಗಿ ಇತರರು ಉಪವಾಸ ಬೀಳಬೇಕಾದೀತು. ಅವನು ತಿನ್ನುವ ಪರಿ ಮನೆಯನ್ನೇ ಮಸಣ ಮಾಡುವ ಸಾಧ್ಯತೆಯಿರುವುದರಿಂದ ಇಂಥವರಿಗೆ ಅವಕಾಶವಿರಬಾರದು. ಮಾನವದ್ವೇಷಿಗೆ ಆಶ್ರಯವಿತ್ತರೆ ಅನಾಹುತ ತಪ್ಪಿದ್ದಲ್ಲ, ಆಶ್ರಯ ಕೊಟ್ಟವರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿಬರಬಹುದು. ಆದ್ದರಿಂದ ಇವರನ್ನು ದೂರವಿರಿಸಬೇಕು.

ಮಹಾಮೋಸಗಾರ, ವಂಚಕ, ಕ್ರೂರಿ ಇವರಿಗಂತೂ ಆಶ್ರಯ ಕಲ್ಪಿಸಬಾರದು. ಇವರಿಂದ ಅಪಾಯವೆಂದೂ ತಪ್ಪಿದ್ದಲ್ಲ, ಇಂದಲ್ಲದಿದ್ದರೆ ನಾಳೆಯಾದರೂ ವಂಚಿಸಿ ಪರಾರಿಯಾಗುತ್ತಾರೆ. ಕೃತಜ್ಞತೆಯ ಗಂಧವಿಲ್ಲದ ಇಂಥವರಿಗೆ ಆಶ್ರಯವನ್ನು ನಿರಾಕರಿಸಬೇಕು. ದೇಶ-ಕಾಲಗಳ ಅರಿವಿಲ್ಲದವನಿಗೆ ವಾಸಕ್ಕೆ ಅವಕಾಶ ಕಲ್ಪಿಸಿದರೆ ಮನೆಯ ವ್ಯವಹಾರವೇ ಅಸ್ತವ್ಯಸ್ತವಾದೀತು. ಮನೆಯೇ ಕುರುಕ್ಷೇತ್ರವಾದೀತು.

ಕೊನೆಯದಾಗಿ ನಮಗೆ ಇಷ್ಟವಿಲ್ಲದವನಿಗೆ ಆಶ್ರಯ ನೀಡಬಾರದು. ಒಂದೊಮ್ಮೆ ಆಶ್ರಯವಿತ್ತರೆ ಮನೆಯ ನೆಮ್ಮದಿ ಹಾಳಾಗುತ್ತದೆ. ಇಷ್ಟವಿಲ್ಲದಿದ್ದರೂ ಅವನ ವ್ಯವಹಾರವನ್ನು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಇದರಿಂದ ಮನೆಯ ವಾತಾವರಣವೇ ಕಲುಷಿತಗೊಳ್ಳುತ್ತದೆ. ಇಂಥವರಿಗೆ ಆಶ್ರಯವಿತ್ತು ನೆಮ್ಮದಿಯ ಬದುಕನ್ನು ಹಾಳು ಮಾಡಿಕೊಳ್ಳುವುದರ ಬದಲು ಆಶ್ರಯ ನೀಡದಿರುವುದೇ ಒಳ್ಳೆಯದು.

ಆಸಿಯಾ ಅಂದ್ರಾಬಿ- ಈಕೆ ಕಾಶ್ಮೀರಿಗರಿಗೇ ಶತ್ರು!

ಕಾಶ್ಮೀರದ ಜನತೆಯ ಅತ್ಯಂತ ದೊಡ್ಡ ವೈರಿಗಳೆಂದರೆ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರೇ ಆಗಿದ್ದಾರೆ.

▸ **ಒಮರ್ ಘಾಜಿ**

'ಅಸಹಾಯಕ ವೃದ್ಧೆಯಾದ, ಮಕ್ಕಳ ತಾಯಿಯಾಗಿರುವ, ಅರ್ವ ಮಹಿಳೆಯಾದ 66ರ ಹರೆಯದ ಆಸಿಯಾ ಅಂದ್ರಾಬಿಯನ್ನು ಕಠೋರ ಕಾನೂನುಬಾಹಿರ ಚಟುವಟಿಕೆ ನಿರ್ಬಂಧ ಕಾನೂನಿನಡಿಯಲ್ಲಿ ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗಿದೆ. ಕಾಶ್ಮೀರದ ಜನರ ಪರವಾಗಿ ಧ್ವನಿಯೆತ್ತಿದ್ದಕ್ಕಾಗಿ ಆಕೆಗೆ ಈ ಶಿಕ್ಷೆ ವಿಧಿಸಲಾಗಿದೆ.' ಹಾಗೆಂದು ಬಿಂಬಿಸುತ್ತಿವೆ ಪಾಕಿಸ್ತಾನಿ ಮಾಧ್ಯಮಗಳು. ಜತೆಗೇ ಅವರಿಂದ ಹಣ ಪಡೆದ ಭಾರತದ ಕೆಲವರು, ಇನ್ನು ಕೆಲವು ಲಿಬರಲ್‌ಗಳು, ಹಲವಾರು ಅಂತಾರಾಷ್ಟ್ರೀಯ ಮಾಧ್ಯಮಗಳೂ ಅದೇ ರಾಗ ಹಾಡುತ್ತಿವೆ. ಅಂದ್ರಾಬಿಗೆ ನ್ಯಾಯಾಲಯವು ಇತ್ತೀಚೆಗೆ ಜೀವಾವಧಿ ಶಿಕ್ಷೆ ಪ್ರಕಟಿಸಿದ ಬಳಿಕ ಇವರೆಲ್ಲ ಇಂತಹ ಸಂಕಥನ(ನರೇಟಿವ್)ವನ್ನು ತೇಲಿಬಿಡುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರ ಕಾರ್ಯಚಟುವಟಿಕೆಗಳನ್ನು ಪರಾಮರ್ಶಿಸಿದರೆ ಆಕೆಗೆ ನೀಡಲಾಗಿರುವ ಶಿಕ್ಷೆಯು ಕಡಿಮೆಯೆಂದೇ ತೋರಿಬರುತ್ತದೆ.



ಆಕೆಯ ಪುತ್ರ ಇತ್ತೀಚೆಗೆ ಮಾಧ್ಯಮದಲ್ಲಿ ಲೇಖನವೊಂದನ್ನು ಬರೆದು ಭಯೋತ್ಪಾದನೆಗೆ ಸಂಬಂಧಿಸಿ ಬಂಧಿಸಲ್ಪಟ್ಟ ತನ್ನ ತಂದೆ, ತಾಯಿ ಇಬ್ಬರೂ ಸರಕಾರದ ದೌರ್ಜನ್ಯದ ಬಲಿಪಶುಗಳಾಗಿದ್ದಾರೆ ಎಂದು ಬಣ್ಣಿಸಿದ್ದಾನೆ. ಇದು ಕ್ರೂರ ಸಿದ್ಧಾಂತವಾದಿಗಳನ್ನು ಬಲಿಪಶುಗಳೆಂಬಂತೆ ಬಿಂಬಿಸುವ ಜಾಗತಿಕ ಸಂಚಿನ ಒಂದು ಭಾಗವಾಗಿದೆ. ಆಸಿಯಾ ಅಂದ್ರಾಬಿ, ಹಾಗೂ ಆಕೆಯೊಂದಿಗೆ ಶಿಕ್ಷೆಗೆ ಗುರಿಯಾಗಿರುವ ಸೋಫಿ ಫೆಹ್ಮೀದಾ ಮತ್ತು ನಹಿದಾ ನಸ್ರೀನ್ ಅವರನ್ನೆಲ್ಲಾ ಅಮಾಯಕರೆಂಬಂತೆ ಬಿಂಬಿಸಲಾಗುತ್ತಿದೆ.

ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಅಸಹಾಯಕ, ಅಮಾಯಕ ಮಹಿಳೆ ಎಂದು ಬಿಂಬಿಸಲ್ಪಡುವ ಆಸಿಯಾ ಅಂದ್ರಾಬಿ 'ದುಖ್ತರನ್ -ಇ- ಮಿಲ್ಲತ್' ಎಂಬ ಮಹಿಳಾ ಉಗ್ರಗಾಮಿ ಸಂಘಟನೆಯನ್ನು ಕಟ್ಟಿದವಳು. ಈ ಸಂಘಟನೆಯು ಜಿಹಾದ್‌ನ್ನು ಪ್ರತಿಪಾದಿಸುತ್ತಾ ಕಾಶ್ಮೀರದಲ್ಲಿ ಇಸ್ಲಾಮಿಕ್ ಕಾನೂನನ್ನು ಜಾರಿಗೊಳಿಸಬೇಕು ಹಾಗೂ ಕಾಶ್ಮೀರವನ್ನು ಪಾಕಿಸ್ತಾನದೊಂದಿಗೆ ವಿಲೀನಗೊಳಿಸಬೇಕೆಂದು ಪ್ರತಿಪಾದಿಸುತ್ತಿತ್ತು. ಈ ಸಂಘಟನೆಯು ಹಿಜ್‌ಬುಲ್ಲಾ, ಮುಜಾಹಿದ್‌ನೊಂದಿಗೆ ಸಹಕರಿಸಿ ಕಾರ್ಯಾಚರಿಸುತ್ತಿತ್ತು. ಆಸಿಯಾ ಅಂದ್ರಾಬಿ ನಾಯಕತ್ವದಲ್ಲಿ 1987ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಘಟನೆಯು ತನ್ನ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದುದಷ್ಟೇ ಅಲ್ಲದೆ ಅದರ ಕಾರ್ಯಾಚರಣೆಗೂ ಕಾರ್ಯಶೀಲವಾಗಿತ್ತು. 1990ರ ದಶಕದಲ್ಲಿ ಕಾಶ್ಮೀರದಲ್ಲಿ ಉಗ್ರಗಾಮಿ ಚಟುವಟಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಈಕೆಯ ಸಂಘಟನೆಯು ಕಾಶ್ಮೀರಿ ಮಹಿಳೆಯರಿಗೆ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುವಂತೆ ಆದೇಶಿಸಿತ್ತು. ಸದಾ ಹಿಜಾಬ್ ಧರಿಸುವಂತೆ, ಅದಕ್ಕೆ ತಪ್ಪಿದವರಿಗೆ ಶಿಕ್ಷೆ ನೀಡುವುದಾಗಿ ಅದು ಹೇಳಿತ್ತು. ಅದರಂತೆ ಹಿಜಾಬ್ ಧರಿಸದ ಕೆಲ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲಾಗಿತ್ತು. ಕೆಲವರ ಮೇಲೆ ಆ್ಯಸಿಡ್ ದಾಳಿಯೂ ನಡೆದಿತ್ತು. ಇವಷ್ಟೇ ಆಕೆಗೆ ಜೀವಾವಧಿ ಶಿಕ್ಷೆ ನೀಡಲು ಸಾಕಾಗುತ್ತದೆ. ಆದರೆ ಕಥೆ ಇನ್ನೂ ಇದೆ.

ಆಸಿಯಾ ಅಂದ್ರಾಬಿ ಲಷ್ಕರ್-ಇ-ತೊಯ್ಬಾದ ಸ್ಥಾಪಕ ಹಫೀಜ್ ಸಯೀದ್ ಜತೆ ನಿಕಟ ಸಂಪರ್ಕ ಹೊಂದಿದ್ದು ಇದು ಆಕೆಯ ಸೈದ್ಧಾಂತಿಕ ಮತ್ತು ಕಾರ್ಯಾಚರಣಾ ಶೈಲಿಯ ಮೇಲೆ ಪ್ರಭಾವ ಬೀರಿತ್ತು. ಆಕೆ ಹಫೀಜ್ ಸಯೀದ್ ಜತೆ ಸಂಪರ್ಕ ಹೊಂದಿದ್ದುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಳು. ಹಫೀಜ್‌ನ ಚಿಂತನೆಗಳನ್ನು ತಾನು ಪ್ರತಿಪಾದಿಸುತ್ತಾ ಭಾರತ ವಿರೋಧಿ ನಿಲುವುಗಳನ್ನು ಬಹಿರಂಗವಾಗಿ ಪ್ರಕಟಿಸುತ್ತಿದ್ದಳು. 2015ರ ಆಗಸ್ಟ್‌ನಲ್ಲಿ ಹಫೀಜ್ ಸಯೀದ್ ಪಾಕಿಸ್ತಾನದ ಮುಲ್ತಾನ್‌ನಲ್ಲಿ ಆಯೋಜಿಸಿದ್ದ ರ‍್ಯಾಲಿಯಲ್ಲಿ ಆಸಿಯಾ ಅಂದ್ರಾಬಿ ವಿಡಿಯೋ ಕರೆ ಮೂಲಕ ಭಾಷಣ ಮಾಡಿದ್ದಳು. ಆ ರ‍್ಯಾಲಿಯಲ್ಲಿ ಭಾರತವನ್ನು ವಿಭಜಿಸಲು ಕರೆ ನೀಡಲಾಗಿತ್ತು. ಇದನ್ನು ಆಸಿಯಾ ಅಂದ್ರಾಬಿ ಕೂಡಾ ಬೆಂಬಲಿಸಿದ್ದಲ್ಲದೆ ಭಾರತದ ಮೇಲೆ ಯುದ್ಧ ಸಾರುವಂತೆ ಕರೆ ನೀಡಿ ಅದಕ್ಕೆ ಪಾಕಿಸ್ತಾನದ ನೆರವನ್ನು ಕೋರಿದ್ದಳು. ಹಫೀಜ್ ಸಯೀದ್ ಆಸಿಯಾಳನ್ನು 'ಪ್ರೀತಿಯ ತಂಗಿ' ಎಂದು ಕರೆಯುತ್ತಿದ್ದ.

ಇನ್ನೂ ಹಲವು ಬಾರಿ ಆಸಿಯಾ ಅಂದ್ರಾಬಿ ತನ್ನ ವರ್ತನೆಗಳ ಮೂಲಕ ಭಾರತ ವಿರೋಧಿ ನಿಲುವನ್ನು ಪ್ರಕಟಿಸಿದ್ದಳು. ಶ್ರೀನಗರದಲ್ಲಿ ಪಾಕಿಸ್ತಾನದ ಸ್ವಾತಂತ್ರ್ಯ ದಿನವನ್ನು ಆಚರಿಸಿದ್ದಲ್ಲದೆ ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದಳು.ಆಕೆಯ ನಾಯಕತ್ವದಲ್ಲಿ 'ದುಖ್ತರನ್-ಇ- ಮಿಲ್ಲತ್' ಸಂಘಟನೆಯು ಕಾಶ್ಮೀರಿಗರ ಸಂಸ್ಕೃತಿ ಮತ್ತು ದೈನಂದಿನ ಬದುಕಿನ ಮೇಲೂ ಹಿಡಿತ ಹೊಂದುವ ಪ್ರಯತ್ನ ನಡೆಸಿತ್ತು. ಕಾಶ್ಮೀರದ ಮೊತ್ತಮೊದಲ ಹುಡುಗಿಯರ ರಾಕ್ ಬ್ಯಾಂಡ್ ಮೇಲೆ ದಾಳಿ ನಡೆಸಲಾಗಿತ್ತು. ಕಾಶ್ಮೀರದಲ್ಲಿ ಕಲೋಪಾಸನೆಯನ್ನು ವಿರೋಧಿಸಿ ಬೆದರಿಕೆಗಳನ್ನು ಹಾಕಲಾಗಿತ್ತು.ಸೇನೆಯು ಸಂಘಟಿಸಿದ್ದ ಪ್ರವಾಸದಲ್ಲಿ ಕಾಶ್ಮೀರದ ಹುಡುಗಿಯರು ಪಾಲ್ಗೊಂಡುದಕ್ಕಾಗಿ ಅಂತವರ ಕುಟುಂಬಕ್ಕೆ ಬೆದರಿಕೆ ಒಡ್ಡಲಾಗಿತ್ತು. ಯುವಜನಾಂಗದ ಸಹಜ ಆಚರಣೆಗಳಾದ ಹೊಸ ವರ್ಷಾಚರಣೆ, ನೃತ್ಯ, ಗಾಯನ ಮುಂತಾದವುಗಳಿಗೆ ಈ ಸಂಘಟನೆ ಬೆದರಿಕೆಯೊಡ್ಡಿತ್ತು.

ಇದೆಲ್ಲವೂ ಕಾಶ್ಮೀರದ ಹಕ್ಕುಗಳಿಗಾಗಿ ಅಥವಾ ಘನತೆಗಾಗಿ ನಡೆದ ಹೋರಾಟವಲ್ಲ, ಅದಕ್ಕಿಂತಲೂ ಇಸ್ಲಾಮಿಕ್ ಕಠಿಣ ಕಾನೂನುಗಳನ್ನು ಜನರ ಮೇಲೆ ಹೇರುವ ಪ್ರಯತ್ನವಾಗಿತ್ತು.

ಆಸಿಯಾ ಅಂದ್ರಾಬಿಯ ಬಂಧನ ಮತ್ತು ಆಕೆಗೆ ಜೈಲು ಶಿಕ್ಷೆ ವಿಧಿಸಿರುವುದನ್ನು ಆಕೆಯ ಕಾರ್ಯ ಚಟುವಟಿಕೆಗಳಿಂದ ಪ್ರತ್ಯೇಕವಾಗಿ ನೋಡುವುದು ತಪ್ಪು. ಆಕೆ ನಡೆಸಿದ ಪ್ರತ್ಯೇಕತಾವಾದಿ ಚಳವಳಿ, ಉಗ್ರವಾದಿ ಪ್ರಚಾರ ಮತ್ತು ಕುಖ್ಯಾತ ಭಯೋತ್ಪಾದಕರೊಂದಿಗಿನ ಆಕೆಯ ಸಖ್ಯ ಮುಂತಾದವನ್ನು ಕಡೆಗಣಿಸಬಾರದು. ಅದನ್ನೆಲ್ಲ ಬಿಟ್ಟು ಆಕೆಯನ್ನು ಬಲಿಪಶು ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ.ಆಕೆಯ ವೈಯಕ್ತಿಕ ಬದುಕು ಕೂಡಾ ಉಗ್ರವಾದಿತ್ವವನ್ನೇ ಪ್ರತಿಬಿಂಬಿಸುತ್ತದೆ. ಆಕೆ ವಿವಾಹವಾದುದು ಹಿಜ್‌ಬುಲ್ ಮುಜಾಹಿದ್ದೀನ್‌ನ ಮುಖಂಡರಲ್ಲೊಬ್ಬನಾದ ಆಶಿಕ್ ಹುಸೇನ್ ಫಕ್ತು ಎಂಬಾತನನ್ನು. ಆತ ಮಾನವ ಹಕ್ಕುಗಳ ಪ್ರಮುಖ ಕಾರ್ಯಕರ್ತನೊಬ್ಬನನ್ನು ಹತ್ಯೆಗೈದ ಆರೋಪದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ. ಅಂದ್ರಾಬಿ ಪಾಕಿಸ್ತಾನದ ಸೇನೆಯೊಂದಿಗೆ ಕೂಡಾ ಕೌಟುಂಬಿಕ ಸಂಬಂಧವನ್ನು ಹೊಂದಿದ್ದಾಳೆ. ಆಕೆಯ ಸಂಬಂಧಿಕರು ಪಾಕಿಸ್ತಾನದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗಾಗಿ ಆಕೆಯದು ಕೇವಲ ಕಾಶ್ಮೀರ ಪರ ಧ್ವನಿ ಎಂದು ಪರಿಗಣಿಸಲಾಗುವುದಿಲ್ಲ, ಆಕೆ ಪಾಕಿಸ್ತಾನದ ಕಾರ್ಯಸೂಚಿಯಂತೆಯೂ ಕಾರ್ಯಾಚರಿಸುತ್ತಿದ್ದಳು.

ಹಾಗಾಗಿ '66ರ ಹರೆಯದ ವಯೋವೃದ್ಧೆ , ಮಾತೆ, ಮಹಿಳೆ' ಎಂಬುದಾಗಿ ಸಂಬೋಧಿಸುತ್ತಾ ಆಕೆಯ ಕುರಿತಂತೆ ಕರುಣೆ ಉಕ್ಕುವ ರೀತಿಯಲ್ಲಿ ವರ್ಣಿಸುವುದಕ್ಕೆ ಏನನ್ನಬೇಕು? ಮಹಿಳೆಯರು ಕಡ್ಡಾಯವಾಗಿ ಹಿಜಾಬ್ ಧರಿಸಲೇಬೇಕು ಮತ್ತು ಅದಕ್ಕೆ ತಪ್ಪಿದಲ್ಲಿ ಶಿಕ್ಷೆ ಎದುರಿಸಬೇಕು ಎಂದು ಆಕೆ ಪ್ರತಿಪಾದಿಸುವಾಗ ಮಹಿಳೆಯಾಗಿರಲಿಲ್ಲವೆ? ಕಾಶ್ಮೀರಿ ಯುವಕರನ್ನು ಉಗ್ರಗಾಮಿ ಚಟುವಟಿಕೆಗೆ ಪ್ರೇರೇಪಿಸುತ್ತಿರುವಾಗ ಆಕೆ ಒಬ್ಬ ತಾಯಿಯಾಗಿರಲಿಲ್ಲವೆ? ಭಾರತ ಸರಕಾರದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಕರೆ ನೀಡುವಾಗ ಆಕೆ ವೃದ್ಧೆಯಾಗಿರಲಿಲ್ಲವೆ? ಹೀಗಿರುವಾಗ ಈಗ ಆಕೆಯ ಪುತ್ರನೂ ಸೇರಿದಂತೆ ಹಲವರು ಆಕೆಯನ್ನು ಅಮಾಯಕ, ಅಸಹಾಯಕ ಮತ್ತು ವೃದ್ಧ ಮಾತೆ, ಮಹಿಳೆ ಎಂಬಂತೆ ಬಿಂಬಿಸಿ ಅನುಕಂಪ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. 2010ರಿಂದ 2019ರ ಅವಧಿಯಲ್ಲಿ ಬಹಳಷ್ಟು ಕಾಶ್ಮೀರಿ ಯುವಕರು ಸರಕಾರ ವಿರೋಧಿ ಪ್ರತಿಭಟನೆಯಲ್ಲಿ ತೊಡಗಿಕೊಂಡರು. ಅವರಲ್ಲಿ ಹಲವರು ಮನೆಗೆ ಮರಳಲೇ ಇಲ್ಲ, ಅವರ ಕಥೆ ಅಥವಾ ಹೆಸರನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ, ಅವರ ಕುಟುಂಬದ ಗತಿ ಏನಾಯಿತು ಎಂಬ ಬಗ್ಗೆಯೂ ಹೇಳುವವರು ಇಲ್ಲ, ಆದರೆ ಆಸಿಯಾ ಅಂದ್ರಾಬಿಯ ಕುರಿತಂತೆ ಮಾತ್ರ ಇಷ್ಟೆಲ್ಲಾ ಬರೆಯಲಾಗುತ್ತದೆ.

ಕಾಶ್ಮೀರದ ಜನತೆಯ ಪರವಾಗಿ ಕರುಣೆ ತೋರುವುದು ಮತ್ತು ಆಸಿಯಾ ಅಂದ್ರಾಬಿಯನ್ನು ಬೆಂಬಲಿಸುವುದು ಎರಡೂ ವೈರುಧ್ಯ ವಿಷಯಗಳು. ಇವನ್ನು ತಾರ್ಕಿಕವಾಗಿ ಒಂದುಗೂಡಿಸಲಾಗುವುದಿಲ್ಲ, ಕಾಶ್ಮೀರದ ಜನತೆಯ ಅತ್ಯಂತ ದೊಡ್ಡ ವೈರಿಗಳೆಂದರೆ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರು. ಆಕೆ ಕೆಲವು ಪೀಳಿಗೆಗಳ ಕಾಶ್ಮೀರಿ ಯುವಕರ ಜೀವನವನ್ನು ಹಾಳುಗೆಡವಿದ್ದಾಳೆ. ಆಕೆಯನ್ನು ಬೆಂಬಲಿಸುವ ಎಲ್ಲರೂ ಕಟ್ಟಾ ಇಸ್ಲಾಮಿಕ್‌ವಾದಿಗಳಲ್ಲ, ಅವರಲ್ಲಿ ಬಹಳಷ್ಟು ಮಂದಿ ಸ್ವಾಯತ್ತತೆ, ಸ್ವಾತಂತ್ರ್ಯ ಎಂಬ ಘೋಷಣೆಯ ಹಿಂದೆ ಅಡಗಿಕೊಂಡ ಮೂರ್ಖರೂ ಇದ್ದಾರೆ. ಅವರೆಲ್ಲಾ ಸ್ವಾತಂತ್ರ್ಯ ಹಕ್ಕುಗಳನ್ನು ರಕ್ಷಿಸಲು ಯತ್ನಿಸುತ್ತಿರುವುದಲ್ಲ, ಅದಕ್ಕಿಂತಲೂ ಅವರು ಉಗ್ರವಾದಿ, ಮತೀಯವಾದಿ, ಸುಧಾರಣಾವಿರೋಧಿ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿದ್ದಾರೆ.

ಆಪ್‌ಗೆ ಅಪಥ್ಯವಾಗುತ್ತಿರುವ ರಾಘವ್ ಚಡ್ಡಾ

▸ **ಎಸ್. ಎನ್. ಭಟ್, ಸೈಪಂಗಲ್ಲು**



ಇಂದಿನ ಡಿಜಿಟಲ್ ಯುಗದಲ್ಲಿ, ನಮ್ಮ ಬದುಕು ಕೇವಲ ಭೌತಿಕ ಗಡಿಗಳಿಗೆ ಸೀಮಿತವಾಗಿಲ್ಲ, ನಾವು ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಬಳಸುವ ಸ್ಮಾರ್ಟ್‌ಫೋನ್‌ಗಳು, ಡೇಟಾ ಪ್ಯಾಕೇಜ್‌ಗಳು ಮತ್ತು ಸಾಮಾಜಿಕ ಜಾಲತಾಣಗಳು ನಮ್ಮ ಆಲೋಚನೆ ಹಾಗೂ ಆದಾಯದ ಮೇಲೆ ಅತಿಕ್ರಮಣ ಮಾಡುತ್ತಿವೆ. ಇಂತಹ ಸಂಕೀರ್ಣ ಸಂದರ್ಭದಲ್ಲಿ, ಸಂಸತ್ತಿನ ವೇದಿಕೆಯಲ್ಲಿ ತಂತ್ರಜ್ಞಾನ ಮತ್ತು ಸಾಮಾನ್ಯ ಜನರ ಹಕ್ಕುಗಳ ಬಗ್ಗೆ ಗಂಭೀರವಾಗಿ ದನಿ ಎತ್ತಿದವರು ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ. ರಾಜಕೀಯ ಮೇಲಾಟಗಳ ನಡುವೆಯೂ ಅವರು ಮಂಡಿಸಿದ ಡಿಜಿಟಲ್ ನ್ಯಾಯದ ಪರಿಕಲ್ಪನೆ ಭಾರತೀಯ ರಾಜಕಾರಣದಲ್ಲಿ ಹೊಸ ಸಂಚಲನ ಮೂಡಿಸಿದೆ.

ರಾಘವ್ ಚಡ್ಡಾ ಅವರು ಆಮ್ ಆದ್ಮಿ ಪಕ್ಷದ ಪ್ರಮುಖ ಯುವ ನಾಯಕರು ಮತ್ತು ಪ್ರಸ್ತುತ ಪಂಜಾಬ್ ರಾಜ್ಯವನ್ನು ಪ್ರತಿನಿಧಿಸುವ ರಾಜ್ಯಸಭಾ ಸದಸ್ಯರಾಗಿದ್ದಾರೆ. ವೃತ್ತಿಯಿಂದ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಇವರು, 2022ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ ಸಂಸತ್ತಿನ ಅತ್ಯಂತ ಕಿರಿಯ ಸದಸ್ಯರಲ್ಲಿ ಒಬ್ಬರೆಂಬ ಹೆಗ್ಗಳಿಕೆಗೆ ಪಾತ್ರರಾದರು. ಇದಕ್ಕೂ ಮೊದಲು ಅವರು ದೆಹಲಿಯ ರಾಜೇಂದ್ರ ನಗರ ಕ್ಷೇತ್ರದ ಶಾಸಕರಾಗಿ ಮತ್ತು ದೆಹಲಿ ಜಲ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸಂಸತ್ತಿನಲ್ಲಿ ಡಿಜಿಟಲ್ ಹಕ್ಕುಗಳು, ಡೇಟಾ ಗೌಪ್ಯತೆ ಮತ್ತು ಆರ್ಥಿಕ ಹೊಣೆಗಾರಿಕೆಯಂತಹ ಸಮಕಾಲೀನ ವಿಷಯಗಳ ಬಗ್ಗೆ ಧ್ವನಿ ಎತ್ತುತ್ತಾ ಬಂದಿದ್ದಾರೆ.

ರಾಘವ್ ಚಡ್ಡಾ ಅವರ ರಾಜಕೀಯ ನಡೆಗಳು ತೀವ್ರ ಚರ್ಚೆಗೆ ಗ್ರಾಸವಾಗಿವೆ. ಆಮ್ ಆದ್ಮಿ ಪಕ್ಷದ ನಾಯಕತ್ವದೊಂದಿಗೆ ಉಂಟಾಗಿರುವ ಬಿರುಕಿನ ಹಿನ್ನೆಲೆಯಲ್ಲಿ, ಅವರನ್ನು ರಾಜ್ಯಸಭೆಯ ಪಕ್ಷದ ಉಪ ನಾಯಕನ ಸ್ಥಾನದಿಂದ ಅಧಿಕೃತವಾಗಿ ತೆಗೆದುಹಾಕಲಾಗಿದೆ ಮತ್ತು ಅವರ ಸ್ಥಾನಕ್ಕೆ ಅಶೋಕ್ ಕುಮಾರ್ ಮಿತ್ತಲ್ ಅವರನ್ನು ನೇಮಿಸಲಾಗಿದೆ. ಅಷ್ಟೇ ಅಲ್ಲದೆ, ಪಕ್ಷದ ಕೋಟಾದಡಿ ಅವರಿಗೆ ಸಂಸತ್ತಿನಲ್ಲಿ ಮಾತನಾಡಲು ಸಮಯ ನೀಡಬಾರದೆಂದು ಆಪ್ ನಾಯಕತ್ವವು ರಾಜ್ಯಸಭಾ ಸಚಿವಾಲಯಕ್ಕೆ ವಿನಂತಿಸಿದೆ. ಸದ್ಯಕ್ಕೆ ಅವರು ಸಂಸದರಾಗಿ ಮುಂದುವರಿಯುತ್ತಿದ್ದರೂ, ಪಕ್ಷದ ಪ್ರಮುಖ ಕಾರ್ಯಕ್ರಮಗಳಿಂದ ಮತ್ತು ಪ್ರಚಾರದಿಂದ ಅವರನ್ನು ದೂರವಿಡಲಾಗಿದೆ. ಈ ಬೆಳವಣಿಗೆಗಳು ಅವರು ಆಮ್ ಆದ್ಮಿ ಪಕ್ಷದಿಂದ ಹೊರಬಂದು ಹೊಸ ರಾಜಕೀಯ ಹಾದಿ ತುಳಿಯಬಹುದು ಎಂಬ ಮುನ್ಸೂಚನೆಯನ್ನು ನೀಡುತ್ತಿದೆ.

ರಾಘವ್ ಚಡ್ಡಾ ಅವರು ಮಂಡಿಸಿದ ಅತ್ಯಂತ ಪ್ರಬಲ ವಾದವೆಂದರೆ 'ಡೇಟಾ ರೋಲ್‌ಓವರ್' ಹಕ್ಕು. ನಾವು ಹಣ ಪಾವತಿಸಿ ಖರೀದಿಸಿದ ಇಂಟರ್ನೆಟ್ ಡೇಟಾ, ನಿಗದಿತ ಅವಧಿಯಲ್ಲಿ ಬಳಕೆಯಾಗದಿದ್ದರೂ ಎಕ್ಸ್‌ಪೈರ್ ಆಗಿ ಕಂಪನಿಗಳ ಪಾಲಾಗುವುದು ಗ್ರಾಹಕರಿಗೆ ಮಾಡುವ ಅನ್ಯಾಯ ಎಂಬುದು ಅವರ ನಿಲುವು. 'ಹಾಲಿನ ಪ್ಯಾಕೆಟ್ ಕೆಡುವಂತೆ ಡೇಟಾ ಕೆಡುವುದಿಲ್ಲ' ಎಂಬ ಅವರ ತರ್ಕಬದ್ಧ ಹೋಲಿಕೆಯು, ಡೇಟಾ ಎಂಬುದು ಕೇವಲ ಒಂದು ಸೌಲಭ್ಯವಲ್ಲ, ಅದು ಗ್ರಾಹಕನ ಆಸ್ತಿ ಎಂಬ ಹೊಸ ಸಂವಿಧಾನಿಕ ಆಯಾಮವನ್ನು ಸಂಸತ್ತಿನ ಮುಂದೆ ಇಟ್ಟಿದೆ. ಇದರೊಂದಿಗೆ, ಸೋಶಿಯಲ್ ಮೀಡಿಯಾ ಅಲ್ಗಾರಿದಮ್‌ಗಳ 'ಅದೃಶ್ಯ ಸರ್ವಾಧಿಕಾರ'ದ ಬಗ್ಗೆ ಅವರು ವ್ಯಕ್ತಪಡಿಸಿದ ಆತಂಕ ಇಂದಿನ ಯುವ ಪೀಳಿಗೆಯ ಬದುಕಿಗೆ ಅತ್ಯಂತ ಪ್ರಸ್ತುತವಾಗಿದೆ. ಯಾವುದೇ ಮುನ್ಸೂಚನೆ ಇಲ್ಲದೆ ಕೃತಕ ಬುದ್ಧಿಮತ್ತೆಯ ಅಲ್ಗಾರಿದಮ್‌ಗಳು ಕಂಟೆಂಟ್ ಕ್ರಿಯೇಟರ್‌ಗಳ ರೀಚ್ ಕಡಿಮೆ ಮಾಡುವುದು ಅಥವಾ ಚಾನೆಲ್ ಬ್ಲಾಕ್ ಮಾಡುವುದು ಲಕ್ಷಾಂತರ ಜನರ ಜೀವನೋಪಾಯದ ಮೇಲೆ ಹೊಡೆತ ನೀಡುತ್ತಿದೆ. ಈ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು 1957ರ ಹಳೆಯ ಕಾಪಿರೈಟ್ ಕಾಯಿದೆಗಳನ್ನು ಇಂದಿನ "ಫೇರ್ ಯೂಸ್" ಮತ್ತು ಡಿಜಿಟಲ್ ಯುಗದ ಅಗತ್ಯಗಳಿಗೆ ತಕ್ಕಂತೆ ತುರ್ತಾಗಿ ಪರಿಷ್ಕರಿಸಬೇಕೆಂದು ಅವರು ಪ್ರತಿಪಾದಿಸಿದ್ದಾರೆ.

ಕೇವಲ ತಂತ್ರಜ್ಞಾನಕ್ಕೆ ಸೀಮಿತವಾಗದ ಅವರ ಸಂಸದೀಯ ಕಾರ್ಯವೈಖರಿಯು ಸಾಮಾನ್ಯ ಜನರ ಜೀವನಕ್ಕೆ ಹತ್ತಿರವಾದ ಬೆಲೆ ಏರಿಕೆ, ರೈತರ ಕನಿಷ್ಠ ಬೆಂಬಲ ಬೆಲೆ ಮತ್ತು ಒಕ್ಕೂಟ ವ್ಯವಸ್ಥೆಯ ರಕ್ಷಣೆಯಂತಹ ವಿಷಯಗಳನ್ನೂ ಒಳಗೊಂಡಿದೆ. ಚಾರ್ಟರ್ಡ್ ಅಕೌಂಟೆಂಟ್ ಆಗಿ ಅವರ ವೃತ್ತಿಪರ ಹಿನ್ನೆಲೆಯು ಹಣದುಬ್ಬರ ಮತ್ತು ಜಿಎಸ್‌ಟಿ ಹೊರೆಯ ಮಗ್ಗುಲುಗಳನ್ನು ಸಂಶೋಧನಾತ್ಮಕವಾಗಿ ವಿಶ್ಲೇಷಿಸಲು ಅವರಿಗೆ ನೆರವಾಗಿದೆ.

ಆದರೆ, ಈ ಎಲ್ಲ ದಕ್ಷತೆಯ ನಡುವೆಯೂ ಆಮ್ ಆದ್ಮಿ ಪಕ್ಷದೊಳಗಿನ ಇತ್ತೀಚಿನ ಬೆಳವಣಿಗೆಗಳು ಒಂದು ವಿಪರ್ಯಾಸದಂತೆ ತೋರುತ್ತಿವೆ. ಪಕ್ಷದ ತಾಂತ್ರಿಕ ಚತುರ ಎಂದೇ ಹೆಸರಾಗಿದ್ದ ಚಡ್ಡಾ ಅವರನ್ನೇ ಇಂದು ಪ್ರಮುಖ ಜವಾಬ್ದಾರಿಗಳಿಂದ ದೂರವಿಟ್ಟಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ. ಪಕ್ಷದ ಸ್ಥಾಪಕ ಸದಸ್ಯ ಕುಮಾರ್ ವಿಶ್ವಾಸ್ ಅಂದು ಆಡಿದ್ದ ಮಾತುಗಳು ಅಕ್ಷರಶಃ ನಿಜವಾಗುತ್ತಿರುವಂತೆ ಭಾಸವಾಗುತ್ತಿದೆ. "ಪಕ್ಷದಲ್ಲಿ ಯಾರಾದರೂ ಸ್ವತಂತ್ರ ಬ್ರ್ಯಾಂಡ್ ಆಗಿ ಬೆಳೆಯುತ್ತಿದ್ದಾರೆ ಎನಿಸಿದರೆ ಅವರನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಗುತ್ತದೆ" ಎಂಬ ಅವರ ಎಚ್ಚರಿಕೆ ಇಂದು ಚಡ್ಡಾ ಅವರ ವಿಷಯದಲ್ಲಿ ಮರುಕಳಿಸುತ್ತಿದೆ.

ಪ್ರಶ್ನಿಸುವ ಮನೋಭಾವದ ನಾಯಕರಿಗಿಂತ, ಹೈಕಮಾಂಡ್ ಸಂಸ್ಕೃತಿಗೆ ಒಗ್ಗಿಕೊಳ್ಳುವವರಿಗೆ ಆದ್ಯತೆ ಸಿಗುತ್ತಿದೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿ ಬಲವಾಗಿದೆ. ಇತ್ತೀಚಿನ ಈ ಬೆಳವಣಿಗೆಗಳು ರಾಘವ್ ಚಡ್ಡಾ ಅವರ ಮುಂದಿನ ನಡೆಯ ಬಗ್ಗೆ ಕುತೂಹಲ ಮೂಡಿಸಿವೆ. ಆಪ್ ನಾಯಕತ್ವದೊಂದಿಗೆ ಹೆಚ್ಚುತ್ತಿರುವ ಅಂತರ ಮತ್ತು ಸಂಸತ್ತಿನಲ್ಲಿ ಅವರು ಮಂಡಿಸುವ ವಿಷಯಗಳು ಕೆಲವೊಮ್ಮೆ ಕೇಂದ್ರ ಸರ್ಕಾರದ ನೀತಿಗಳಿಗೆ ಪೂರಕವಾಗಿರುವಂತೆ ಕಾಣುತ್ತಿರುವುದು, ಅವರು ಬಿಜೆಪಿಯತ್ತ ವಾಲುತ್ತಿರಬಹುದೇ ಎಂಬ ಸಂಶಯವನ್ನು ಹುಟ್ಟುಹಾಕಿದೆ.

ಬಿಜೆಪಿ ಕೂಡ ಪಂಜಾಬ್‌ನಲ್ಲಿ ಒಬ್ಬ ಪ್ರಬಲ ಸಿಖ್ ಯುವ ನಾಯಕನಿಗಾಗಿ ಹುಡುಕಾಟ ನಡೆಸುತ್ತಿದ್ದು, ಚಡ್ಡಾ ಅವರಿಗೆ ಅಲ್ಲಿ ಉತ್ತಮ ವೇದಿಕೆ ಸಿಗಬಹುದು ಎಂಬ ಊಹೆಗಳಿವೆ. ಸದ್ಯಕ್ಕೆ ಅವರು ಯಾವುದೇ ಅಧಿಕೃತ ಘೋಷಣೆ ಮಾಡದಿದ್ದರೂ, ಪಕ್ಷದೊಳಗಿನ ನಿರ್ಲಕ್ಷ್ಯ ಮತ್ತು ಅಮಾನತು ಅವರನ್ನು ಬಂಡಾಯದ ಹಾದಿಗೆ ಅಥವಾ ರಾಷ್ಟ್ರೀಯ ಮಟ್ಟದ ಮತ್ತೊಂದು ಪರ್ಯಾಯದತ್ತ ನಡೆಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ.

ದಾಖಲೆ ಫಲಿತಾಂಶ

ಪುಟ ೧➔ ಕಳೆದ ವರ್ಷ ಕಲಾ ವಿಭಾಗದಲ್ಲಿ ಶೇ. 53.29 ಫಲಿತಾಂಶ ಬಂದಿದ್ದರೆ ಈ ವರ್ಷ ಸುಮಾರು ಶೇ. 20ರಷ್ಟು ಫಲಿತಾಂಶ ಏರಿಕೆ ಕಂಡಿದ್ದು ಶೇ. 72.86 ಫಲಿತಾಂಶ ಬಂದಿದೆ. ಉಳಿದಂತೆ ಈ ಬಾರಿ ವಾಣಿಜ್ಯ ಶೇ.88.04, (ಕಳೆದ ಬಾರಿ ಶೇ. 76.07), ವಿಜ್ಞಾನ ಶೇ.91.69 (ಕಳೆದ ಬಾರಿ ಶೇ.82.54) ಫಲಿತಾಂಶ ಬಂದಿದೆ.

74 ಸರ್ಕಾರಿ ಪ.ಪೂ. ಕಾಲೇಜು, 6 ಅನುದಾನಿತ ಪ.ಪೂ. ಕಾಲೇಜು, 265 ಅನುದಾನ ರಹಿತ ಪ.ಪೂ. ಕಾಲೇಜು, 64 ವಸತಿ ಶಾಲಾ ಪ.ಪೂ. ಕಾಲೇಜಿಗೆ ಶೇ.100ರಷ್ಟು ಫಲಿತಾಂಶ ಬಂದಿದ್ದರೆ, 1 ಸರ್ಕಾರಿ, 7 ಅನುದಾನಿತ, 37 ಅನುದಾನ ರಹಿತ ಹಾಗೂ 2 ವಸತಿ ಶಾಲಾ ಪ.ಪೂ. ಕಾಲೇಜು ಸೇರಿದಂತೆ 47 ಪ.ಪೂ. ಕಾಲೇಜುಗಳಿಗೆ ಶೂನ್ಯ ಫಲಿತಾಂಶ ಲಭ್ಯವಾಗಿದೆ. ನಗರಕ್ಕಿಂತ ಗ್ರಾಮೀಣ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಸ್ ಆಗಿರುವುದು ಈ ಬಾರಿಯ ವಿಶೇಷ. ಈ ಬಾರಿ ಗ್ರಾಮೀಣ ಭಾಗದಲ್ಲಿ ಶೇ. 87.62 ಫಲಿತಾಂಶ ಬಂದಿದ್ದು ನಗರ ಭಾಗದಲ್ಲಿ ಶೇ. 85.95 ಫಲಿತಾಂಶ ದಾಖಲಾಗಿದೆ. ಕಳೆದ ವರ್ಷ ಗ್ರಾಮೀಣ ಭಾಗದಲ್ಲಿ ಶೇ. 69.33 ಫಲಿತಾಂಶ ಬಂದಿದ್ದರೆ, ನಗರ ಭಾಗದಲ್ಲಿ ಶೇ. 74.55 ಫಲಿತಾಂಶ ದಾಖಲಾಗಿತ್ತು.

ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ಆದ್ದರಿಂದ ಪರೀಕ್ಷೆ -2 ಮಾತ್ರ ಪರೀಕ್ಷೆ ನಡೆಸಲಿದ್ದು, ಪರೀಕ್ಷೆ-3 ಅನ್ನು ನಡೆಸುವುದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಮಾಹಿತಿ ನೀಡುತ್ತೇನೆ.

■ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ

ಜಿಲ್ಲೆಗಳ ಶೇಕಡಾವಾರು ಫಲಿತಾಂಶ

ಉಡುಪಿ	96.39	ಚಾಮರಾಜನಗರ	84.68	ಚಿತ್ರದುರ್ಗ	79.12
ದಕ್ಷಿಣ ಕನ್ನಡ	96.35	ಮೈಸೂರು	84.80	ಬಳ್ಳಾರಿ	78.69
ಕೊಡಗು	92.34	ಬಾಗಲಕೋಟೆ	84.12	ರಾಯಚೂರು	74.09
ಉತ್ತರ ಕನ್ನಡ	91.78	ಬೀದರ್	84.61	ವಿಜಯಪುರ	92.00
ಬೆಂಗಳೂರು ಗ್ರಾಮಾಂತರ	91.00	ಚಿಕ್ಕೋಡಿ	83.10	ಯಾದಗಿರಿ	71.21
ಚಿಕ್ಕಮಗಳೂರು	90.80	ಧಾರವಾಡ	83.31		
ಬೆಂಗಳೂರು ದಕ್ಷಿಣ	90.55	ಬೆಳಗಾವಿ	80.32		
ಚಿಕ್ಕಬಳ್ಳಾಪುರ	90.24	ಮಂಡ್ಯ	88.85		
ಬೆಂಗಳೂರು ಉತ್ತರ	90.05	ರಾಮನಗರ	87.90		
ರಾಮನಗರ	87.90	ಶಿವಮೊಗ್ಗ	87.62		
ಕೋಲಾರ	87.38	ಹಾವೇರಿ	84.11		
ತುಮಕೂರು	86.89	ಹಾಸನ	89.71		
ಕೊಪ್ಪಳ	86.80	ದಾವಣಗೆರೆ	81.99		
		ಕಲಬುರಗಿ	76.97		
		ಗದಗ	76.65		

ವಿದ್ಯಾರ್ಥಿನಿಯರೇ ಮೇಲುಗೈ

ಎಂದಿನಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಹೆಚ್ಚು ಅಂಕಗಳಿಸುವ ಮೂಲಕ ಮೇಲುಗೈ ಸಾಧಿಸಿದ್ದು, ಪರೀಕ್ಷೆ ಎದುರಿಸಿದ 3,53,742 ವಿದ್ಯಾರ್ಥಿನಿಯರಲ್ಲಿ 3,13,770(ಶೇ.88.70) ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದಾರೆ. ಅಲ್ಲದೇ 2,78,458 ವಿದ್ಯಾರ್ಥಿಗಳ ಪೈಕಿ 2,32,928 (ಶೇ.83.65)ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ. ಅದರಲ್ಲೂ ಈ ವರ್ಷ ಮೂರು ವಿಭಾಗದಲ್ಲಿಯೂ ಪ್ರಥಮ ರ್‍ಯಾಂಕ್ ಪಡೆದಿರುವುದು ವಿದ್ಯಾರ್ಥಿನಿಯರಾಗಿದ್ದಾರೆ.



ಅಮ್ಮನ ಅಗಲಿಕೆ ನೋವಲ್ಲೂ ಗುರಿ ಸಾಧಿಸಿದ ದಿಶಾ

ಪುಟ ೧➔ ತಂಗಿ ಆಸ್ಪತ್ರೆಯಲ್ಲಿ ಇದ್ದಿದ್ದರಿಂದ ಮುಂದಿನ ಅರ್ಥಶಾಸ್ತ್ರ ಪರೀಕ್ಷೆಗೆ ನಮ್ಮ ಮನೆಯ ವಾಚ್‌ಮ್ಯಾನ್ ಮನೆಯಲ್ಲಿ ಉಳಿದುಕೊಂಡು ಸಿದ್ಧತೆ ನಡೆಸುತ್ತಿದ್ದೆ. ಪರೀಕ್ಷೆ ಬರೆದು ನಾನು ಆಸ್ಪತ್ರೆಗೆ ಹೋಗಿದ್ದೆ, ಅಂದು ರಾತ್ರಿ 9 ಗಂಟೆ ಸುಮಾರಿಗೆ ನನ್ನ ತಾಯಿ ಮೃತಪಟ್ಟಿರುವುದು ದೃಢವಾಯಿತು. ನಂತರ ತಾಯಿಯ ಕಾರ್ಯ ಮುಗಿದ ಬಳಿಕ ನನ್ನ ಕಾಲೇಜಿನ ಶಿಕ್ಷಕರು ಅದರಲ್ಲೂ ವೀಣಾ(ಶಿಕ್ಷಕಿ) ಪರೀಕ್ಷೆಗೆ ಸಮಸ್ಯೆಯಾಗಬಾರದೆಂಬ ನಿಟ್ಟಿನಲ್ಲಿ ನನ್ನನ್ನು ಹಾಗೂ ನನ್ನ ಸಹೋದರಿಯನ್ನು ಅವರ ಮನೆಗೆ ಕರೆದೊಯ್ದರು. ಒಂದನ್ನು ಕಳೆದುಕೊಂಡಾಯಿತು. ಮತ್ತೊಂದನ್ನು ಕಳೆದುಕೊಳ್ಳಬಾರದೆಂದು ಪರೀಕ್ಷೆಯೆಡೆಗೆ ಹೆಚ್ಚು ಗಮನಹರಿಸಿದೆ. ಎರಡು ಪರೀಕ್ಷೆಯನ್ನು ನನ್ನ ಶಿಕ್ಷಕಿ ವೀಣಾ ಮೇಡಂ ಅವರ ಮನೆಯಲ್ಲೇ ಬರೆದಿದ್ದೇನೆ. ಇವೆಲ್ಲ ಸಂಘರ್ಷಗಳೇ ಸಾಧನೆಯ ದಾರಿಯಲ್ಲಿ ಕೈ ಹಿಡಿದು ಮುನ್ನಡೆಸಿತು.

ಸಿ. ಎ. ನನ್ನ ಗುರಿ

ಸಿ.ಎ. ಮಾಡುವ ಗುರಿ ಇದೆ. ಮೇ 14 ರಂದು ಸಿ.ಎ. ಫೌಂಡೇಶನ್ ಪರೀಕ್ಷೆ ಇರುವುದರಿಂದ ಈಗಿನಿಂದಲೇ ಸಿದ್ಧತೆ ನಡೆಸುತ್ತಿದ್ದೇನೆ. ಸಿ.ಎ. ಇಂಟಿಗ್ರೇಟೆಡ್ ಬಿ.ಕಾಂ ತೆಗೆದುಕೊಳ್ಳಲು ಆಸಕ್ತಿ ಇದೆ. ಕಾಲೇಜಿನಲ್ಲಿ ಆಗಾಗ ನಡೆಸುತ್ತಿದ್ದ ಪರೀಕ್ಷೆಗಳು ಉತ್ತಮ ಅಂಕಗಳಿಗೆ ಪೂರಕವಾಗಿವೆ. ಇನ್ನು 1 ತಿಂಗಳಿನಲ್ಲಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ ಎಂದು ದಿಶಾ ತಿಳಿಸಿದರು.

ದ್ವಿತೀಯ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಸಿಕ್ಕಿದೆ. ಬಹಳ ಸಂತೋಷವಾಗಿದ್ದು, ನನ್ನ ಈ ಸಾಧನೆಗೆ ನನ್ನ ಕಾಲೇಜು ಹಾಗೂ ಶಿಕ್ಷಕರು, ಪ್ರಾಂಶುಪಾಲರು ಮುಖ್ಯ ಕಾರಣರಾಗಿದ್ದಾರೆ. ಶಿಕ್ಷಕರು ಬೇಗ ಸಿಲಬಸ್‌ಗಳನ್ನು ಮುಗಿಸಿ, ಹೆಚ್ಚು-ಹೆಚ್ಚು ಪರೀಕ್ಷೆಗಳನ್ನು ಕೊಡುತ್ತಿದ್ದರು. ತಪ್ಪಿದ್ದರೆ ಸರಿಯಾಗಿ ಹೇಳಿಕೊಡುತ್ತಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜೆ

◈ ಕೇಸರಿ ಯಾವುದೇ ಪಕ್ಷದ ಸೊತ್ತಲ್ಲ, ಅದು ಧರ್ಮವನ್ನು ಪ್ರತಿನಿಧಿಸುವ ಗೌರವದ ಪ್ರತೀಕವಾಗಿದೆ- ಕಬೀಜೆ
-ಮುಕ್ತಾನಂದ ಸ್ವಾಮೀಜಿ ಧರ್ಮದ ನಿಜವಾದ ಅರ್ಥವನ್ನು ಅರಿಯಲಾರದವರಿಗೆ ಇದು ಅರ್ಥವಾಗಲಾರದು.ಹಾಗಾಗಿ ಕೆಲವರಿಗೆ ಕೇಸರಿ ಕಂಡರೆ ಕಣ್ಣು ಕೆಂಪಾಗುವುದು, ಮೈ ನಡುಗುವುದು!

ದಿನ ಭವಿಷ್ಯ

ಮೇಷ
ನಿಮ್ಮ ಕರ್ತವ್ಯನಿಷ್ಠೆ ಎಲ್ಲರ ಮೆಚ್ಚುಗೆಗೆ ಪಾತ್ರ. ಆದರೆ ಬಸವಳಿಯುವಷ್ಟು ಕೆಲಸ ಮಾಡದಿರಿ. ವಿಶ್ರಾಂತಿಯೂ ಇರಲಿ. ಕೌಟುಂಬಿಕ ಸಮಾಧಾನ

ವೃಷಭ
ಹಿರಿಯರಿಂದ ಒತ್ತಡ ಎದುರಿಸುವಿರಿ. ಕೆಲ ವಿಷಯದಲ್ಲಿ ಅತಿಯಾಗಿ ಚಿಂತಿಸಲು ಹೋಗಬೇಡಿ. ಲಘುವಾಗಿ ಪರಿಗಣಿಸಿ. ಹಿತಾಸಕ್ತಿ ಕಾಯ್ದುಕೊಳ್ಳಿ.

ಮಿಥುನ
ವೃತ್ತಿಯಲ್ಲಿ ನಿಮ್ಮ ಹೊಣೆ ಸರಿಯಾಗಿ ನಿಭಾಯಿಸುವಿರಿ. ಕೆಲ ವಿಷಯದಲ್ಲಿ ನಿಮ್ಮ ಕಾರ್ಯಶೈಲಿ ಬದಲಿಸುವ ಅಗತ್ಯವಿದೆ. ಧನಪ್ರಾಪ್ತಿ.

ಕಟಕ
ಉದ್ಯೋಗದಲ್ಲಿ ಅತೃಪ್ತಿ. ಬದಲಾವಣೆಗೆ ಕಾಲ ಕೂಡಿಬರಲಿದೆ. ಸಾಲ ಪಡೆದಿದ್ದರೆ ಮರುಪಾವತಿ ಸುಲಭವಾಗಲಿದೆ. ಸ್ನೇಹಿತರ ನೆರವು.

ಸಿಂಹ
ಇಂದು ವೈಫಲ್ಯಕ್ಕೆ ಎದೆಗುಂದಬೇಡಿ. ಇದು ನಿಮ್ಮ ಮಂತ್ರವಾಗಲಿ. ಸತತ ಪ್ರಯತ್ನದಿಂದ ಯಶ ಸಾಧಿಸುವಿರಿ. ಆಪ್ತರ ಜತೆ ಮುನಿಸು ನಿವಾರಣೆ.

ಕನ್ಯಾ
ಅಭಿವೃದ್ಧಿಯ ಪಥ ನಿಮ್ಮ ಮುಂದಿದೆ. ಎಡವದೆ ಮುಂದರಿಯಿರಿ. ಆಪ್ತರ ಜತೆ ತುಸು ಕಾಲ ಕಳೆಯಿರಿ. ಅವರನ್ನು ಕಡೆಗಣಿಸಬೇಡಿ.

ತುಲಾ
ಉತ್ಸಾಹದ ದಿನ. ಉದ್ದೇಶಿತ ಕಾರ್ಯ ಸಫಲ. ನಿಮ್ಮ ನೇರ ಮಾತು ಕೆಲವರಿಗೆ ಅಸಮಾಧಾನ ತಂದೀತು. ಮೆದು ಮಾತು ಒಳಿತು.

ವೃಶ್ಚಿಕ
ಹೊಸ ಸವಾಲು. ಮಾನಸಿಕ ಅಸಹನೆ. ಕುಟುಂಬ ಸದಸ್ಯರ ಸಂಗದಲ್ಲಿ ಸಮಾಧಾನ. ನಿರ್ಧಾರದಲ್ಲಿ ಅನಿಶ್ಚಿತತೆ ಬೇಡ, ದೃಢತೆಯಿರಲಿ.

ಧನು
ಆಪ್ತರ ಸಂಗದಲ್ಲಿ ಕಾಲ ಕಳೆಯಿರಿ. ನಿಮ್ಮ ನೋವು, ಸಂಕಷ್ಟ ಮರೆಯಲು ಇದು ಸಹಕಾರಿ. ಬಂಧುಮಿತ್ರರ ಅಸಹಕಾರ ಎದುರಿಸುವಿರಿ.

ಮಕರ
ವೃತ್ತಿ ಸಂಬಂಧಿತ ವಿಷಯವನ್ನು ತಾಳ್ಮೆಯಿಂದ ನಿಭಾಯಿಸಿ. ಬಿಕ್ಕಟ್ಟು ನಿವಾರಿಸಲು ವಿಳಂಬ ಮಾಡಬೇಡಿ. ಕ್ಷಿಪ್ರ ನಿರ್ಧಾರ ಅವಶ್ಯ.

ಕುಂಭ
ದಂಪತಿಗಳು ಹಳೆಯ ವಿಚಾರ ಬಿಟ್ಟು ವ್ಯವಹರಿಸಿ. ಕಲಹ ಶಮನಕ್ಕೆ ಇದು ಅಗತ್ಯ. ವೃತ್ತಿಯಲ್ಲಿ ಕೆಲವರ ಟೀಕೆ ಎದುರಾಗಬಹುದು.

ಮೀನ
ಕೌಟುಂಬಿಕವಾಗಿ ಸಮಾಧಾನಕರ ಸ್ಥಿತಿ. ಆರೋಗ್ಯಕ್ಕೆ ಗಮನ ಕೊಡಿ. ನೆಗೆಟಿವ್ ಚಿಂತನೆ ಬದಿಗಿಡಿ. ಸಕಾರಾತ್ಮಕ ಭಾವನೆ ಬೆಳೆಸಿಕೊಳ್ಳಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 6,0,4,

ಸೃಷ್ಟಿ ಮಲ್ಲಿನಾಥ, ಅರ್ಚನ ದೊಡ್ಡಮನಿ, ಸಂಗೀತಾ ಅದ್ಭುತ ಸಾಧನೆ

ಕಲಾ ವಿಭಾಗದಲ್ಲಿ ಪ್ರಥಮ

• **ಕಲಬುರಗಿ/ ಕೊಟ್ಟೂರು:** 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಇಂದು ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ.





ಕಲಬುರಗಿಯ ವೀರಮ್ಮ ಗಂಗಸಿರಿ (ವಿಜಿ) ಮಹಿಳಾ ಪಿಯು ಕಾಲೇಜಿನ ವಿದ್ಯಾರ್ಥಿನಿ ಸೃಷ್ಟಿ ಮಲ್ಲಿನಾಥ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾಳೆ.

600 ಅಂಕಗಳಲ್ಲಿ 598 ಅಂಕಗಳನ್ನು ಗಳಿಸಿರುವ ಸೃಷ್ಟಿ, ಕನ್ನಡದಲ್ಲಿ 100, ಇಂಗ್ಲಿಷ್‌ನಲ್ಲಿ 99, ಇತಿಹಾಸದಲ್ಲಿ 99, ಅರ್ಥಶಾಸ್ತ್ರದಲ್ಲಿ 100, ಸಮಾಜ ಶಾಸ್ತ್ರದಲ್ಲಿ 100 ಹಾಗೂ ರಾಜಕೀಯ ಶಾಸ್ತ್ರದಲ್ಲಿ 100 ಅಂಕಗಳನ್ನು ಪಡೆದು ರಾಜ್ಯದ ಶ್ರೇಷ್ಠ ಸ್ಥಾನಕ್ಕೇರಿದ್ದಾಳೆ. ಈ ಸಾಧನೆಯ ಮೂಲಕ ಕಾಲೇಜು, ಪಾಲಕರು ಹಾಗೂ ಜಿಲ್ಲೆಯ ಹೆಸರು ಬೆಳಗಿಸಿದ್ದಾಳೆ. ವಿದ್ಯಾರ್ಥಿನಿಯ ಈ ಸಾಧನೆಗೆ ಕಠಿಣ ಪರಿಶ್ರಮವೇ ಪ್ರಮುಖ ಕಾರಣ ಎಂದು ಕಾಲೇಜಿನ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದೆ.

ಕೊಟ್ಟೂರು ಪಟ್ಟಣದ ಇಂದು ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಕಲಾ ವಿಭಾಗದ ದ್ವಿತೀಯ ಪಿಯುನಲ್ಲಿ 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ. ಈ ಇಬ್ಬರು ವಿದ್ಯಾರ್ಥಿನಿಯರು ಗ್ರಾಮೀಣ ಭಾಗದಲ್ಲಿನ ಕೃಷಿಕರ ಮಕ್ಕಳು ಎಂಬುದು ವಿಶೇಷ.

ಹರಪನಹಳ್ಳಿ ತಾಲೂಕಿನ ಬಳಿಗಾನೂರು ಗ್ರಾಮದ ಅರ್ಚನ ದೊಡ್ಡಮನಿ (598) ಮತ್ತು ಕೊಪ್ಪಳ ಜಿಲ್ಲೆ, ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಸಂಗೀತಾ (598) ಟಾಪ್ ಒಂದನೇ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾರೆ. ಕಾಲೇಜಿನ ಹಾಸ್ಟೆಲ್‌ನಲ್ಲಿದ್ದ ಸಂಗೀತ, ಬಳಿಗಾನೂರಿನಿಂದ ದಿನವೂ ಬಸ್‌ನಲ್ಲಿ ಕಾಲೇಜಿಗೆ ಬರುತ್ತಿದ್ದ ಅರ್ಚನ ದೊಡ್ಡಮನಿ, ರಾಜ್ಯವೇ ಗಮನ ಸೆಳೆಯುವಂತಹ ಸಾಧನೆ ಮಾಡುವ ಮೂಲಕ ಇಂದು ಪಿಯು ಕಾಲೇಜಿನ ರ್‍ಯಾಂಕ್ ನಾಗಲೋಟವನ್ನು ಮುಂದುವರಿಸಿದ್ದಾರೆ. ಇಂದು ಪಿಯು ಕಾಲೇಜು ದ್ವಿತೀಯ ಪಿಯು ಫಲಿತಾಂಶದಲ್ಲಿ ಸತತವಾಗಿ 11ನೇ ವರ್ಷದಲ್ಲಿಯೂ ತನ್ನ ಉನ್ನತ ಸ್ಥಾನ ಪಡೆವ ಸಾಧನೆಯನ್ನು ಮಾಡಿದೆ. ಕನ್ನಡದಲ್ಲಿ 100ಕ್ಕೆ 98 ಅಂಕ ಪಡೆದ ಅರ್ಚನ ದೊಡ್ಡಮನಿ, ಸಂಸ್ಕೃತ, ಐಚ್ಛಿಕ ಕನ್ನಡ, ಇತಿಹಾಸ, ರಾಜ್ಯ ಶಾಸ್ತ್ರ, ಶಿಕ್ಷಣದಲ್ಲಿ ತಲಾ 100 ಅಂಕ ಪಡೆದಿದ್ದಾರೆ.ಸಂಗೀತಾ ಅವರು ಕನ್ನಡ, ಸಂಸ್ಕೃತ, ಐಚ್ಛಿಕ ಕನ್ನಡ, ರಾಜ್ಯ ಶಾಸ್ತ್ರ ಶಿಕ್ಷಣದಲ್ಲಿ 100 ಅಂಕಗಳನ್ನು, ಇತಿಹಾಸದಲ್ಲಿ 99 ಅಂಕಗಳನ್ನು ಪಡೆದಿದ್ದಾರೆ.

ಎರಡು ವರ್ಷದ ಪ್ರಯತ್ನಕ್ಕೆ ಫಲ

ಕಲಬುರಗಿಯ ವೀರಮ್ಮ ಗಂಗಸಿರಿ (ವಿಜಿ) ಮಹಿಳಾ ಪಿಯು ಕಾಲೇಜಿನ ಮುಖ್ಯಗುರುಗಳಾದ ಡಾ.ಮೋಹನ್ ರಾಜ್ ಪತ್ತಾರ ಮಾತನಾಡಿ, ಸೃಷ್ಟಿಯ ಸಾಧನೆ ನಮ್ಮ ಕಾಲೇಜಿಗೆ ಮಾತ್ರವಲ್ಲದೆ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ. ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯಬೇಕು ಎಂಬ ಉದ್ದೇಶದಿಂದ ನಿರಂತರ ಪ್ರಯತ್ನ ಮಾಡುತ್ತಿದ್ದೇವೆ. ಕಳೆದ ವರ್ಷ 587 ಅಂಕಗಳೊಂದಿಗೆ ಟಾಪ್ 10ರಲ್ಲಿ ಸ್ಥಾನ ಪಡೆದಿದ್ದೇವೆ. ಈ ಬಾರಿ ಸೃಷ್ಟಿ ನಮ್ಮ ಕನಸನ್ನು ನನಸಾಗಿಸಿದ್ದಾಳೆ ಎಂದು ಸಂತೋಷ ವ್ಯಕ್ತಪಡಿಸಿದರು. ಪಾಲಕರ ಪ್ರೋತ್ಸಾಹ ಮತ್ತು ಶಿಕ್ಷಕರ ನಿರಂತರ ಮಾರ್ಗದರ್ಶನ ವಿದ್ಯಾರ್ಥಿನಿಯ ಸಾಧನೆಗೆ ಮುಖ್ಯ ಕಾರಣವಾಗಿದ್ದು, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಶೀಲ್ ನಮೋಶಿ, ಉಪಾಧ್ಯಕ್ಷ ರಾಜಾ ಭೀಮಳ್ಳಿ ಸೇರಿದಂತೆ ಮಂಡಳಿಯ ಸದಸ್ಯರ ಸಹಕಾರವೂ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.



❝ ರಾಜ್ಯಕ್ಕೆ ಪ್ರಥಮವಾಗಿ ಬರುತ್ತೇನೆ ಎಂದು ಅನ್ಕೊಂಡೆ ಇರಲಿಲ್ಲ, ಒಮ್ಮೆಯಾದರೂ ರಾಜ್ಯಕ್ಕೆ ಪ್ರಥಮ ಬಂದು ತಂದೆ ತಾಯಿ, ಕಲಿಸಿದ ಶಿಕ್ಷಕರ ಹೆಸರು ಎತ್ತರಕ್ಕೆ ಕೊಂಡೊಯ್ಯಬೇಕು ಎಂಬ ಆಸೆಯಿತ್ತು. ಇದೀಗ ಆ ಆಸೆ ಈಡೇರಿದೆ.

■ **ಸೃಷ್ಟಿ ಮಲ್ಲಿನಾಥ, ವಿದ್ಯಾರ್ಥಿನಿ**

ಅರ್ಜಿ ಸಲ್ಲಿಸಲು ಏ.15ರವರೆಗೆ ಅವಕಾಶ

ಡಿಜಿಲಾಕರ್‌ನಲ್ಲಿ ಅಂಕಪಟ್ಟಿ

• **ಬೆಂಗಳೂರು:** ದ್ವಿತೀಯ ಪಿಯುಸಿ ಅಂಕಪಟ್ಟಿಯನ್ನು ಎನ್‌ಎಡಿ ಡಿಜಿಲಾಕರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಯ ಛಾಯಾ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕೆ ವೆಬ್‌ಸೈಟ್ https://kseab.karnataka.gov.inನಲ್ಲಿ ಲಭ್ಯವಿದೆ.



ಜೊತೆಗೆ ಕರ್ನಾಟಕ ಒನ್ ಮೊಬೈಲ್ ಆ್ಯಪ್‌ನಲ್ಲಿ ಸಲ್ಲಿಸಬಹುದು. ಉತ್ತರ ಪತ್ರಿಕೆಯ ಛಾಯಾ ಪ್ರತಿಗೆ ಅರ್ಜಿ ಸಲ್ಲಿಸಲು ಏ.15ರವರೆಗೆ ಸಮಯಾವಕಾಶ ನೀಡಲಾಗಿದೆ. ಉತ್ತರ ಪತ್ರಿಕೆಯ ಛಾಯಾ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಏ.12ರಿಂದ 17ರವರೆಗೆ, ಮರು ಮೌಲ್ಯಮಾಪನಕ್ಕಾಗಿ ಹಾಗೂ ಮರು ಎಣಿಕೆಗಾಗಿ ಅರ್ಜಿ ಸಲ್ಲಿಸಲು ಏ. 13 ರಿಂದ 19ರವರೆಗೆಸಮಯನೀಡಲಾಗಿದೆ.ಛಾಯಾ ಪ್ರತಿ ಪಡೆಯಲು ಶುಲ್ಕ ಪ್ರತಿ ವಿಷಯಕ್ಕೆ 530 ರೂ., ಮರು ಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ 1,670 ರೂ. ನಿಗದಿಪಡಿಸಲಾಗಿದೆ. ಹಾಗೆಯೇ ಅಭ್ಯರ್ಥಿಗಳು ಪರೀಕ್ಷೆ -2ಕ್ಕೆ ಅರ್ಜಿ ಸಲ್ಲಿಸಲು ಮರು ಮೌಲ್ಯಮಾಪನದ ಫಲಿತಾಂಶಕ್ಕಾಗಿ ಕಾಯಬೇಕಾಗಿಲ್ಲ, ಮರು ಮೌಲ್ಯಮಾಪನದಲ್ಲಿ ಗಳಿಸಿದ ಅಂಕಗಳನ್ನೇ ಪರೀಕ್ಷೆ-1 ರ ಅಂಕಗಳೆಂದು ಪರಿಗಣಿಸಲಾಗುವುದು, ಮೇಲ್ಮನವಿಗೆ ಅವಕಾಶವಿಲ್ಲ, ಅಂಕಗಳ ಮರು ಎಣಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ಪರೀಕ್ಷಾ ಮಂಡಳಿ ತಿಳಿಸಿದೆ.

ಅರ್ಜಿ ಸಲ್ಲಿಸಲು ಏ.17 ಕೊನೆ ದಿನ

ಪರೀಕ್ಷೆ-2ಕ್ಕೆ ಅರ್ಜಿ ಸಲ್ಲಿಸಲು ಏ.17 ಕೊನೆಯ ದಿನವಾಗಿದ್ದು, ಅಭ್ಯರ್ಥಿಗಳು ಪರೀಕ್ಷಾ ಮಂಡಳಿಯ ವೆಬ್‌ಸೈಟ್ kseab.karnataka.gov.in ಮೂಲಕ ನೋಂದಾಣಿ ಮಾಡಿಕೊಳ್ಳಬಹುದು. ಪರೀಕ್ಷೆ -1ರಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕ ಇರುವುದಿಲ್ಲ, ಆದರೆ, ಪರೀಕ್ಷೆ -1ರ ಫಲಿತಾಂಶ ಸುಧಾರಿಸಲು ಪರೀಕ್ಷೆ ಬರೆಯುವ ವಿದ್ಯಾರ್ಥಿಗೆ ಒಂದು ವಿಷಯ (ಪ್ರಥಮ ಬಾರಿಗೆ) ಕ್ಕೆ 175, ಒಂದು ವಿಷಯಕ್ಕೆ (ಎರಡನೇ ಬಾರಿಗೆ) 350 ರೂ.ನಿಗದಿ ಪಡಿಸಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದರು.

ಕದನ ವಿರಾಮವಿನ್ನೂ ಅಸ್ಥಿರ

ಪುಟ ೧➔ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಒಪ್ಪಂದವನ್ನು ಇರಾನ್ ಪಾಲಿಸದಿದ್ದರೆ ಹಿಂದಿಗಿಂತ ಹೆಚ್ಚು ಭೀಕರ ದಾಳಿ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮಾತನಾಡಿ, ಲೆಬನಾನ್ ನಮ್ಮ ಒಪ್ಪಂದದಲ್ಲಿ ಇರಲಿಲ್ಲ ಎಂದಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ಲೆಬನಾನ್ ಮೇಲೆ ದಾಳಿ: ಕದನ ವಿರಾಮ ಒಪ್ಪಂದದಲ್ಲಿ ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವಿನ ಹೋರಾಟ ನಿಲ್ಲಿಸುವ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಮತ್ತೊಂದು ಪ್ರಮುಖ ಸಮಸ್ಯೆಯಾಗಿದೆ. ಇಸ್ರೇಲ್ ಬೈರೂತ್ ಮೇಲೆ ಭಾರೀ ವಾಯು ದಾಳಿಗಳನ್ನು ನಡೆಸಿದೆ. ಇದು ಫೆ.28ರಿಂದ ಆರಂಭವಾದ ಯುದ್ಧದಲ್ಲಿ ಲೆಬನಾನ್‌ನಲ್ಲಿ ಒಂದೇ ದಿನದಲ್ಲಿ ಕಂಡ ಅತ್ಯಂತ ಭೀಕರ ದಾಳಿಯಾಗಿದೆ. ಈ ದಾಳಿಯಲ್ಲಿ ಕನಿಷ್ಠ 203 ಮಂದಿ ಮೃತಪಟ್ಟಿದ್ದು, 1,000ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇಸ್ರೇಲ್ ಈ ದಾಳಿಗಳು ಹೆಜ್ಬೊಲ್ಲಾ ಗುರಿಯಾಗಿವೆ ಎಂದು ಹೇಳಿದೆ.

ಇರಾನ್ ಪ್ರತಿದಾಳಿ ಎಚ್ಚರಿಕೆ: ಇಸ್ರೇಲ್ ದಾಳಿಗಳು ಮುಂದುವರಿದರೆ ಬಲವಾದ ಪ್ರತಿಕ್ರಿಯೆ ನೀಡಲಾಗುತ್ತದೆ ಎಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್ ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಾತನಾಡಿ, ಹೆಜ್ಬೊಲ್ಲಾ ವಿರುದ್ಧ ದಾಳಿಯನ್ನು ಬಲ, ನಿಖರತೆ ಮತ್ತು ದೃಢನಿಶ್ಚಯದಿಂದ ಮುಂದುವರಿಸುತ್ತೇವೆ ಎಂದಿದ್ದಾರೆ.

ಇರಾನ್ ಪರಮಾಣು ಭವಿಷ್ಯ ಇನ್ನೂ ಅನಿಶ್ಚಿತ: ಯುದ್ಧದ ಮೂಲ ಕಾರಣವಾದ ಇರಾನ್‌ನ ಅಣು ಮತ್ತು ಕ್ಷಿಪಣಿ ಕಾರ್ಯಕ್ರಮದ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ಅಮೆರಿಕ ಮತ್ತು ಇಸ್ರೇಲ್, ಇರಾನ್ ಅಣ್ವಸ್ತ್ರಗಳನ್ನು ಅಭಿವೃದ್ಧಿಪಡಿಸಬಾರದು ಎಂದು ಒತ್ತಾಯಿಸುತ್ತಿವೆ. ಆದರೆ ಇರಾನ್ ತನ್ನ ಅಣು ಕಾರ್ಯಕ್ರಮ ಶಾಂತಿಯುತವಾಗಿದೆ ಎಂದು ಹೇಳುತ್ತಿದೆ. ಇರಾನ್ ಅಣು ಸಂಸ್ಥೆಯ ಮುಖ್ಯಸ್ಥ ಮೊಹಮ್ಮದ್ ಎಸ್ಲಾಮಿ, ಯುರೇನಿಯಂ ಸಂವರ್ಧನೆ ಹಕ್ಕು ಇರಾನ್‌ಗೆ ಅಗತ್ಯವಿದೆ ಎಂದು ಹೇಳಿದ್ದಾರೆ.

ಪಾಕ್ ವಿಶ್ವಾಸಾರ್ಹವಲ್ಲ

• **ಹೊಸದಿಲ್ಲಿ :** ಅಮೆರಿಕ ಮತ್ತು ಇರಾನ್ ನಡುವೆ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಿದ ಪಾಕಿಸ್ತಾನದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿದ ಇಸ್ರೇಲ್ ರಾಯಭಾರಿ, ಅಮೆರಿಕದ ನಡೆ ಅಚ್ಚರಿ ತಂದಿದೆ ಎಂದಿದ್ದಾರೆ. ಭಾರತಕ್ಕೆ ಇಸ್ರೇಲ್ ರಾಯಭಾರಿಯಾಗಿರುವ ರೂವೆಲ್ ಅಜರ್ ಅವರು, ಇಸ್ರೇಲ್ ಯಾವತ್ತೂ ಪಾಕಿಸ್ತಾನವನ್ನು ಒಂದು ವಿಶ್ವಾಸಾರ್ಹ ದೇಶ ಎಂದು ಪರಿಗಣಿಸುವುದೇ ಇಲ್ಲ, ಅಮೆರಿಕ, ಪಾಕಿಸ್ತಾನದ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಲು ತನ್ನದೇ ಆದ ಕಾರಣಗಳನ್ನು ಹೊಂದಿರಬಹುದು. ಆದರೆ, ಇಸ್ರೇಲ್ ಪಾಕಿಸ್ತಾನವನ್ನು ಯಾವತ್ತೂ ನಂಬಿಕೆಗೆ ಯೋಗ್ಯವಾದ ದೇಶ ಎಂದು ನಂಬುವುದೇ ಇಲ್ಲ ಎಂದಿದ್ದಾರೆ.

ದಾಳಿ ನಿಂತರೆ ಮಾತ್ರ ಹಾರ್ಮುಜ್ ಮುಕ್ತ!

ಇರಾನ್ ಉಪ ವಿದೇಶಾಂಗ ಸಚಿವ ಸಯೀದ್ ಖತೀಬ್ ಜಾದೆಹ್ ಮಾತನಾಡಿ, ಅಮೆರಿಕ ತನ್ನ ಆಕ್ರಮಣ ನಿಲ್ಲಿಸಿದ ಬಳಿಕ ಹಾಗೂ ಇಸ್ರೇಲ್ ಲೆಬನಾನ್ ಮೇಲೆ ದಾಳಿಗಳನ್ನು ನಿಲ್ಲಿಸಿದರೆ ಮಾತ್ರ, ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಮುಕ್ತ ಸಂಚಾರಕ್ಕೆ ಅವಕಾಶ ನೀಡಲಾಗುತ್ತದೆ ಎಂದಿದ್ದಾರೆ. ಈ ಪರಿಸ್ಥಿತಿಯಿಂದ ಜಾಗತಿಕ ತೈಲ ಬೆಲೆ ಗಗನಕ್ಕೇರಿದೆ.

ಶ್ರೀನಂದಾ ಪತ್ತೆಗೆ ವ್ಯಾಪಕ ಶೋಧ

ಪುಟ ೧➔ ಆದರೆ ಗುರುವಾರ ಬಾಲಕಿಯ ತಾಯಿ ರೋಹಿಣಿ ಅವರು ನನ್ನ ಮಗಳನ್ನು ಯಾರೋ ಸಂಚು ರೂಪಿಸಿ ಕರೆದೊಯ್ದಿದ್ದಾರೆ. ಆಕೆ ಆಕಸ್ಮಿಕವಾಗಿ ಎಲ್ಲಿಯೋ ಬಿದ್ದಿರಲು ಸಾಧ್ಯವಿಲ್ಲ ಎಂದು ನೀಡಿರುವ ಹೇಳಿಕೆಯು ತನಿಖೆಯ ದಿಕ್ಕನ್ನೇ ಬದಲಿಸುವಂತೆ ಮಾಡಿದೆ. ಶ್ರೀನಂದಾ ಒಬ್ಬಳೇ ಇದ್ದ ಸಮಯವನ್ನು ನೋಡಿ, ಯಾವುದೋ ಮಾದಕ ದ್ರವ್ಯ ನೀಡಿ ಅಥವಾ ಬಲವಂತವಾಗಿ ಕರೆದೊಯ್ದಿದ್ದಾರೆ ಎಂದು ರೋಹಿಣಿ ಕಣ್ಣೀರು ಹಾಕುತ್ತಾ ಆರೋಪಿಸಿದ್ದಾರೆ. ಈ ಹೇಳಿಕೆಯು ಸ್ಥಳೀಯ ಪೊಲೀಸರು ಹಾಗೂ ಶೋಧನಾ ತಂಡಗಳಲ್ಲಿ ಗೊಂದಲದ ಜತೆಗೆ ಒತ್ತಡವನ್ನೂ ಹೆಚ್ಚಿಸಿದೆ.

ಇದರ ಜತೆಯಲ್ಲೇ ಶೋಧ ಕಾರ್ಯದಲ್ಲಿ ತೊಡಗಿರುವ ಕೆಲವು ಸಿಬ್ಬಂದಿ ಸೇರಿದಂತೆ ಸಾರ್ವಜನಿಕರು ಸಹ ಮಾಣಿಕ್ಯಧಾರದಲ್ಲಿ ಬಾಲಕಿ ನಾಪತ್ತೆಯಾಗಿರುವ ಸಾಧ್ಯತೆ ತೀರಾ ಕಡಿಮೆ ಇದೆ. ಪ್ರಕರಣದ ಹಿಂದೆ ಬೇರೇನೋ ಇದೆ ಎಂದು ಸಂಶಯ ವ್ಯಕ್ತಪಡಿಸುತ್ತಿರುವುದರಿಂದ ಪೊಲೀಸರು ತನಿಖೆಯ ಆಯಾಮವನ್ನು ಬದಲಿಸುವ ಬಗ್ಗೆ ಆಲೋಚಿಸುವಂತೆ ಮಾಡಿದೆ. ಬಾಲಕಿ ಶ್ರೀನಂದಾ ಮತ್ತವರ ಕುಟುಂಬ ಏಪ್ರಿಲ್ 7ರಂದು ಹಂಪಿಗೆ ಭೇಟಿ ನೀಡಿದ್ದು, ಅಲ್ಲಿಂದ ನೇರವಾಗಿ ದತ್ತಪೀಠಕ್ಕೆ ಆಗಮಿಸಿತ್ತು. ಆದರೆ ಬಾಲಕಿ ನಾಪತ್ತೆಯಿಂದ ಕುಟುಂಬದ ಸಂತೋಷದ ಕ್ಷಣಗಳು ಮಾಯವಾಗಿ ಮೌನ ಆವರಿಸಿಕೊಂಡಿದೆ.

ಮುಂದುವರಿದ ಶೋಧಕಾರ್ಯ: ಬಾಲಕಿಯ ಪತ್ತೆಗಾಗಿ ಮೂರನೇ ದಿನವೂ ಶೋಧ ಕಾರ್ಯ ತೀವ್ರಗೊಂಡಿದೆ. ಗಿರಿ, ಶಿಖರಗಳ ನಡುವೆ ಕಂದಕ, ಕೊರಕಲುಗಳನ್ನೆಲ್ಲಾ ಜಾಲಾಡಲಾಗುತ್ತಿದೆ. ಶೋಧ ಕಾರ್ಯಕ್ಕೆ ಶ್ವಾನದಳವನ್ನೂ ಬಳಸಿಕೊಳ್ಳಲಾಗಿದೆ.

ಪಶ್ಚಿಮ ವಲಯ ಐಜಿಪಿ ಭೇಟಿ: ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರು ಗುರುವಾರ ಮಾಣಿಕ್ಯಧಾರಕ್ಕೆ ಭೇಟಿ ನೀಡಿದ್ದಾರೆ. ನಂತರ ನಗರದಲ್ಲಿ ಎಸ್ಪಿ ಮತ್ತಿತರರೆ ಸಿಬ್ಬಂದಿಗಳಿಂದ ಮಾಹಿತಿ ಪಡೆದು, ತನಿಖೆ ಸಂಬಂಧ ಸಲಹೆಯನ್ನೇ ನೀಡಿದ್ದಾರೆ.

ಸದ್ಯ ಸ್ಥಳದಲ್ಲಿ ಅರಣ್ಯ ಇಲಾಖೆ, ಪೊಲೀಸ್ ಹಾಗೂ ಅಗ್ನಿಶಾಮಕ ದಳ, ಎಸ್‌ಡಿಆರ್‌ಎಫ್‌ನ 100ಕ್ಕೂ ಹೆಚ್ಚು ಸಿಬ್ಬಂದಿ ಸತತವಾಗಿ ಶೋಧ ಕಾರ್ಯದಲ್ಲಿ ತೊಡಗಿದ್ದಾರೆ. ಶೋಧಕ್ಕಾಗಿ ಡಾಗ್ ಸ್ಕ್ವಾಡ್, ಡ್ರೋನ್ ಹಾಗೂ ಥರ್ಮಲ್ ಡ್ರೋನ್‌ಗಳನ್ನು ಬಳಸಲಾಗುತ್ತಿದೆ.

ಅರಣ್ಯ ಸಚಿವರ ಆದೇಶ: ಶೋಧ ಕಾರ್ಯಾಚರಣೆಗೆ ಪೊಲೀಸರೊಂದಿಗೆ ಕೈಜೋಡಿಸುವಂತೆ ಅರಣ್ಯ ಇಲಾಖೆಗೆ ಸಚಿವ ಈಶ್ವರ ಬಿ. ಖಂಡ್ರೆ ಅವರು ಸೂಚನೆ ನೀಡಿದ್ದಾರೆ. ಜಿಲ್ಲಾಡಳಿತ ಮತ್ತು ಪೊಲೀಸ್ ಪಡೆಗೆ ನೆರವು ನೀಡಲು ನುರಿತ ಅರಣ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸುವಂತೆ ಸೂಚಿಸಿದ್ದಾರೆ. ಚಂದ್ರದ್ರೋಣ ಪರ್ವತ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರದಿದ್ದರೂ ಸಹ, ಆ ಪ್ರದೇಶವು ಕಡಿದಾದ ಗುಡ್ಡಗಳು ಮತ್ತು ದಟ್ಟವಾದ ಗಿಡಗಂಟಿಗಳಿಂದ ಕೂಡಿರುವ ಕಾರಣ ಬಾಲಕಿಯ ಸುರಕ್ಷತೆಯ ದೃಷ್ಟಿಯಿಂದ ಅರಣ್ಯ ಇಲಾಖೆಯ ಬೆಂಬಲ ಅತ್ಯಗತ್ಯ ಎಂದು ಸಚಿವರು ತಿಳಿಸಿದ್ದಾರೆ. ಬಾಲಕಿಯನ್ನು ಶೀಘ್ರವಾಗಿ ಪತ್ತೆ ಹಚ್ಚಲು ಥರ್ಮಲ್ ಡ್ರೋನ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಬಳಸುವಂತೆ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ರಕ್ಷಣಾ ಕಾರ್ಯಾಚರಣೆಯನ್ನು ಚುರುಕುಗೊಳಿಸುವಂತೆ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಸಚಿವರು ಆದೇಶ ನೀಡಿದ್ದಾರೆ.

ಪ.ಬಂಗಾಳಕ್ಕೆ 6 ಗ್ಯಾರಂಟಿ ಘೋಷಿಸಿದ ಮೋದಿ

• **ಹಲ್ದಿಯಾ:** ಪಶ್ಚಿಮ ಬಂಗಾಳದಲ್ಲಿ ಕ್ರೂರ ಸರ್ಕಾರ ನಡೆಯುತ್ತಿದೆ ಎಂದು ಆಡಳಿತದಲ್ಲಿರುವ ತೃಣಮೂಲ ಕಾಂಗ್ರೆಸ್(ಟಿಎಂಸಿ) ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿಯವರು. ಬಂಗಾಳವನ್ನು ಅಭಿವೃದ್ಧಿಯ ಹಾದಿಯಿಂದ ಹಿಂದಕ್ಕೆಳೆಯಲಾಗುತ್ತಿದೆ ಎಂದು ಟೀಕಿಸಿದರು.ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಶುಕ್ರವಾರ ಹಲ್ದಿಯಾ ನಗರದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಆರು ಗ್ಯಾರಂಟಿಗಳನ್ನು ಘೋಷಿಸಿದರು. ಮೊದಲನೆಯದಾಗಿ, ಟಿಎಂಸಿ ಸರ್ಕಾರದ ಭಯದ ಆಡಳಿತವನ್ನು ವಿಶ್ವಾಸದ ಆಡಳಿತ ವಾಗಿ ಬದಲಿಸುವುದಾಗಿ ಹೇಳಿದರು. ಎರಡನೆಯದಾಗಿ, ಆಡಳಿತ ವ್ಯವಸ್ಥೆಯನ್ನು ಸುಧಾರಿಸಿ ಸರ್ಕಾರಿ ಅಧಿಕಾರಿಗಳನ್ನು ಜನತೆಗೆ ಉತ್ತರದಾಯಕರನ್ನಾಗಿಸಲಾಗುವುದು ಎಂದು ಭರವಸೆ ನೀಡಿದರು.

ಮೂರನೆಯದಾಗಿ, ಭ್ರಷ್ಟಾಚಾರ ಹಾಗೂ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳ ಎಲ್ಲಾ ದಾಖಲೆಗಳನ್ನು ಮರು ಪರಿಶೀಲಿಸಲಾಗುವುದು ಎಂದು ಹೇಳಿದರು.

ನಾಲ್ಕನೆಯ ಭರವಸೆಯಲ್ಲಿ, ಭ್ರಷ್ಟಾಚಾರದಲ್ಲಿ ತೊಡಗಿರುವ ಯಾರೇ ಆಗಿರಲಿ ಕಾನೂನಿನಲ್ಲಿ ಶಿಕ್ಷೆಗೆ ಒಳಗಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದರು. ಐದನೆಯದಾಗಿ, ಕಾನೂನಾತ್ಮಕವಾಗಿ ಭಾರತದಲ್ಲಿ ಆಶ್ರಯ ಪಡೆದವರಿಗೆ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು. ಜತೆಗೆ ನುಸುಳುವವರನ್ನು ದೇಶದಲ್ಲಿ ಉಳಿಯಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆರನೆಯದಾಗಿ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ರಾಜ್ಯ ಸರ್ಕಾರಿ ನೌಕರರು ಮತ್ತು ಶಿಕ್ಷಕರಿಗೆ 7ನೇ ವೇತನ ಆಯೋಗವನ್ನು ಜಾರಿಗೆ ತರುವುದಾಗಿ ಹೇಳಿದರು.

ಮತಬ್ಯಾಂಕ್ ರಾಜಕಾರಣ

ಟಿಎಂಸಿ ಧರ್ಮ ಆಧಾರಿತ ಮೀಸಲಾತಿ ನೀತಿಯನ್ನು ಅನುಸರಿಸಿ, ಮತ ಬ್ಯಾಂಕ್ ರಾಜಕಾರಣ ನಡೆಸುತ್ತಿದೆ ಎಂದು ಟೀಕಿಸಿದ ಮೋದಿ, ರಾಜ್ಯದ ಅಭಿವೃದ್ಧಿಗಾಗಿ ಡಬಲ್ ಎಂಜಿನ್ ಸರ್ಕಾರ ಅಗತ್ಯವಿದೆ ಎಂದರು. ಪ್ರಧಾನಿ ಮತ್ತು ಮುಖ್ಯಮಂತ್ರಿ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ರಾಜ್ಯಕ್ಕೆ ಪ್ರಯೋಜನವಾಗುತ್ತದೆ ಎಂದು ಹೇಳಿದರು.ಕೊನೆಯಲ್ಲಿ ಸಬ್ಕಾ ಸಾಥ್, ಸಬ್ಕಾ ವಿಕಾಸ್ ಎಂಬ ಕೇಂದ್ರ ಸರ್ಕಾರದ ನೀತಿಯನ್ನು ಪುನರುಚ್ಚರಿಸಿ, ಬಂಗಾಳವನ್ನು ದೋಚಿದ ಎಲ್ಲರೂ ಕಾನೂನಿನ ಮುಂದೆ ಉತ್ತರಿಸಬೇಕಾಗುತ್ತದೆ ಎಂದು ಮೋದಿ ಹೇಳಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ವಿಶ್ವಾಸದ ವಾತಾವರಣ

ರಾಜ್ಯದಲ್ಲಿ ಭಯದ ವಾತಾವರಣವಿದ್ದು ಹೂಡಿಕೆಗಳು ಕುಂಠಿತಗೊಂಡಿವೆ . ಭಯದ ವಾತಾವರಣದಲ್ಲಿ ಹೂಡಿಕೆ ಸಾಧ್ಯವಿಲ್ಲ. ವಿಶ್ವಾಸ ನಿರ್ಮಾಣವಾದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ವಿಶ್ವಾಸದ ವಾತಾವರಣವನ್ನು ನಿರ್ಮಿಸುತ್ತೇವೆ ಎಂದು ಅವರು ಭರವಸೆ ನೀಡಿದರು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಆಡಳಿತವನ್ನು ಟೀಕಿಸಿದ ಅವರು, ದೇಶದ ಇತರ ರಾಜ್ಯಗಳು ಅಭಿವೃದ್ಧಿಯತ್ತ ಸಾಗುತ್ತಿರುವಾಗ ಬಂಗಾಳ ಮಾತ್ರ ಹಿಂದುಳಿದಿದೆ ಎಂದರು. ವಿಕಸಿತ ಬಂಗಾಳಕ್ಕಾಗಿ ಟಿಎಂಸಿ ಸರ್ಕಾರವನ್ನು ಕೆಳಗಿಳಿಸುವುದು ಅನಿವಾರ್ಯ ಎಂದು ಮೋದಿ ಕರೆ ನೀಡಿದರು.

ಕೇರಳ, ಅಸ್ಸಾಂನಲ್ಲಿ ಭರ್ಜರಿ ಮತದಾನ

ಪುಟ ೧➔ ಈ ಚುನಾವಣೆಯಲ್ಲಿ 126 ಕ್ಷೇತ್ರಗಳಿಂದ ಒಟ್ಟು 722 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದು, ಸುಮಾರು 2.5 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. 2021ರ ಚುನಾವಣೆಯಲ್ಲಿ ಅಸ್ಸಾಂನಲ್ಲಿ ಶೇ.82.04 ಮತದಾನ ದಾಖಲಾಗಿತ್ತು.

ಕೇರಳದಲ್ಲಿ ಹೆಚ್ಚಿದ ಮತದಾನ ಪ್ರಮಾಣ: ಮತದಾನ ಪ್ರಮಾಣ ಶೇ.90 ತಲುಪುವ ಸಾಧ್ಯತೆ ಇದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ರಥನ್ ಯು. ಕೇಲ್ಕರ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. 2021ರಲ್ಲಿ ಕೇರಳದಲ್ಲಿ ಶೇ.74.06 ಮತದಾನ ದಾಖಲಾಗಿತ್ತು. ಕೇರಳದಲ್ಲಿ ಸಾಂಪ್ರದಾಯಿಕವಾಗಿ ಎಡಪಕ್ಷದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವಿನ ಸ್ಪರ್ಧೆ ಹೆಚ್ಚು ತೀವ್ರವಾಗಿದ್ದು, ಈ ಬಾರಿ 140 ಕ್ಷೇತ್ರಗಳಿಂದ 883 ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ಒಟ್ಟು 2.71 ಕೋಟಿ ಮತದಾರರು ಇದ್ದಾರೆ. ಸಿಪಿಐ(ಎಂ) ನಾಯಕ ಸಿ.ಎನ್. ಮೋಹನನ್ ಅವರು ಮತದಾನ ಪ್ರಮಾಣ ಹೆಚ್ಚಿರುವುದು ಎಲ್‌ಡಿಎಫ್‌ಗೆ ಲಾಭಕರ ಎಂದು ಹೇಳಿದ್ದಾರೆ. ಬಿಜೆಪಿ ನಾಯಕ ಕೆ.ಎಸ್. ಶೈಜು ಅವರು ಮಹಿಳಾ ಮತದಾರರ ಹೆಚ್ಚಿನ ಭಾಗವಹಿಸುವಿಕೆಯೇ ಮತದಾನ ಪ್ರಮಾಣ ಏರಿಕೆಗೆ ಕಾರಣ ಎಂದು ಹೇಳಿದ್ದಾರೆ. ಕಾಂಗ್ರೆಸ್ ನಾಯಕ ದೀಪ್ತಿ ಮೇರಿ ವರ್ಗೀಸ್ ಅವರು ಮತದಾನ ಪ್ರಮಾಣ ಏರಿಕೆಗೆ ಕಾರಣಗಳನ್ನು ವಿವರವಾಗಿ ವಿಶ್ಲೇಷಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ಹಂತದ ಚುನಾವಣೆ: ಈ ಚುನಾವಣೆಯು ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಮೊದಲ ಹಂತವಾಗಿದೆ. ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ತಮಿಳುನಾಡಿನಲ್ಲಿ ಏ.23 ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಎಲ್ಲಾ ರಾಜ್ಯಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.

ಉಪ ಚುನಾವಣೆ ಶೇ.68 ಮತದಾನ

ಪುಟ ೧➔ **ಬೆಳಗ್ಗೆಯಿಂದಲೇ ಮತಗಟ್ಟೆಗಳ ಮುಂದೆ ಮಹಿಳೆಯರು, ಯುವಜನರು ಹಾಗೂ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಆಗಮಿಸಿ ಹುಮ್ಮಸ್ಸಿನಿಂದ ಮತದಾನ ಮಾಡಿದರು. ಬಾಗಲಕೋಟೆ ಕ್ಷೇತ್ರ ಉಪಚುನಾವಣೆ ಹಿನ್ನೆಲೆಯಲ್ಲಿ ಗೋವಾ ಹಾಗೂ ಮಂಗಳೂರು ಕಡೆ ದುಡಿಯಲು ಹೋದವರು ಬಸ್‌ನಲ್ಲಿ ಬಂದು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು.**

ಪುದುಚೇರಿಯಲ್ಲಿ ಶೇ.90 ಮತದಾನ

• **ಬೆಂಗಳೂರು:** ಪುದುಚೇರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಗುರುವಾರ ನಡೆದಿದ್ದು, ಶೇ.90ರಷ್ಟು ಮತ ಚಲಾವಣೆಯಾಗಿದೆ. ಇದರಿಂದ ಬಿಜೆಪಿ ಮತ್ತೆ ಅಧಿಕಾರಕ್ಕೇರುವ ನಿರೀಕ್ಷೆ ಗರಿಗೆದರಿದೆ. ಚುನಾವಣೆಗೆ ಇನ್ನೂ ಎರಡು ವರ್ಷಗಳಿರುವಾಗ ಬಿಜೆಪಿ ರಾಷ್ಟ್ರೀಯ ನಾಯಕತ್ವವು ನಿರ್ಮಲ್ ಕುಮಾರ್ ಸುರಾಣ ಅವರನ್ನು ಪುದುಚೇರಿಯ ಪಕ್ಷದ ಉಸ್ತುವಾರಿಯಾಗಿ ನಿಯೋಜಿಸಿತ್ತು. ನಿರ್ಮಲ್ ಕುಮಾರ್ ಸುರಾಣ ಕಾಲಿಗೆ ಚಕ್ರ ಕಟ್ಟಿದಂತೆ ಅಲ್ಲಿ ಓಡಾಡಿ ಕಾರ್ಯತಂತ್ರ ರೂಪಿಸಿದ್ದರು. ಅವರ ಪರಿಶ್ರಮದ ಪರಿಣಾಮವಾಗಿಯೇ 2021ರಲ್ಲಿ ಅಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಏರಿತ್ತು. ಸಣ್ಣ ರಾಜ್ಯವಾಗಿದ್ದರೂ ಪುದುಚೇರಿಯಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದ್ದವು. ಆದ್ದರಿಂದ ಅಲ್ಲಿ ಬಿಜೆಪಿ ಅಗತ್ಯವೇನು ಎಂಬುದನ್ನು ಪಕ್ಷದ ಕಾರ್ಯಕರ್ತರು ಮತ್ತು ಅವರ ಮೂಲಕ ಜನ ಸಾಮಾನ್ಯರಿಗೆ ಅರ್ಥ ಮಾಡಿಸಲಾಯಿತು. ಈ ಬಾರಿಯ ಚುನಾವಣೆಯಲ್ಲಿ ಎಐಎನ್‌ಆರ್‌ಸಿ ಜತೆ ಬಿಜೆಪಿ ಮೈತ್ರಿ ಮಾಡಿಕೊಳ್ಳುವಲ್ಲಿಯೂ ಸುರಾಣ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಕಿರುಸುದ್ದಿ

ದೇವರಾಜ ಅರಸ್ ಕಾಲೇಜಿಗೆ ಉತ್ತಮ ಫಲಿತಾಂಶ

• **ದೊಡ್ಡಬಳ್ಳಾಪುರ:** ದ್ವಿತೀಯ ಪಿಯು ಪರೀಕ್ಷೆಯಲ್ಲಿ ಇಲ್ಲಿನ ಶ್ರೀದೇವರಾಜ ಅರಸ್ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ ಲಭ್ಯವಾಗಿದೆ. ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಟಿ.ಎಸ್.ತೇಜಸ್ವಿನಿ 600ಕ್ಕೆ 593 ಅಂಕ ಪಡೆದು ಉನ್ನತ ಸಾಧನೆ ಮಾಡಿದ್ದಾಳೆ. ಕನ್ನಡ, ಭೌತಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಅಂಕ ಪಡೆದಿದ್ದಾಳೆ. ಕಾಲೇಜಿನಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ 230 ವಿದ್ಯಾರ್ಥಿಗಳಲ್ಲಿ 204 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಆ ಪೈಕಿ 50 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. 118 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 36 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿಜ್ಞಾನ ವಿಭಾಗ ಪಿಸಿಎಂಬಿಯಲ್ಲಿ ಶೇ.92.3, ಪಿಸಿಎಂಸಿಯಲ್ಲಿ ಶೇ.76.19 ಮತ್ತು ವಾಣಿಜ್ಯ ವಿಭಾಗದಲ್ಲಿ ಶೇ.91.05ರಷ್ಟು ಫಲಿತಾಂಶ ಲಭ್ಯವಾಗಿದೆ.

50 ವಿದ್ಯಾರ್ಥಿಗಳಿಗೆ ಡಿಸ್ಟಿಂಕ್ಷನ್: ವಿಜ್ಞಾನ ವಿಭಾಗದ ಪಿಸಿಎಂಬಿಯಲ್ಲಿ ಟಿ.ಎಸ್.ತೇಜಸ್ವಿನಿ 593, ಪಿ.ನಂದಿನಿ 580, ಎಸ್.ಗಂಗೋತ್ರಿ 577, ಎಸ್.ವೈಷ್ಣವಿ 574, ಪಿ.ನಯನಾ 567, ತೇಜಸ್ವಿನಿ 555, ಎಚ್.ಎಂ.ಜ್ಯೋತಿ 552, ಪಿಸಿಎಂಸಿಎಸ್ ವಿಭಾಗದಲ್ಲಿ ಎಂ.ರಕ್ಷಿತಾ 580, ಎಂ.ನಾಗೇಶ್ವರಿ 570, ಆರ್.ಕುಸುಮಾ 566, ಡಿ.ಎಚ್.ಹಿಮಾ ಶ್ರೀ 561, ವಾಣಿಜ್ಯ ವಿಭಾಗದಲ್ಲಿ ವಿ.ಪೂಜಾ ಶ್ರೀ 588, ಅಕ್ಷರ ಕುಮಾರಿ 578, ಎಸ್.ಮನೋಜ್ 578, ಎಸ್.ಕೀರ್ತನಾ 575, ಎ.ಕವನಾ 569, ಸಿ.ಎಸ್.ವಿದ್ಯಾಶ್ರೀ 565, ಎಂ.ಭಾವನಾ 564, ಜಾರ್ಜ್ ಸಂತೋಷ್ 559, ಡಿ.ಎಂ.ಶ್ರಾವಂತಿ 558 ಅಂಕ ಪಡೆದಿದ್ದಾರೆ. 550ಕ್ಕಿಂತ ಹೆಚ್ಚಿನ ಅಂಕವನ್ನು ಪಡೆದ ಸಾಧನೆ ಮಾಡಿದ್ದಾರೆ.

ಇವ ನಮ್ಮವ ಇವ ನಮ್ಮವ ಕಾನೂನು ಅಂಗೀಕಾರ: ಸ್ವಾಗತ

• **ಬೆಂಗಳೂರು:** ಮದುವೆ ಆಯ್ಕೆಯ ಸ್ವಾತಂತ್ರ್ಯ, ಮರ್ಯಾದೆ ಮತ್ತು ಸಂಪ್ರದಾಯ ಹೆಸರಿನಲ್ಲಿ ಅಪರಾಧವನ್ನು ತಡೆಗಟ್ಟುವಿಕೆಗಾಗಿ ರೂಪಿಸಲಾದ ಇವ ನಮ್ಮವ ಇವ ನಮ್ಮವ ಕಾನೂನು ಅನ್ನು ರಾಜ್ಯ ಸರ್ಕಾರ ಅಂಗೀಕರಿಸಿರುವುದು ಸ್ವಾಗತಾರ್ಹ. ಈ ವಿಧೇಯಕವನ್ನು ರಾಜ್ಯಪಾಲರು ಅನುಮೋದನೆ ನೀಡುವಂತೆ ಮರ್ಯಾದೆಗೇಡು ಹತ್ಯೆ ವಿರೋಧಿ ಸಮಿತಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಸಮಿತಿ ಮುಖಂಡ ಮಾವಳ್ಳಿ ಶಂಕರ್ ಮಾತನಾಡಿ, ಮರ್ಯಾದೆ ಹೆಸರಿನಲ್ಲಿ ನಡೆಯುವ ಕೊಲೆ, ದೈಹಿಕ ಬೆದರಿಕೆ, ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ ಸೇರಿದಂತೆ ಎಲ್ಲಾ ಹಿಂಸೆಯನ್ನು ಕಾನೂನು ಅಪರಾಧವೆಂದು ಪರಿಗಣಿಸಲಾಗುತ್ತದೆ. ಹೀಗಾಗಿ ರಾಜ್ಯದಲ್ಲಿ ಹೆಚ್ಚುತ್ತಿರುವ ಮರ್ಯಾದಾ ಹತ್ಯೆಗಳ ತಡೆಯುವ ಸಲುವಾಗಿ ರೂಪಿಸಲಾದ ಇವ ನಮ್ಮವ ಇವ ನಮ್ಮವ ಕಾನೂನು ಅತ್ಯಂತ ಮಹತ್ವದ ಸಂಗತಿಯಾಗಿದೆ ಎಂದರು. ಈ ಕಾನೂನು ವ್ಯಕ್ತಿಯ ಆಯ್ಕೆ ಸ್ವಾತಂತ್ರ್ಯ, ಘನತೆ ಮತ್ತು ಮೂಲ ಹಕ್ಕನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರವಹಿಸಲಿದೆ. ಆ ನಿಟ್ಟಿನಲ್ಲಿ ರಾಜ್ಯಪಾಲರು ಈ ಕಾನೂನಿಗೆ ಅನುಮೋದನೆ ನೀಡುವಂತೆ ಒತ್ತಾಯಿಸಿದರು.

ಏ.16ರವರೆಗೆ ಸಾರಿಗೆ ನೌಕರರ ಅಂತರ ನಿಗಮ ವರ್ಗಾವಣೆ: ಆಕ್ಷೇಪಣೆಗೆ ಅವಕಾಶ

• **ಬೆಂಗಳೂರು:** ಕೆಎಸ್ಆರ್‌ಟಿಸಿ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ ಅಂತರ ನಿಗಮ ವರ್ಗಾವಣೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಪಟ್ಟಿಗೆ ಸಂಬಂಧಿಸಿದಂತೆ ಏ.9 ರಿಂದ 16ರ ಸಂಜೆ 5.30ರವರೆಗೆ ಲಿಖಿತ ಆಕ್ಷೇಪಣೆ ಸಲ್ಲಿಸಲು ನೌಕರರಿಗೆ ಅವಕಾಶ ನೀಡಲಾಗಿದೆ ಎಂದು ಕೆಎಸ್ಆರ್‌ಟಿಸಿ ತಿಳಿಸಿದೆ. ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆ ಜ.10ರಿಂದ ಫೆ.28ರವರೆಗೆ ಆನ್‌ಲೈನ್ ಮೂಲಕ ಡಿಡಿಡಿ. ಎಚ್ಆರ್‌ಎಂಎಸ್/ಆರ್ಎಂಎಸ್ ರಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ರ ನೌಕರರ ವರ್ಗಾವಣೆಯ ಸಂಭಾವನೀಯ ಪಟ್ಟಿಯನ್ನು ksrtc.karnataka.gov.in ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ. ಪಟ್ಟಿಗೆ ಸಂಬಂಧಿಸಿದಂತೆ ಏ.9ರಿಂದ 16 ಸಂಜೆ 5.30ರವರೆಗೆ ಲಿಖಿತ ಆಕ್ಷೇಪಣೆ ಸಲ್ಲಿಸಲು ನೌಕರರಿಗೆ ಅವಕಾಶ ನೀಡಲಾಗಿದೆ. ನೌಕರರು ಆಕ್ಷೇಪಣೆಗಳನ್ನು ಕಡ್ಡಾಯವಾಗಿ ಸಂಬಂಧಪಟ್ಟ ಭಾಗದ ಆಡಳಿತಾಧಿಕಾರಿಗಳಿಗೆ ಸಲ್ಲಿಸಿ, ಸ್ವೀಕೃತಿ ಪಡೆಯಬೇಕು. ನೌಕರರು ವೈಯಕ್ತಿಕವಾಗಿ ಅಥವಾ ಅಂಚೆಯ ಮೂಲಕ ಕೇಂದ್ರ ಕಚೇರಿಗೆ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದೆ.

ಸಂಗೀತ ಕಾರ್ಯಕ್ರಮದಲ್ಲಿ ಮೊಬೈಲ್ ಕಳವು: ಬಂಧನ

• **ಬೆಂಗಳೂರು:** ಚಿಕ್ಕಲ್ಲಸಂದ್ರ ರಸ್ತೆಯಲ್ಲಿ ನಡೆದಿದ್ದ ಸಂಗೀತ ಕಾರ್ಯಕ್ರಮದ ವೇಳೆ ಮೊಬೈಲ್ ಕಳವು ಮಾಡಿದ್ದ ಓರ್ವ ವ್ಯಕ್ತಿಯನ್ನು ಚಿಕ್ಕಜಾಲ ಪೊಲೀಸರು ಬಂಧಿಸಿ, ಆತನಿಂದ 2.45 ಲಕ್ಷ ರೂ. ಮೌಲ್ಯದ 3 ವಿವಿಧ ಕಂಪನಿಯ ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಹೆಬ್ಬಾಳದ ಆನಂದ ನಗರದ ನಿವಾಸಿಯೊಬ್ಬರು ಚಿಕ್ಕಲ್ಲಸಂದ್ರ ರಸ್ತೆಯ ಟೆರ್ರಾ ಫಾರಂನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಕಳವಾಗಿತ್ತು. ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಬೆಂಗಳೂರಿನಿಂದ ನಿತ್ಯವೂ ಇಲ್ಲಿಗೆ ಕಸ ಸಾಗಣೆ | ಕಸದ ರಾಶಿಗೆ ಬೆಂಕಿ ಹಚ್ಚುವುದರಿಂದ ಪರಿಸರ ಮಾಲಿನ್ಯ

ಸೋಲೂರು ಬಳಿ ಎಲ್ಲೆಂದರಲ್ಲಿ ಕಸದ ರಾಶಿ

▸ **ತಾವರೆಕೆರೆ ನಾಗರಾಜು**

• **ತಾವರೆಕೆರೆ:** ಬೆಂಗಳೂರಿನಲ್ಲಿ ಸಂಗ್ರಹವಾಗುವ ಟನ್ ಗಟ್ಟಲೆ ಕಸವನ್ನು ಸೋಲೂರು ಮತ್ತು ಅದರ ಸುತ್ತಮುತ್ತಲಿನ ಹೆದ್ದಾರಿ ರಸ್ತೆಯಲ್ಲೇ ಜಿಬಿಎ ಗುತ್ತಿಗೆದಾರರು ಸುರಿದು ಹೋಗುವುದರಿಂದ ಎಲ್ಲೆಂದರಲ್ಲಿ ಕಸದ ರಾಶಿಯೇ ಕಂಡು ಬರುವುದು.

ಹೊಸಕೋಟೆ ತಾಲೂಕು ಜಡಿಗೇನಹಳ್ಳಿ ಹೋಬಳಿಯ ಓರೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸವನ್ನು ಎಲ್ಲೆಂದರಲ್ಲಿ ಸುರಿದು ಹೋಗುತ್ತಿರುವುದರಿಂದ ಇಲ್ಲಿನ ನಿವಾಸಿಗಳು ಅಧಿಕಾರಿಗಳ ಕ್ರಮದ ವಿರುದ್ಧ ಕಿಡಿಕಾರಿದ್ದಾರೆ.

ಪಂಚಾಯಿತಿಗೆ ಕೂಗಳತೆ ದೂರದಲ್ಲಿರುವ ಸೋಲೂರು ಗ್ರಾಮದ ಬಳಿ ಬೆಂಗಳೂರಿನಿಂದ ಟನ್ ಗಟ್ಟಲೆ ಕಸದ ರಾಶಿಯನ್ನು ತಂದು ಸುರಿದು ಬೆಂಕಿ ಹಚ್ಚುವರು. ರಾಶಿ ಕೊಳೆತ ಕಸಕ್ಕೆ ಬೆಂಕಿ ಹಚ್ಚುವುದರಿಂದ ಎಲ್ಲೆಂದರಲ್ಲಿ ಹೊಗೆ ಹರಡುವುದರಿಂದ ಮಾಲಿನ್ಯ ಉಂಟಾಗುತ್ತಿದೆ. ಜನರ ಉಸಿರಾಟಕ್ಕೂ ತೊಂದರೆಯಾಗಿದೆ.

ಹೆದ್ದಾರಿ ಬಳಿಯಲ್ಲಿ ಹೊಗೆ: ಸೋಲೂರಿನಿಂದ ಓರೋಹಳ್ಳಿ, ಇಂಜನಹಳ್ಳಿ ಮುಖಾಂತರ ಮಾಲೂರು ಕಡೆಗೆ ಹಾಗೂ ಇದೇ ರಸ್ತೆಯಲ್ಲಿ ಎಡಗಡೆಗೆ ಅತ್ತಿವಟ್ಟ ಗ್ರಾಮದಿಂದ ರಾಷ್ಟ್ರೀಯ ಹೆದ್ದಾರಿ ಎನ್‌ಎಚ್-75 ರಸ್ತೆ ಸಂಪರ್ಕ ಕಲ್ಪಿಸುತ್ತದೆ. ಅದೇ ರೀತಿ ಬಲಗಡೆಗೆ ಸರ್ಕಾರದ ಅರಣ್ಯ ಮುಖಾಂತರ ಕಾಲುದಾರಿ ಇದೆ. ಜಡಿಗೇನಹಳ್ಳಿ ಮುಖಾಂತರ ಮಾಲೂರು ರಸ್ತೆಗೆ ಸೇರುತ್ತದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ಅನೇಕ ವಾಹನಗಳು ಸಂಚಾರ ಮಾಡುತ್ತವೆ. ದ್ವಿಚಕ್ರ ವಾಹನ ಚಲಿಸುವ ಚಾಲಕರು ಈ ಕಸದ ರಾಶಿಯಿಂದ ಬರುವ ಹೊಗೆ ಹಾಗೂ ವಾಸನೆಯನ್ನು ತಪ್ಪಿಸಿಕೊಳ್ಳಲು ಮೂಗು ಮುಚ್ಚಿಕೊಂಡು ವಾಹನ ಚಲಿಸುವಂತಾಗಿದೆ.

ಹೊಗೆಯಿಂದ ವಾಹನಗಳೇ ಕಾಣಿಸುವುದಿಲ್ಲ: ಒಂದೊಂದು ಸಲ ದಟ್ಟವಾದ ಹೊಗೆಯಿಂದ ಮುಂದೆಗಡೆ ಬರುವ ವಾಹನ ಹಾಗೂ ರಸ್ತೆ ಕಾಣದೆ ಅಪಘಾತದ ಸಂಭವ ನಡೆದಿದೆ. ಏನಾದರೂ ಜನಪ್ರತಿನಿಧಿಗಳು ಅಧಿಕಾರಿಗಳು ನಮಗೆ ಏನು ಗೊತ್ತಿಲ್ಲದಂತೆ ಮೂಖರಾಗಿದ್ದಾರೆ. ಇಲ್ಲಿ ಚಲಿಸುವ ವಾಹನ ಸವಾರರು ಹಾಗೂ ಅಕ್ಕಪಕ್ಕದ ತೋಟದ ರೈತರು ಈ ಹೊಗೆಯಿಂದ ತತ್ತರಿಸಿ ಹೋಗಿದ್ದಾರೆ. ತೋಟದಲ್ಲಿ ಬೆಳೆ ಹಾಕಿದರೆ ಈ ಹೊಗೆ ಹಾಗೂ ವಾಸನೆಯಿಂದ ತೋಟದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ ಎಂದು ರೈತರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಈ ಕಸದ ರಾಶಿಯನ್ನು ಲಾರಿಯಲ್ಲಿ ತಂದು ಈ ಜಾಗದಲ್ಲಿ ಹಾಕಲು ಕೆಲವು ದುಷ್ಕರ್ಮಿಗಳು ಅವರ ಬಳಿ ಹಣವನ್ನು ತೆಗೆದುಕೊಂಡು ಅವರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಇದನ್ನೇ ಬಂಡವಾಳವಾಗಿಸಿಕೊಂಡು ಪ್ರತಿನಿತ್ಯ ರಾತ್ರೋರಾತ್ರಿ ಕಸ ತಂದು ಸುರಿಯಲು ಕೆಲವು ಗ್ರಾಮದ ಕಿಡಿಗೇಡಿಗಳು ಟೊಂಕ ಕಟ್ಟಿ ನಿಂತು ಕಸವನ್ನು ಇಲ್ಲೇ ಹಾಕಬೇಕೆಂದು ಕುಮ್ಮಕ್ಕು ನೀಡುತ್ತಿದ್ದಾರೆ.

ಇದರಲ್ಲಿ ಪ್ಲಾಸ್ಟಿಕ್ ಹಾಗೂ ಕಸದ ರಾಶಿಯೇ ಹೆಚ್ಚಾಗಿದೆ. ಈ ಭಾಗದ ಜನತೆ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇತ್ತ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಕೂಡಲೇ ಕ್ರಮವಹಿಸಿ ಈ ಕಸದ ರಾಶಿ ಹಾಕುವುದನ್ನು ತಡೆಯಬೇಕೆಂದು ಸ್ಥಳೀಯರ ಒತ್ತಾಯವಾಗಿದೆ.



ಜನರ ಜೀವದ ಜತೆ ಚೆಲ್ಲಾಟ

ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸೊಳ್ಳೆಯಿಂದ ಮಾರಕ ರೋಗಗಳು ಹರಡುವ ಭೀತಿ ತಲೆ ದೂರಿದೆ. ಈ ಬಗ್ಗೆ ಕಾಳಜಿ ವಹಿಸಿ ಸರಿಪಡಿಸುವ ಗೋಜಿಗೆ ಹೋಗದೆ ಜನರ ಜೀವದೊಂದಿಗೆ ಚೆಲ್ಲಾಟವಾಡುವ ಕೆಲಸ ಮಾಡುತ್ತಿದ್ದಾರೆ ಎಂದು ರಾಜು ಸೋಲೂರು ಹಾಗೂ ಗ್ರಾಮಸ್ಥರು ಆರೋಪಿಸಿದ್ದಾರೆ.

ದಿಗಂತ ವಿಶೇಷ

ಚರಂಡಿಗಳಿಂದಲೂ ದುರ್ವಾಸನೆ

ಕೆಲವು ಬೀದಿಯಲ್ಲಿ ಚರಂಡಿ ನೀರು ಅಸ್ವಚ್ಛತೆ, ಕೊಳಚೆಯಿಂದಾಗಿ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿದ್ದು, ಗ್ರಾಮಗಳಲ್ಲಿ ಬೇಸಿಗೆ ಕಾಲ ಆಗಿರುವುದರಿಂದ ಸೊಳ್ಳೆಗಳ ಹಾಗೂ ಕ್ರಿಮಿಗಳ ಕಾಟದಿಂದ ನಿದ್ದೆಬಾರದೆ ಮಕ್ಕಳು ಸಹ ಪರದಾಡುವ ಸ್ಥಿತಿ ಎದುರಾಗುತ್ತಿದೆ. ಸೊಳ್ಳೆ ಅದರಿಂದ ಬರುವ ರೋಗವನ್ನು ನಿಯಂತ್ರಿಸುವಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ವಿಫಲರಾಗಿದ್ದಾರೆ. ಹೈಟೆಕ್ ಗ್ರಾಮ ಪಂಚಾಯಿತಿ ಎಂದು ಕೀರ್ತಿಗಳಿಸಿದ ಪಂಚಾಯಿತಿಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಅಸ್ವಚ್ಛತೆ ಪಂಚಾಯಿತಿ ಎಂಬ ಹೆಸರುಗಳಿಸಲು ಕೆಲವೇ ದಿನಗಳು ಕಾಯಬೇಕಾದ ಸಂದರ್ಭ ಒದಗಬಹುದು ಎಂಬ ಆರೋಪಗಳು ಕೇಳಿ ಬರುತ್ತಿವೆ.

ಬೆಂಕಿ ಹಚ್ಚುವವರ ವಿರುದ್ಧ ಕ್ರಮ

ಸೋಲೂರು ಗ್ರಾಮ ನಮ್ಮ ಪಂಚಾಯಿತಿಗೆ ಒಳಪಡುತ್ತದೆ. ಆದರೆ, ಇಲ್ಲಿ ಕಸದ ರಾಶಿ ಹಾಕಿ ಬೆಂಕಿ ಹಚ್ಚುತ್ತಿರುವವರು ಇವರಿಗೆ ಇಲ್ಲಿ ಲಾರಿಯಲ್ಲಿ ಕಸವನ್ನು ತಂದು ಸುರಿಯಲು ಯಾರು ಸಹಕಾರ ನೀಡುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿಲ್ಲ. ಸ್ಥಳ ಪರಿಶೀಲನೆ ಮಾಡಿ ಕಾನೂನು ರೀತಿಯಾಗಿ ಕಸ ಹಾಕದೆ ನಿಲ್ಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಲೋಕೇಶ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ 6.7 ಟನ್ ತ್ಯಾಜ್ಯ ತೆರವು

• **ಬೆಂಗಳೂರು:** ಸ್ವಚ್ಛ ಸರ್ವೇಕ್ಷಣಾ 2025-26ರ ವಿಶೇಷ ಸ್ವಚ್ಛತಾ ಅಭಿಯಾನದ ಅಂಗವಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 290 ಪೌರಕಾರ್ಮಿಕರು ಹಾಗೂ ಸಿಬ್ಬಂದಿ ಭಾಗಿಯಾಗಿ 6.7 ಟನ್ ತ್ಯಾಜ್ಯ ತೆರವುಗೊಳಿಸಲಾಗಿದೆ ಎಂದು ಕೇಂದ್ರ ನಗರ ಪಾಲಿಕೆ ತಿಳಿಸಿದೆ.

ಈ ಬಗ್ಗೆ ಮಾಧ್ಯಮಕ್ಕೆ ಮಾಹಿತಿ ನೀಡಿರುವ ಪಾಲಿಕೆ, ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವುದು ಹಾಗೂ ತ್ಯಾಜ್ಯಮುಕ್ತ ನಗರಪಾಲಿಕೆ ರೂಪಿಸಲು ಹಾಗೂ ಸ್ವಚ್ಛ ಸರ್ವೇಕ್ಷಣಾ 2025-26 ರ ಶ್ರೇಯಾಂಕ ಪಟ್ಟಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಉತ್ತಮ ಸ್ಥಾನ ಗಳಿಸಬೇಕಾಗಿದ್ದು, ವಿಶೇಷ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ವಿಶೇಷ ಸ್ವಚ್ಛತಾ ಅಭಿಯಾನದ ಅಂಗವಾಗಿ 29 ಬೃಹತ್ ನೀರುಗಾಲುವೆ ಸುತ್ತಲಿನ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಶುಚಿಗೊಳಿಸಲಾಗಿದೆ, ತ್ಯಾಜ್ಯ ಹಾಕದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು ಎಂದು ಪಾಲಿಕೆ ತಿಳಿಸಿದೆ.

ಸ್ವಚ್ಛತಾ ಕಾರ್ಯದಲ್ಲಿ 214 ಪೌರಕಾರ್ಮಿಕರು ಹಾಗೂ 76 ಇತರೆ ಸ್ವಚ್ಛತಾ ಸಿಬ್ಬಂದಿ ಭಾಗಿಯಾಗಿದ್ದು, ಸುಮಾರು 6.7 ಟನ್ ತ್ಯಾಜ್ಯ ತೆರವುಗೊಳಿಸಲಾಯಿತು. ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆಯಂತೆ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ಮೇಲುಸ್ತುವಾರಿಯಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು ಎಂದು ಪಾಲಿಕೆ ತಿಳಿಸಿದೆ.



ನಂದಗುಡಿ ಗ್ರಾಪಂನಲ್ಲಿ ಮಹಿಳಾ ದಿನಾಚರಣೆ, ಕ್ರೀಡಾಕೂಟ

ಮಹಿಳೆಯರಿಂದಲೂ ನಿರಂತರ ದುಡಿಮೆ

• **ತಾವರೆಕೆರೆ:** ಗ್ರಾಮೀಣ ಮಹಿಳೆಯರು ಇಡೀ ಕುಟುಂಬದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಮುಂತಾದ ಜವಾಬ್ದಾರಿ ಹೊತ್ತುಕೊಂಡು ದಣಿವಿಲ್ಲದೇ ದುಡಿಯುತ್ತಿರುತ್ತಾರೆಂದು ಪಂಚಾಯಿತಿ ಕಾರ್ಯದರ್ಶಿ ಉಷಾ ತಿಳಿಸಿದರು.

ಅವರು ಹೊಸಕೋಟೆ ತಾಲೂಕು ನಂದಗುಡಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಕ್ರೀಡಾಕೂಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಒತ್ತಡದಿಂದ ಹೊರಬರಲು ಆಟವಾಡಗಳಲ್ಲಿ ಮಹಿಳೆಯರು ತೊಡಗಿಸಿಕೊಳ್ಳುವುದು ಉತ್ತಮ ಮಾರ್ಗವಾಗಿದೆಂದರು. ಪಂಚಾಯಿತಿ ಲೆಕ್ಕ ಅಧಿಕಾರಿ ವೆಂಕಟೇಶ್ ಮಾತನಾಡಿ, ಮಹಿಳೆಯರು ಒಂದೆಡೆ ಸಂಸಾರವನ್ನು ಸಂಬಾಳಿಸಿಕೊಂಡು ಇನ್ನೊಂದೆಡೆ ಉದ್ಯೋಗದ ಸ್ಥಳದಲ್ಲಿಯೂ ದಕ್ಷವಾಗಿ ಕಾರ್ಯ ನಿರ್ವಹಿಸುವ ಶಕ್ತಿ ಹೊಂದಿದ್ದಾರೆಂದು ಹೇಳಿದರು. ಎಲ್ಲಾ ವಿಷಯದಲ್ಲೂ ಮಹಿಳೆಯರು ಪುರುಷರಿಗಿಂತ ಸಾಕಷ್ಟು ಹೆಜ್ಜೆ ಮುಂದೆಯೇ ಇದ್ದಾರೆ. ಮಹಿಳೆಯರನ್ನು ಎಲ್ಲಾ ಸ್ತರದಲ್ಲೂ ಮೇಲಕ್ಕೆತ್ತಬೇಕು. ಆಕೆಗೆ ಸಮಾನ ಅವಕಾಶವನ್ನು ನೀಡಬೇಕು ಎಂಬ ಉದ್ದೇಶದಿಂದ ನಮ್ಮಲ್ಲಿ ಅನೇಕ ಮಹಿಳಾ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ನಂದಗುಡಿ ಗ್ರಾಮ ಕರ ವಸೂಲಿಗಾರರಾದ ಮನೋಜ್ ಕುಮಾರ್, ನಯನಾ, ನರೇಗಾ ಕಾಯಕ ಮಿತ್ರ ರಂಜಿತಾ. ವಿ.ಆರ್. ಡಬ್ಲ್ಯು ಜಯಪ್ರಕಾಶ್ ಹಾಗೂ ಮುತ್ಯಾಲಮ್ಮ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಸೌಭಾಗ್ಯಮ್ಮ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಸೌಮ್ಯ, ಪಶು ಸಖಿಯರಾದ ಕವಿತಾ , ಮುತ್ತೇಲಮ್ಮ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಅಧ್ಯಕ್ಷ ಸುನಂದಮ್ಮ, ಒಕ್ಕೂಟದ ಕಾರ್ಯದರ್ಶಿ ಮಂಜುಳಮ್ಮ, ಒಕ್ಕೂಟದ ಖಜಾಂಚಿ ಅಮರಾವತಿ , ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಘದ ಸದಸ್ಯರಿದ್ದರು.



ಕಾರ್ಮಿಕರಿಗೆ ಕ್ರೀಡಾಕೂಟ

• **ಬೆಂಗಳೂರು:** ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯ ಸವಿನೆನಪಿಗಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ಪೌರಕಾರ್ಮಿಕರು, ಗ್ಯಾಂಗ್‌ಮನ್ ಮತ್ತು ತೋಟಗಾರಿಕೆ ಮಾಲಿಗಳಿಗಾಗಿ ವಿಶೇಷ ಕ್ರೀಡಾಕೂಟವನ್ನು ಏ.10 ರಂದು ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದಲ್ಲಿ ಆಯೋಜಿಸಲಾಗಿದೆ. ಸಚಿವ ರಾಮಲಿಂಗಾರೆಡ್ಡಿ ಹಾಗೂ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ, ಬೆಂಗಳೂರಿನ ಸ್ವಚ್ಛತೆಯನ್ನು ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸದಾ ಕೆಲಸದ ಒತ್ತಡದಲ್ಲಿರುವ ಅವರಿಗೆ ಈ ಕ್ರೀಡಾಕೂಟವು ಒಂದು ಉತ್ತಮ ವಿರಾಮ ಮತ್ತು ಚೈತನ್ಯ ನೀಡುವ ಕಾರ್ಯಕ್ರಮವಾಗಿದೆ ಎಂದು ರಾಮಲಿಂಗಾರೆಡ್ಡಿ ಶ್ಲಾಘಿಸಿದರು. ಕ್ರೀಡಾಕೂಟದ ಮೊದಲ ದಿನವಾದ ಗುರುವಾರ ಜಯನಗರ, ಬೊಮ್ಮನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಸುಮಾರು 600ಕ್ಕೂ ಹೆಚ್ಚು ಪೌರಕಾರ್ಮಿಕರು ಪಾಲ್ಗೊಂಡಿದ್ದು, ಕ್ರೀಡಾಕೂಟದ ಎರಡನೇ ದಿನವಾದ ಶುಕ್ರವಾರ ಬಿಟಿಎಂ ಲೇಔಟ್ ಮತ್ತು ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳ ಪೌರಕಾರ್ಮಿಕರು ಭಾಗವಹಿಸಲಿದ್ದಾರೆ. ಪೌರಕಾರ್ಮಿಕರು ಹಾಗೂ ಇತರ ನೌಕರರಿಗೆ 100 ಮೀ. ಮತ್ತು 200 ಮೀ. ಓಟದ ಸ್ಪರ್ಧೆ, ಗುಂಡು ಎಸೆತ ಹಾಗೂ ಕಿಕ್ಕಿಂಗ್ ದಿ ಬಾಲ್ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಾಲಿಕೆ ತಿಳಿಸಿದೆ.



ಡೆಲಿವರಿ ಬಾಯ್ ಮೇಲೆ ದುಷ್ಕರ್ಮಿಗಳಿಂದ ಹಲ್ಲೆ

• **ಬೆಂಗಳೂರು:** ನಗರದ ಪ್ರತಿಷ್ಠಿತ ನೆಕ್ಸಸ್ ಮಾಲ್ ಬಳಿ ಆರ್ಡರ್‌ಗಾಗಿ ಕಾಯುತ್ತಿದ್ದ ಡೆಲಿವರಿ ಬಾಯ್ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿ, ಸುಮಾರು 49 ಸಾವಿರ ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾಯಿಸಿಕೊಂಡು ಹಲ್ಲೆ ನಡೆಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಮೂಲತಃ ಉತ್ತರ ಪ್ರದೇಶದವರಾದ ಗೋಪಿಕಿಶನ್ ಎಂಬ ಯುವಕ ಪ್ರಸ್ತುತ ಸುದ್ದಗುಂಟೆಪಾಳ್ಯದ ತಾವರೆಕೆರೆಯಲ್ಲಿ ವಾಸವಾಗಿದ್ದಾರೆ. ಇವರು ವಿದ್ಯಾರ್ಥಿಯಾಗಿದ್ದು, ತನ್ನ ವಿದ್ಯಾಭ್ಯಾಸದ ಖರ್ಚಿಗಾಗಿ ಪಾರ್ಟ್ ಟೈಂ ಆಗಿ ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದರು. ಮಾ.31ರ ರಾತ್ರಿ ಸುಮಾರು 1.30ರ ಸುಮಾರಿಗೆ ಗೋಪಿಕಿಶನ್ ಮತ್ತು ಅವರ ಸ್ನೇಹಿತ ಓಂಕಾರ್ ನೆಕ್ಸಸ್ ಮಾಲ್ ಬಳಿ ಆರ್ಡರ್ ಬರಬಹುದು ಎಂದು ಕಾದು ಕುಳಿತಿದ್ದಾಗ ಈ ದುರಂತ ಸಂಭವಿಸಿದೆ.

ಬಲವಂತವಾಗಿ ಪಾಸ್‌ವರ್ಡ್ ಪಡೆದ ದುಷ್ಕರ್ಮಿಗಳು: ಹಠಾತ್ತಾಗಿ ಬಂದ ಮೂವರು ಕಿಡಿಗೇಡಿಗಳು ಗೋಪಿಕಿಶನ್ ಹಾಗೂ ಅವರ ಸ್ನೇಹಿತನ ಮೇಲೆ ಮುಗಿಬಿದ್ದಿದ್ದಾರೆ. ಹಣ ನೀಡುವಂತೆ ಪೀಡಿಸಿದ ಆರೋಪಿಗಳು, ಯುವಕನ ಮುಖ ಹಾಗೂ ಕೈಗಳ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಯುವಕನ ಬಳಿ ನಗದು ಇಲ್ಲದಿದ್ದಾಗ, ಆತನ ಮೊಬೈಲ್ ಅನ್ನು ಕಿತ್ತುಕೊಂಡಿದ್ದಾರೆ. ಬಳಿಕ ಡಿಜಿಟಲ್ ಪೇಮೆಂಟ್ ಆ್ಯಪ್‌ನ ಪಾಸ್‌ವರ್ಡ್ ನೀಡುವಂತೆ ಬೆದರಿಸಿ, ಬಲವಂತವಾಗಿ ಅವರ ಖಾತೆಯಲ್ಲಿದ್ದ 49 ಸಾವಿರ ರೂ.ಗಳನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ. ಹಣ ಪೀಕಿದ ಬಳಿಕ ಆರೋಪಿಗಳು ಯುವಕನಿಗೆ ದೂರು ನೀಡದಂತೆ ಪ್ರಾಣ ಬೆದರಿಕೆ ಹಾಕಿ ಅಲ್ಲಿಂದ ಪರಾರಿಯಾಗಿದ್ದರು. ಇದರಿಂದ ಭಯಭೀತರಾಗಿದ್ದ ಗೋಪಿಕಿಶನ್ ಮೊದಲು ಸುಮ್ಮನಾಗಿದ್ದರೂ ನಂತರ ಕುಟುಂಬಸ್ಥರು ಮತ್ತು ಸ್ನೇಹಿತರ ಬೆಂಬಲದೊಂದಿಗೆ ಆಡುಗೋಡಿ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ.

ತರಬೇತಿ ಕಾರ್ಯಾಗಾರಕ್ಕೆ ಚಾಲನೆ

• **ಹೊಳೆನರಸೀಪುರ:** ಮುಂಬರುವ 2027ರ ಜನಗಣತಿಯನ್ನು ಅತ್ಯಂತ ವ್ಯವಸ್ಥಿತವಾಗಿ ಮತ್ತು ಡಿಜಿಟಲ್ ರೂಪದಲ್ಲಿ ನಡೆಸಲು ತಾಲೂಕು ಆಡಳಿತ ಪೂರ್ಣ ಸಿದ್ಧತೆ ಮಾಡಿಕೊಂಡಿದೆ. ಈ ನಿಟ್ಟಿನಲ್ಲಿ ಪಟ್ಟಣದ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಮೂರು ದಿನಗಳ ತರಬೇತಿ ಕಾರ್ಯಾಗಾರಕ್ಕೆ ತಾಲೂಕು ದಂಡಾಧಿಕಾರಿಗಳಾದ ರೇಣುಕಾ ಕುಮಾರ್ ಹಾಗೂ ಗಣ್ಯರು ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆ ನೀಡಿದರು.

ಡಿಜಿಟಲ್ ಜನಗಣತಿ ಹಾಗೂ ಹೊಸ ವೈಶಿಷ್ಟ್ಯಗಳು ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರೇಣುಕಾ ಕುಮಾರ್ ಮಾತನಾಡಿ, ಈ ಬಾರಿಯ ಜನಗಣತಿಯು ತಾಂತ್ರಿಕವಾಗಿ ವಿಶೇಷವಾಗಿದ್ದು, ಮೊದಲ ಬಾರಿಗೆ 'ಸ್ವಯಂ-ಗಣತಿ' (ಟಿಜಿ-ಇಟಿಡಿಜಿಣಟಿ) ಪೋರ್ಟಲ್ ಮೂಲಕ ಸಾರ್ವಜನಿಕರೇ ತಮ್ಮ ಮಾಹಿತಿಯನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಗಣತಿದಾರರು ಮೊಬೈಲ್ ಅಪ್ಲಿಕೇಶನ್ ಬಳಸಿ ಮನೆ-ಮನೆಗೆ ಭೇಟಿ ನೀಡಿ ನಿಖರ ಮಾಹಿತಿ ಸಂಗ್ರಹಿಸಲಿದ್ದಾರೆ ಎಂದು ತಿಳಿಸಿದರು. ಅಲ್ಲದೆ, ಸಂಗ್ರಹಿಸಿದ ಮಾಹಿತಿಯ ಗೌಪ್ಯತೆಯನ್ನು ಕಾಪಾಡಲಾಗುವುದು ಎಂದು ಅವರು ಭರವಸೆ ನೀಡಿದರು.



ಅಭಿವೃದ್ಧಿಗೆ ದಾರಿದೀಪ: ಶ್ರೇಯಸ್ ಎಂ. ಪಟೇಲ್ ಹಾಸನ ಲೋಕಸಭಾ ಸದಸ್ಯರಾದ ಶ್ರೇಯಸ್ ಎಂ. ಪಟೇಲ್ ಅವರು ಮಾತನಾಡಿ, ಜನಗಣತಿಯು ಕೇವಲ ಅಂಕಿ-ಅಂಶಗಳ ಸಂಗ್ರಹವಲ್ಲ, ಇದು ದೇಶದ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ರೂಪಿಸುವ ಯೋಜನೆಗಳಿಗೆ ದಾರಿದೀಪವಾಗಿದೆ. ಮಹಿಳೆಯರು ಮತ್ತು ಪುರುಷರು ಸಮಾನವಾಗಿ ಈ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಸಂತಸದ ವಿಷಯ, ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಮೇಲ್ವಿಚಾರಕರು ಹಾಗೂ ನೂರಾರು ಗಣತಿದಾರರು ಉಪಸ್ಥಿತರಿದ್ದರು.

ಆರ್.ಎಲ್.ಜಾಲಪ್ಪ ಪಾಲಿಟೆಕ್ನಿಕ್‌ನಲ್ಲಿ ನಡೆದ ಕಲರವ-2026

ಪಠ್ಯದ ಜತೆ ಸಂವಹನ ಕೌಶಲ ರೂಢಿಸಿಕೊಳ್ಳಿ

• **ದೊಡ್ಡಬಳ್ಳಾಪುರ:** ಸಮಕಾಲೀನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ವಿದ್ಯಾರ್ಥಿಗಳು ಪಠ್ಯದ ಕಲಿಕೆಯ ಜತೆಗೆ ಮೃದು ಕೌಶಲ ಮತ್ತು ಸಂವಹನ ಕೌಶಲಗಳನ್ನು ರೂಢಿಸಿಕೊಳ್ಳುವುದು ಅಗತ್ಯ ಎಂದು ಶಾಸಕ ಧೀರಜ್ ಮುನಿರಾಜ್ ಹೇಳಿದರು.

ಆರ್.ಎಲ್.ಜಾಲಪ್ಪ ಪಾಲಿಟೆಕ್ನಿಕ್‌ನಲ್ಲಿ ಆಯೋಜಿಸಲಾಗಿದ್ದ ಕಲರವ-2026 ಕಾಲೇಜು ವಾರ್ಷಿಕೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಇಂದು ಗಣನೀಯ ಬದಲಾವಣೆಗಳಾಗುತ್ತಿದೆ. ಉದ್ಯೋಗ ಕೌಶಲ ಹೇಳಿಕೊಡುವುದು ಅತ್ಯಗತ್ಯವಾಗಿದೆಂದರು.

ದೊಡ್ಡಬಳ್ಳಾಪುರ ಸುತ್ತಮುತ್ತ ಬೆಳೆಯುತ್ತಿರುವ ಕೈಗಾರಿಕಾ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಸ್ಥಳೀಯರಿಗೆ ಲಭ್ಯವಿದೆ. ಪದವಿ ಪ್ರಮಾಣ ಪತ್ರಗಳೊಂದಿಗೆ ಪರಿಣಾಮಕಾರಿ ಉದ್ಯೋಗ ಕೌಶಲದ ಬಗ್ಗೆ ಜಾಗೃತಿ ಮತ್ತು ಪರಿಣತಿ ಹೊಂದುವುದು ಅಗತ್ಯ ಎಂದು ತಿಳಿಸಿದರು. ತಾಂತ್ರಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಯಮನಪ್ಪ ಎನ್.ದೊಡ್ಡಮನಿ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಸಾಧನೆಯ ಹಂಬಲ ಹೆಚ್ಚಿರುತ್ತದೆ. ಅದಕ್ಕೆ ಪೂರಕವಾದ ಪ್ರೋತ್ಸಾಹ ಮತ್ತು ಮಾರ್ಗದರ್ಶನ ದೊರೆತರೆ ಸಾಧನೆ ಸುಲಭವಾಗುತ್ತದೆ. ಪದವೀಧರರಾಗುವ ಜತೆಗೆ ಮಾನವೀಯ ಮೌಲ್ಯ ರೂಢಿಸಿಕೊಂಡಾಗ ಮಾತ್ರ ಶಿಕ್ಷಣದ ಮುಖ್ಯ ಉದ್ದೇಶ ಈಡೇರುತ್ತದೆ. ವ್ಯಕ್ತಿತ್ವ ನಿರ್ಮಾಣಕ್ಕೆ ಆದ್ಯತೆ ನೀಡುವುದು ಅತ್ಯಗತ್ಯ ಎಂದರು. ಎಕ್ಸೆಲ್ ಲೀಡರ್‌ಶಿಪ್ ಅಕಾಡೆಮಿ ಡಾ.ಎಸ್.ನಾಗರಾಜರಾವ್ ಮಾತನಾಡಿ, ತಮ್ಮ ಸುಪ್ತ ಪ್ರತಿಭೆಯನ್ನು ಅನಾವರಣ ಗೊಳಿಸಲು ಇರುವ ಎಲ್ಲ ಅವಕಾಶಗಳನ್ನು ಪರಿಪೂರ್ಣವಾಗಿ ಬಳಸಿಕೊಳ್ಳಬೇಕು. ಕೀಳರಿಮೆಯನ್ನು ಬಿಟ್ಟು ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳಬೇಕು. ಮೃದು ಕೌಶಲ ರೂಢಿಸಿಕೊಳ್ಳುವ ಮೂಲಕ ಶಿಸ್ತಿನ ಬದುಕಿಗೆ ಒತ್ತು ನೀಡಿದಾಗ ಸಾಧನೆ ಸಾಧ್ಯವಾಗುತ್ತದೆ ಎಂದರು. ಸಂಸ್ಥೆ ಕಾರ್ಯದರ್ಶಿ ಕೆ.ಜಿ.ಹನುಮಂತರಾಜು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಆಡಳಿತಾಧಿಕಾರಿ ಬಿ.ಕೃಷ್ಣಪ್ಪ, ಪ್ರಾಂಶುಪಾಲ ಡಾ.ನರಸಿಂಹರೆಡ್ಡಿ, ಆರ್ ಎಲ್‌ಜೆಐಟಿ ಶೈಕ್ಷಣಿಕ ನಿರ್ದೇಶಕ ಡಾ.ಶ್ರೀನಿವಾಸರೆಡ್ಡಿ, ಲಯನ್ಸ್ ಕ್ಲಬ್ ಅಧ್ಯಕ್ಷ ಪ್ರೊ.ಕೆ.ಆರ್.ರವಿಕಿರಣ್, ಉಪಪ್ರಾಂಶುಪಾಲ ಗುರುದೇವ್ ಮತ್ತಿತರರಿದ್ದರು.



25ನೇ ವಿಟಿಯು ಯುವಜನೋತ್ಸವ ಕಾರ್ಯಕ್ರಮ

ಪ್ರತಿಭಾನ್ವಿತರಿಗೆ ಉತ್ತಮ ವೇದಿಕೆ ಕಲ್ಪಿಸಿ

• **ಬೆಂಗಳೂರು:** ಕಾಲೇಜು ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಸಿಗುವ ವೇದಿಕೆಗಳಲ್ಲಿ ಪ್ರತಿಭೆಯನ್ನು ಪ್ರದರ್ಶಿಸಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಕುಲಪತಿ ಡಾ.ಎಸ್.ವಿದ್ಯಾಶಂಕರ್ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಆಚಾರ್ಯ ತಾಂತ್ರಿಕ ಮಹಾವಿದ್ಯಾಲಯ ಸಹಯೋಗದೊಂದಿಗೆ ಆಯೋಜಿಸಿದ್ದ 25ನೇ ವಿಟಿಯು ಯುವ ಜನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು, ಪ್ರತಿಯೊಬ್ಬರಲ್ಲೂ ಪ್ರತಿಭೆ ಇದೆ. ಇದರ ಅನಾವರಣಗೊಳ್ಳಬೇಕು ಎಂಬ ಕಾರಣಕ್ಕೆ ನಾವು ಈ ಯುವಜನೋತ್ಸವ ನಡೆಸುತ್ತಿದ್ದೇವೆ. ಕಾಲೇಜು ದಿನಗಳಲ್ಲಿ ತಮ್ಮ ಪ್ರತಿಭೆ ಅನಾವರಣಕ್ಕೆ ವೇದಿಕೆ ಸಿಗಲಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಎಲ್ಲರೂ ಬಹಳ ಉತ್ಸಾಹದಿಂದ ಭಾಗವಹಿಸಬೇಕು ಎಂದರು.

ವಿಟಿಯು ಕೇವಲ ಪಠ್ಯಕ್ರಮ ಮಾತ್ರವಲ್ಲ, ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಲಿದೆ. ವಿಟಿಯು ದೇಶದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಇದು ಸಾಧ್ಯವಾಗಿರುವುದು ನಿಮ್ಮ ಸಹಕಾರದಿಂದ ಎಂಬುದು ನಾನು ಮರೆಯುವುದಿಲ್ಲ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಾವು ಮೊದಲ ಸೆಮಿಸ್ಟರ್‌ನಿಂದಲೇ ಐಡಿಯಾ ಲ್ಯಾಬ್ ತಂದಿದ್ದೇನೆ. ಎಲ್ಲರೂ ಚೆನ್ನಾಗಿ ಓದಬೇಕು. ಶೇ.80ರಷ್ಟು ವಿದ್ಯಾರ್ಥಿಗಳು ಪ್ಲೇಸ್‌ಮೆಂಟ್ ಆಗಬೇಕು. ಅದು ನನಗೆ ಹೆಚ್ಚಿನ ಖುಷಿ ನೀಡಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಟಿಯು ವಿದ್ಯಾ ವಿಷಯಕ ಪರಿಷತ್ ಮತ್ತು ಕಾರ್ಯಕಾರಿ ಪರಿಷತ್ತಿನ ಸದಸ್ಯರು, ವಿಟಿಯು ಬೆಂಗಳೂರು ಪ್ರಾದೇಶಿಕ ಕಚೇರಿಯ ನಿರ್ದೇಶಕ ಡಾ.ಎಚ್.ಆರ್. ಸುದರ್ಶನ ರೆಡ್ಡಿ, ಆಚಾರ್ಯ ವಿದ್ಯಾಸಂಸ್ಥೆಯ ಅಧ್ಯಕ್ಷರ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಬಿ.ಎಂ.ಭೂಷಣ್ ಮತ್ತಿತರರಿದ್ದರು.



ಕಿರುಸುದ್ದಿ

ಕದಂಬ ಕಾಲೇಜಿನ ಎಂ.ಚಂದನಾಗೆ ಶೇ.95 ಅಂಕ





• **ನೆಲಮಂಗಲ:** ನಗರದ ಕದಂಬ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ಚಂದನಾ.ಎಂ 572(95.33), ನಿಖಿಲ್‌ಗೌಡ 571 (95.11),ವಾಣಿಜ್ಯ ವಿಭಾಗದಲ್ಲಿ ನಿಖಿಲ್.ಎಸ್ 566(94.33), ಸಾಧನಾ(92%) ಅತ್ಯುತ್ತಮ ಅಂಕ ಪಡೆದುಕೊಂಡಿದ್ದಾರೆ. ನಗರದ ಸ್ವೆದಾಮಿವಾಳ್ಯ ಸಮೀಪದ ಕದಂಬ ಪಿಯು ಕಾಲೇಜಿನ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ 17 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ,50 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿದ್ದರೆ. ದ್ವಿತೀಯ ಶ್ರೇಣಿ 30 ವಿದ್ಯಾರ್ಥಿಗಳು ಪಡೆಯುವ ಮೂಲಕ ಅತ್ಯುತ್ತಮ ಸಾಧನೆ ಮಾಡಿದ್ದು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಕೃಷ್ಣಮೂರ್ತಿ ಎಂ.ಕಿ, ಕಾರ್ಯದರ್ಶಿ ಶಿವಶಂಕರ್, ಖಜಾಂಚಿ ಸುಮಲತಾ, ಎಂ, ಸದಸ್ಯರಾದ ಮಂಜುಳ ಹಾಗೂ ಪ್ರಾಂಶುಪಾಲರಾದ ಲಕ್ಷ್ಮೀನಾರಾಯಣ್, ಅಭಿನಂದನೆ ಸಲ್ಲಿಸಿದ್ದಾರೆ.

ಲಾವಣ್ಯ ಸಂಯುಕ್ತ ಪಪೂ ಕಾಲೇಜು ಶೇ.93 ಫಲಿತಾಂಶ

• **ದೊಡ್ಡಬಳ್ಳಾಪುರ:** 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ .93 ಫಲಿತಾಂಶ ಲಭಿಸಿದೆ.ವಾಣಿಜ್ಯ ವಿಭಾಗದಲ್ಲಿ ಅರ್ಪಿ ಅಂಜುಮ್ ಶೇ. 97 ಫಲಿತಾಂಶ ಪಡೆದು ರಾಜ್ಯಕ್ಕೆ 18ನೇ ರಾಂಕ್ ಪಡೆದಿರುತ್ತಾಳೆ.ಭಾರ್ಗವಿ ಎಸ್ ಶೇ .95, 3 ಚೈತನ್ಯ ಶೇ .92, ಗಾನವಿ ಕೆ. ಶೇ. 90, ನಿಶಾಂತ್ ಪಿ.ರಾಮ್ ಶೇ .90, ಬಿಂದು ಶೇ. 89,ವಿಜ್ಞಾನ ವಿಭಾಗದಲ್ಲಿ ಸಿಂಚನಾ ಶೇ. 88, ರಕ್ಷ ಶೇ. 87, ಶಿವರಂಜನಿ ಕೆ.ಎಸ್. ಶೇ. 87, ರಸಾಯನ ಶಾಸ್ತ್ರದಲ್ಲಿಜೀವಶಾಸ್ತ್ರದಲ್ಲಿ ಶೇ.100ಕ್ಕೆ ನೂರರಷ್ಟು ಫಲಿತಾಂಶ ಬಂದಿದೆ. ಕಲಾವಿಭಾಗದಲ್ಲಿ ಹಿತಾಶ್ರೀ ಎಸ್. ಶೇ.87, ಹೇಮಾವತಿ ಶೇ. 87 ಫಲಿತಾಂಶ ಪಡೆದಿದ್ದಾರೆ. ಸಂಸ್ಥೆ ಅಧ್ಯಕ್ಷೆ ಯಶೋದಮ್ಮ ಹನುಮಂತೇಗೌಡ , ಗೌರವ ಕಾರ್ಯದರ್ಶಿ ವಿಶ್ವಾಸ್ ಹನುಮಂತೇಗೌಡ, ಪ್ರಾಂಶುಪಾಲ ಎಂ. ಸಿ. ಮಂಜುನಾಥ್ ಅಭಿನಂದಿಸಿದ್ದಾರೆ.

ವಿವಿಧ ಹುದ್ದೆಗೆ ಲಿಖಿತ ಪರೀಕ್ಷೆ

• **ಬೆಂಗಳೂರು:** ಬೆಂಗಳೂರು ಜಲಮಂಡಳಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ನಿಗಮ/ಮಂಡಳಿಗಳ ಕಲ್ಯಾಣ ಕರ್ನಾಟಕ ವೃಂದದ ವಿವಿಧ ಹುದ್ದೆಗಳ ನೇಮಕಕ್ಕೆ ಲಿಖಿತ ಪರೀಕ್ಷೆಗಳ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಕಟಿಸಿದೆ. ಕೆಎಸ್‌ಎಫ್‌ಸಿ ಮತ್ತು ಬಿಡಬ್ಲ್ಯುಎಸ್‌ಎಸ್‌ಬಿಯ ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು ಹಾಗೂ ಸಹಾಯಕ ಇಂಜಿನಿಯರ್ (ಎಲೆಕ್ಟ್ರಿಕಲ್) ಹುದ್ದೆಗಳಿಗೆ ಏ.26ರಂದು ಲಿಖಿತ ಪರೀಕ್ಷೆ ನಡೆಯಲಿದೆ. ಆರ್‌ಜಿಯುಎಚ್‌ಎಸ್, ಕೆಎಸ್‌ಎಫ್‌ಸಿ, ಬಿಡಬ್ಲ್ಯುಎಸ್‌ಎಸ್‌ಬಿ, ಕೃಷಿ ಮಾರಾಟ ಇಲಾಖೆ ವಿವಿಧ ಹುದ್ದೆಗಳಿಗೆ ಸಾಮಾನ್ಯ ಜ್ಞಾನ ಹಾಗೂ ನಿರ್ದಿಷ್ಟ ಪತ್ರಿಕೆಯ ಲಿಖಿತ ಪರೀಕ್ಷೆ ಮೇ 10ರಂದು ನಡೆಸಲಾಗುತ್ತದೆ. ಪರೀಕ್ಷಾ ಕೇಂದ್ರದಲ್ಲಿ ಮುಖ ಚಹರೆ ತಂತ್ರಜ್ಞಾನದ ಮೂಲಕ ತಪಾಸಣೆ ಮಾಡುವುದರಿಂದ ಕನಿಷ್ಠ 2 ತಾಸು ಮೊದಲೇ ಪರೀಕ್ಷಾ ಕೇಂದ್ರಕ್ಕೆ ಬಂದಿರಬೇಕು. ಋಣಾತ್ಮಕ ಮೌಲ್ಯಮಾಪನ ಇರುತ್ತದೆ. ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಐದನೇ ವೃತ್ತ ಶೇಡ್ ಮಾಡಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿಯಾಗಿ 5 ನಿಮಿಷ ನೀಡಲಾಗುತ್ತದೆ. ಯಾವುದೇ ವೃತ್ತವನ್ನು ಶೇಡ್ ಮಾಡದಿದ್ದರೆ ಪ್ರತಿ ಪ್ರಶ್ನೆಗೆ 1/4 ರಷ್ಟು ಅಂಕ ಕಡಿತಗೊಳಿಸಲಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ದೇವನಹಳ್ಳಿ ಪೊಲೀಸ್ ಠಾಣೆ ಕಟ್ಟಡ ಉದ್ಘಾಟನೆ | ಪೊಲೀಸರಿಗೆ ಗೃಹ ಸಚಿವ ಪರಮೇಶ್ವರ ಸೂಚನೆ

ನಾಗರಿಕರ ಜತೆ ಸಂಯಮದಿಂದ ವರ್ತಿಸಿ



• **ದೇವನಹಳ್ಳಿ:** ಪೊಲೀಸರು ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಬಾರದು. ಠಾಣೆಗೆ ದೂರು ಕೊಡಲು ಬಂದವರ ಜತೆ ಸಂಯಮದಿಂದ ವರ್ತಿಸಬೇಕೆಂದು ಗೃಹಸಚಿವ ಡಾ.ಜಿ.ಪರಮೇಶ್ವರ ಎಚ್ಚರಿಸಿದರು.

ಪಟ್ಟಣದ ಪ್ರೆಸ್ಟೀಜ್ ಗ್ರೂಪ್ ಸಂಸ್ಥೆಯಿಂದ ಸಿಎಸ್‌ಆರ್ ಅನುದಾನದಲ್ಲಿ ನಿರ್ಮಿಸಲಾಗಿರುವ ದೇವನಹಳ್ಳಿ ಸಹಾಯಕ ಪೊಲೀಸ್ ಆಯುಕ್ತರ ಕಚೇರಿ ಹಾಗೂ ದೇವನಹಳ್ಳಿ ಪೊಲೀಸ್ ಠಾಣೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈಗ ಸಾಕಷ್ಟು ಭೂಮಿ ಬೆಲೆ ಜಾಸ್ತಿ ಆಗಿದೆ. ರಿಯಲ್ ಎಸ್ಟೇಟ್ ದಂಧೆ ಬಗ್ಗೆ ಸಂಸದರು ಪ್ರಸ್ತಾಪಿಸಿದ್ದಾರೆ. ನಾನು ಅನೇಕ ಬಾರಿ ಸಭೆಗಳಲ್ಲಿ ಪ್ರಸ್ತಾಪಿಸಿದ್ದೇನೆ, ಯಾವ ಅಧಿಕಾರಿಯೂ ಕೂಡ ಪೊಲೀಸ್ ಇಲಾಖೆಯಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಬಾರದು. ಯಾರಾದರೂ ಪೊಲೀಸ್ ಸ್ಟೇಷನ್ ಗೆ ಬಂದಾಗ ಎಫ್ ಐ ಆರ್ ದಾಖಲಿಸಿ ಅವರಿಗೆ ನ್ಯಾಯ ಒದಗಿಸಿ ಕೊಡುವುದು ಬಿಟ್ಟರೆ ಪೊಲೀಸ್ ಸ್ಟೇಷನ್ನಲ್ಲಿ ಕುಳಿತುಕೊಂಡು ದಂಧೆ ಬಗ್ಗೆ ಮಾತನಾಡಿ ಹಣ ವಸೂಲಿ ಮಾಡುವುದು ಆಗಬಾರದು ಎಂದು ಪೊಲೀಸ್ ಇಲಾಖೆಗೆ ಖಡಕ್ ಸೂಚನೆ ನೀಡಿದರು.

ಪ್ರೆಸ್ಟೀಜ್ ಕಂಪನಿಯವರು ಸಿಎಸ್‌ಆರ್ ಅನುದಾನದಲ್ಲಿ ಒಟ್ಟು ಸುಂದರವಾದ ಕಟ್ಟಡವನ್ನು ಕಟ್ಟಿಕೊಟ್ಟಿದ್ದಾರೆ. ದೇಶದಲ್ಲಿಯೇ ಮಾದರಿ ಪೊಲೀಸ್ ಕಟ್ಟಡ ಎಂದರೆ ತಪ್ಪಾಗಲಾರದು. ವಿನ್ಯಾಸವು ಕೂಡ ಬಹಳ ಚೆನ್ನಾಗಿ ಮೂಡಿ ಬಂದಿದೆಯೆಂದು ಪ್ರಶಂಸಿಸಿದರು. ಸುಸಜ್ಜಿತ ಕಟ್ಟಡದಲ್ಲಿ, ಜನಸ್ನೇಹಿ ಕೆಲಸಗಳು ಆಗಬೇಕು. ಸಾರ್ವಜನಿಕರು ಪೊಲೀಸ್ ಸ್ಟೇಷನ್ ಗೆ ಬಂದಾಗ ಅವರ ಜೊತೆ ಸೌಜನ್ಯವಾಗಿ ವರ್ತಿಸಿ, ಭಾಷೆ ಬದಲಾವಣೆ ಮಾಡಿಕೊಳ್ಳಿ ಎಂದು ಹಲವು ಬಾರಿ ಹೇಳುತ್ತಾ ಬಂದಿದ್ದೇನೆ. ಅದೇ ರೀತಿಯ ಜನಸ್ನೇಹಿ ಆಡಳಿತ ನೀಡಬೇಕು ಎಂದರು.

ದೇವನಹಳ್ಳಿಯ ಅವತಿಯಲ್ಲಿ ಭಾರತ ಮೀಸಲು ಪಡೆ ಆವತಿ ಘಟಕದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಸಚಿವರು ಶಾಂತಿಯನ್ನು ಕಾಪಾಡಲು ಹಾಗೂ ಬೇರೆ ಬೇರೆ ಸಂದರ್ಭಗಳಲ್ಲಿ ಕೆಲಸ ನಿರ್ವಹಿಸಲು ರಿಸರ್ವ್ ಪೊಲೀಸನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರೆಸ್ಟೀಜ್ ಕಂಪನಿಯವರು ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡಿದೆ. ಜಿಲ್ಲೆಯಲ್ಲಿ ಸಿಎಸ್‌ಆರ್ ಅನುದಾನದಲ್ಲಿ ಶಾಲಾ ಕಾಲೇಜು ಕಟ್ಟುತ್ತಿದ್ದಾರೆ. ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸುವುದು ಎಂದರು.

ಉದ್ಯೋಗ ಒದಗಿಸುವುದು ನಮ್ಮ ಆದ್ಯತೆ ಆಗಿರಬೇಕು. ಜಿಲ್ಲೆಯಲ್ಲಿರುವ ಕಂಪನಿಗಳು ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಿ. ಸಾಕಷ್ಟು ರೈತಾಪಿ ಕುಟುಂಬಗಳು ಕೈಗಾರಿಕೆಗಳಿಗೆ ಭೂಮಿ ನೀಡಲಾಗಿದೆ. ಅಂತಹ ಕುಟುಂಬಗಳ ಅಭ್ಯರ್ಥಿಗಳಿಗೆ ಉದ್ಯೋಗ ನೀಡಿದರೆ ಅನುಕೂಲವಾಗಲಿದೆ ಎಂದು ಹೇಳಿದರು.

ಪೊಲೀಸ್ ಠಾಣೆಗಳು ಸದಾ ಜನಸ್ನೇಹಿಯಾಗಿರಬೇಕು. ಯಾರಾದರೂ ಪೊಲೀಸ್ ಸ್ಟೇಷನ್ ಗೆ ಬಂದು ದೂರು ಕೊಟ್ಟಲ್ಲಿ ಅವರನ್ನು ಸಂಯಮದಿಂದ ವರ್ತಿಸಿ ಪೊಲೀಸ್ ಸ್ಟೇಷನ್ನಲ್ಲಿ ಬಗೆಹರಿಸುವಂತ ಸಮಸ್ಯೆಗಳಿದ್ದಲ್ಲಿ ಅಲ್ಲೇ ಬಗೆಹರಿಸಿ ಅವರನ್ನು ಕಳುಹಿಸಿಕೊಡುವುದು ಉತ್ತಮ. ತೀರ ಅನಿವಾರ್ಯವಾದಲ್ಲಿ ಮಾತ್ರ ಎಫ್‌ಐಆರ್ ದಾಖಲಿಸಿ. ಇಲ್ಲವಾದಲ್ಲಿ ಅವರು ಪೊಲೀಸ್ ಸ್ಟೇಷನ್, ಕೋರ್ಟ್ ಎಂದು ಅಲೆಯುವರು. ಇದರಿಂದ ಗ್ರಾಮದಲ್ಲಿ ಮನಸ್ತಾಪಗಳು ಹೆಚ್ಚಾಗಿ ಗ್ರಾಮಗಳ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಸಂಸದ ಡಾ. ಕೆ.ಸುಧಾಕರ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾದ ಡಾ. ಎಂ.ಎ.ಸಲೀಂ, ಬೆಂಗಳೂರು ನಗರಪೊಲೀಸ್ ಆಯುಕ್ತರಾದ ಸೀಮಂತ್‌ಕುಮಾರ್ ಸಿಂಗ್, ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧಾ, ಜಂಟಿ ಪೊಲೀಸ್ ಆಯುಕ್ತರಾದ ರಮೇಶ್ ಬಾನೋತ್, ವಂಶಿಕೃಷ್ಣ ಪ್ರೆಸ್ಟೀಜ್ ಗ್ರೂಪ್ ಸಂಸ್ಥೆಯ ಮುಖ್ಯಸ್ಥರಾದ ನೋಮನ್ ಮತ್ತು ನೋಮನ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ರಾಜಣ್ಣ, ಬಿಎಂಡಿ ಅಧ್ಯಕ್ಷ ಶಾಂತಕುಮಾರ್, ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ, ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೀಸಲು ಪಡೆಗೆ ತರಬೇತಿ

ರಾಜ್ಯದಲ್ಲಿ 14 ಮೀಸಲು ಪೊಲೀಸ್ ಪಡೆ ಇದೆ., ಬೆಂಗಳೂರು ದಕ್ಷಿಣ ಈ ಭಾಗದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಆವತಿ ಬಳಿ ಮೀಸಲು ಪಡೆ ಘಟಕ ಮಾಡಲಾಗುತ್ತಿದೆ. ಇದು 568 ಕೋಟಿ ರೂ. ಯೋಜನೆ. 1000ಕ್ಕೂ ಹೆಚ್ಚು ಸಿಬ್ಬಂದಿ ಇಲ್ಲಿ ತರಬೇತಿ ಪಡೆಯಲಿದ್ದಾರೆ. 30 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ಮಾಡಲಾಗಿದೆ. ಇದು ಒಂದು ಪ್ರತಿಷ್ಠಿತ ಮೀಸಲು ಘಟಕ ಆಗಲಿದೆ ಎಂದು ಗೃಹ ಸಚಿವ ಡಾ.ಪರಮೇಶ್ವರ ಹೇಳಿದರು.

ರಾಜ್ಯಸಭೆಗೆ ದೇವೇಗೌಡರು ಮತ್ತೊಮ್ಮೆ ಆಯ್ಕೆಯಾಗಲಿ



• **ಹಾಸನ:** ರಾಜ್ಯಸಭೆ ದೇವೇಗೌಡರು ಮತ್ತೆ ಆರಿಸಿ ಬರಬೇಕೆಂಬುವುದು ಪಕ್ಷಾತೀತವಾದ ಭಾವನೆ. ಅಂತಿಮವಾಗಿ ಅದು ಬಿಜೆಪಿ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ರಾಜ್ಯಸಭೆ ಅವಧಿ ಮುಕ್ತಾಯ ವಿಚಾರಕ್ಕೆ ಪ್ರತಿಕ್ರಿಯಿಸಿ, ದೇವೇಗೌಡರು 93 ವಯಸ್ಸಿನ ಹಿರಿಯರು. ಪಕ್ಷಾತೀತವಾಗಿ ಎಲ್ಲರೊಟ್ಟಿಯೂ ಒಂದು ಅಭಿಲಾಷೆಯಿದೆ. ದೇವೇಗೌಡರಂತಹ ನಾಯಕರು ಸದನದೊಳಗೆ ಗಟ್ಟಿ ಧ್ವನಿಯಿಂದ ಮಾತನಾಡುವ ವ್ಯಕ್ತಿ ರಾಜ್ಯದಿಂದ ಯಾರಾದರು ಇದ್ದರೆ ಅದು ದೇವೇಗೌಡರು ಮಾತ್ರ. ನಾವು ಯಾವುದೇ ಪಕ್ಷದ ಬಗ್ಗೆ ಹಗುರ ಮಾತು ಆಡುವುದಿಲ್ಲ. ಒತ್ತಡ ಹೇರುವ ಪ್ರಶ್ನೆ ಇಲ್ಲ. ನಾವು ಯಾವುದೇ ಷರತ್ತು ಹಾಕದೆ ಮೈತ್ರಿಗೆ ಕೈ ಜೋಡಿಸಿದ್ದೇವೆ. ಅಂತಿಮವಾಗಿ ದೇವೇಗೌಡರನ್ನು ರಾಜ್ಯಸಭೆಯಲ್ಲಿ ಬಳಸಿಕೊಳ್ಳಬೇಕಿದ್ದೆ, ಅದು ಪ್ರಧಾನ ಮಂತ್ರಿಗಳಿಗೆ ಬಿಟ್ಟ ವಿಚಾರ ಎಂದರು.

ಇತ್ತೀಚಿನ ದಿನಗಳಲ್ಲಿ ನೀರಾವರಿ ವಿಚಾರವಾಗಿ, ಎತ್ತಿನಹೊಳೆ ಯೋಜನೆ ಸಂಪೂರ್ಣವಾಗಿ ಸ್ಥಗಿತವಾಗಿತ್ತು. ಆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಧಾನಿಗಳು, ಗೃಹಸಚಿವರ ಜತೆ ಮಾತನಾಡಿ ಮನವಿ ಮಾಡಿದ್ದಾರೆ. ಅಂತಹವರು ಮತ್ತೆ ರಾಜ್ಯಸಭೆ ಮತ್ತೆ ಆರಿಸಿ ಬರಬೇಕೆಂಬುದು ಪಕ್ಷಾತೀತವಾದ ಭಾವನೆ ಎಂದು ಹೇಳಿದರು.

ನಮ್ಮ ಎರಡೂ ಪಕ್ಷದ ಕಾರ್ಯಕರ್ತರ ಸಮ್ಮಿಲನ ಉಪಚುನಾವಣೆಯಲ್ಲಿ ಒಳ್ಳೆಯ ಫಲಿತಾಂಶ ಎನ್ ಡಿ ಎ ಅಭ್ಯರ್ಥಿಗೆ ಸಿಗುತ್ತೆ. ನೂರಕ್ಕೆ ನೂರು ಗೆಲ್ಲುವ ವಿಶ್ವಾಸವಿದೆ. ಕೇಂದ್ರ ಸಚಿವರಾದ ಕುಮಾರಣ್ಣ ಎರಡು ಕಡೆ ಭೇಟಿ ಕೊಟ್ಟು ಕ್ಷೇತ್ರದ ಜನತೆಗೆ ಕಾಂಗ್ರೆಸ್ ಪಕ್ಷದ ದುರಾಡಳಿತ ಭ್ರಷ್ಟಾಚಾರ, ಹಗರಣ ಎಲ್ಲದರ ಬಗ್ಗೆ ಜಿಲ್ಲೆಯ ಜನರಿಗೆ ಸಂದೇಶವನ್ನು ಕೊಟ್ಟಿದ್ದಾರೆ ಎಂದರು.

ಸ್ವಾಭಾವಿಕವಾಗಿ ಉಪ ಚುನಾವಣೆ ನಡೆದ ಸಂದರ್ಭದಲ್ಲಿ ಯಾವ ಸರ್ಕಾರಗಳು ಇರುತ್ತವೆಯೋ ಅವು ಆಡಳಿತ ಯಂತ್ರ, ಹಣಬಲ ದುರ್ಬಳಕೆ ದುರುಪಯೋಗ ಪಡಿಸಿಕೊಂಡು ಲಾಭಮಾಡಿಕೊಳ್ಳುವುದು ಸಹಜ. ಆದ್ರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪ ಅಂತಿಮ ಎಂದರು.

ದಾವಣಗೆರೆಯಲ್ಲಿ ಸಂಖ್ಯಾತ ಮತಗಳು ಎನ್‌ಡಿಎ ಅಭ್ಯರ್ಥಿ ಪರವಾಗಿ ಬೀಳುವ ಸಾಧ್ಯತೆ ಇದೆಯಾ ಎಂಬ ಪ್ರಶ್ನೆಗೆ ಅಲ್ಪಸಂಖ್ಯಾತ, ಬೇರೆ ಜಾತಿ, ಧರ್ಮ, ಜನಾಂಗ ಎನ್ನುವುದಕ್ಕಿಂತ ಹೆಚ್ಚಾಗಿ ಬದಲಾವಣೆ ಕಾಣಬೇಕು ಎನ್ನುವ ಭಾವನೆ ಮತದಾರರಲ್ಲಿ ಇದೆ ಎಂದು ಉತ್ತರಿಸಿದರು. ಹಾಗಾಗಿ ಜನರು ಅಭ್ಯರ್ಥಿ ಹಾಗೂ ಎರಡೂ ಪಕ್ಷಗಳ ಕೆಲಸಗಳನ್ನು ನೋಡುತ್ತಾರೆ. 2028 ರ ಚುನಾವಣೆಯ ದಿಕ್ಸೂಚಿಯಾಗಿ ಜನರು ಉತ್ತರ ಕೊಡುತ್ತಾರೆ ಎನ್ನುವ ನಿರೀಕ್ಷೆ ಇದೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕರಾದ ಸಿ.ಎನ್ ಬಾಲಕೃಷ್ಣ ಅವರು, ಸ್ವರೂಪ್ ಪ್ರಕಾಶ್ ಅವರು, ತಾಲ್ಲೂಕು ಅಧ್ಯಕ್ಷರಾದ ಪರಮ ದೇವರಾಜೇಗೌಡ ಅವರು, ಮುಖಂಡರುಗಳಾದ ಚಂದ್ರಣ್ಣ ಅವರು, ಬಾಗೂರು ಶಿವಣ್ಣ ಅವರು , ಅನಿಲ್ ಅವರು, ಮನಿ ದೇವೇಗೌಡ ಅವರು, ಅಣತಿ ಯೋಗೇಶ್ ಅವರು, ರಾಮಚಂದ್ರು ಅವರು , ಓಬಳಾಪುರ ಬಸವರಾಜು ಅವರು ಸೇರಿದಂತೆ ಸ್ಥಳೀಯ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳ ಉಳಿಸಲು ಅಭಿಯಾನ

ಇಂದು ಬೃಹತ್ ಜನ ಸಮಾವೇಶ

• **ದೊಡ್ಡಬಳ್ಳಾಪುರ:** ಸರ್ಕಾರಿ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನ ಮಾಡುವ ಸರ್ಕಾರದ ಯೋಜನೆ ಖಂಡನೀಯವಾಗಿದೆ. ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರೋಧಿಸಿ ಏ. 10ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಜನ ಸಮಾವೇಶಕ್ಕೆ ಪೋಷಕರು, ವಿದ್ಯಾರ್ಥಿಗಳು ಭಾಗಮಹಿಸಬೇಕೆಂದು ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಕೆ.ಕಲ್ಯಾಣ್ ಕುಮಾರ್ ತಿಳಿಸಿದರು.

ನಗರದ ಕನ್ನಡ ಜಾಗೃತ ಭವನದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರುದ್ಧ ರಾಜ್ಯ ಮಟ್ಟದ ಬೃಹತ್ ಸಮಾವೇಶದ ಅಂಗವಾಗಿ ವಿವಿಧ ಕನ್ನಡಪರ, ಪ್ರಗತಿಪರ ಸಂಘಟನೆಗಳು, ಸರ್ಕಾರಿ ಶಾಲಾ ಮಕ್ಕಳು–ಪೋಷಕರು, ಹಾಗೂ ವಿದ್ಯಾರ್ಥಿ ಸಂಘಟನೆಗಳ ಸಹಕಾರದಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ನಾಡಿನ ಜನತೆಯ ತೀವ್ರ ವಿರೋಧದ ನಡುವೆಯೂ ಸರ್ಕಾರ ಸರ್ಕಾರಿ ಶಾಲೆಗಳನ್ನು ಮುಚ್ಚುವ ಕೆಲಸವನ್ನು ಮುಂದುವರಿಸಿದೆ. ಏಪ್ರಿಲ್ 8 ಮತ್ತು 9 ರಂದು ನಡೆಯಲಿರುವ ಪೋಷಕರ ಸಭೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ತಮ್ಮ ಮಕ್ಕಳನ್ನು ಕೆಪಿಎಸ್ ಶಾಲೆಗೆ ಕಳುಹಿಸುವಂತೆ ಒತ್ತಾಯಿಸಲು ಶಾಲೆ ಗಳಿಗೆ ನೋಟಿಸ್ ನೀಡಲಾಗಿದೆ. ಈ ಯೋಜನೆಯನ್ನು ಶಿಕ್ಷಣ ಇಲಾಖೆ ಅನುಷ್ಠಾನಗೊಳಿಸಲು ಏಪ್ರಿಲ್ ಒಂದರಂದು ಜಿಲ್ಲೆಯ ಡಿಡಿಪಿಐ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆಯನ್ನು ನಡೆಸಿ ಶಾಲೆ ಮುಚ್ಚಲು ಕುತಂತ್ರ ನಡೆಸಿದೆಂದು ದೂರಿದರು.

ಸಾಹಿತಿ ಡಾ.ಎ.ಓ.ಆವಲಮೂರ್ತಿ ಮಾತನಾಡಿ, ಇದು ಸರ್ಕಾರಿ ಶಾಲೆಗಳನ್ನು ಉಳಿಸುವುದರ ಜತೆಗೆ ಬಲಪಡಿಸಲು ದಾರಿಯಾಗಬೇಕು. ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸಲು ಮೂಲ ಸೌಲಭ್ಯ ಒದಗಿಸಬೇಕು. ಎಲ್ಲಾ ಶಿಕ್ಷಕರ ಹುದ್ದೆಯನ್ನು ಕಾಯಂ ಶಿಕ್ಷಕರಿಂದ ಭರ್ತಿ ಮಾಡಬೇಕು. ಸರ್ಕಾರ ಈ ಮೇಲಿನ ವಿಷಯಕ್ಕೆ ಗಮನ ಹರಿಸಬೇಕು ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಕೈಬಿಡಬೇಕು ಎಂದರು.

ಸಭೆಯಲ್ಲಿ ಕನ್ನಡಪರ ಸಂಘಟನೆ, ರೈತ ಸಂಘಟನೆ, ಮಹಿಳಾ ಮತ್ತು ಯುವಜನ ಸಂಘಟನೆಯ ಮುಖಂಡರು, ಕೇವಲ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸುವ ಬಡಜನ ವಿರೋಧಿ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ತೀವ್ರವಾಗಿ ಖಂಡಿಸಿದರು. ಕನ್ನಡ ಜಾಗೃತ ಪರಿಷತ್ತಿನ ಕಾರ್ಯದರ್ಶಿ ಡಿ.ಪಿ.ಆಂಜನೇಯ, ಕನ್ನಡಪರ ಹೋರಾಟಗಾರರಾದ ಸಂಜೀವ್ ನಾಯಕ್, ಜಿ.ಸತ್ಯನಾರಾಯಣ್, ಮುನಿರಾಜಯ್ಯ, ಮುತ್ತೇಗೌಡ ಮೊದಲಾದವರಿದ್ದರು.



ಶಿವಗಂಗೆ ಹೊನ್ನಾದೇವಿ ಬ್ರಹ್ಮರಥೋತ್ಸವ

• **ದಾಬಸ್‌ಪೇಟೆ:** ದಕ್ಷಿಣಕಾಶಿ ಶಿವಗಂಗೆಯ ಶ್ರೀಹೊನ್ನಾದೇವಿ ಅಮ್ಮನವರ ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಹೂವಿನ ಹಡಪದ ನಂತರ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದಲ್ಲಿ ಹಲವು ಗಣ್ಯವ್ಯಕ್ತಿಗಳು, ದಾನಿಗಳು, ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿಯ ನಮನಗಳನ್ನು ಸಲ್ಲಿಸಿದರು. ಸಾಂಸ್ಕೃತಿಕ ಕಲಾಮೇಳಗಳು ವಿಶೇಷ ಆಕರ್ಷಣೆಯಾಗಿದ್ದವು. ಭಕ್ತರಿಗೆ ಅನ್ನಸಂತರ್ಪಣೆ ನೀಡಲಾಯಿತು. ಭಕ್ತರು ದವನ ಕಟ್ಟಿದ ಬಾಳೆಹಣ್ಣನ್ನು ರಥಕ್ಕೆ ಎಸೆಯುವ ಮೂಲಕ ತಮ್ಮ ಇಷ್ಟಾರ್ಥ ಕೋರಿಕೆಯನ್ನು ಅರ್ಪಿಸಿದರು. ಭಕ್ತರು ಹೆಸರುಬೇಳೆ, ಮಜ್ಜಿಗೆ ಪಾನಕವನ್ನು ವಿತರಿಸಿದರು. ಭಕ್ತರಿಗೆ ಉಚಿತ ವ್ಯವಸ್ಥೆ ಮಾಡಲಾಗಿತ್ತು.

ಹೋಮ ಮತ್ತು ಪೂಜೆಯನ್ನು ಆಗಮಿಕರಾದ ಡಾ ಸೋಮಸುಂದರ ದೀಕ್ಷಿತ್ ಉಮೇಶ್ ದೀಕ್ಷಿತ್ ತಂಡದವರು ನೆರವೇರಿಸಿಕೊಟ್ಟರು. ಗ್ರಾಪಂ ಮಾಜಿ ಅಧ್ಯಕ್ಷರಾದ ಪ್ರೇಮ ತೀರ್ಥಪ್ರಸಾದ್, ರಾಮಣ್ಣ ಸಮಾಜ ಸೇವಕರು, ದೇವಾಲಯದ ಸಮಿತಿ ಮಾಜಿ ಅಧ್ಯಕ್ಷ ರೇಣುಕೇಶ್, ವಿಎಸ್‌ಎಸ್‌ಎನ್ ನಿರ್ದೇಶಕ ಶಿಶಿಧರ್, ಜೆ.ಜೆ. ಹೇಮಾವತಿ, ಧಾರ್ಮಿಕ ದತ್ತಿ ಇಲಾಖೆ ತಹಸೀಲ್ದಾರ್, ಉಪತಹಸೀಲ್ದಾರ್ ಶಿಧರ್, ಕಾರ್ಯನಿರ್ವಾಹಕ ಅಧಿಕಾರಿ ಎಂ.ಎನ್.ಬಿಂದಾ, ಪಾರುಪತ್ತೆದಾರ ಟಿ.ಸುಮ, ಅರ್ಚಕರಾದ ಶ್ಯಾಮ್ ಪ್ರಸಾದ್ ದೀಕ್ಷಿತ್, ವೀರನ್ ದೀಕ್ಷಿತ್, ರಾಘು ದೀಕ್ಷಿತ್, ಡಿ.ವಿ.ಶ್ರೀಧರ್, ಎಲ್.ವಸಂತಕುಮಾರ್‌ದೀಕ್ಷಿತ್, ಸೇವಾಕರ್ತರಾದ ಜಿ.ನಂಜುಂಡಯ್ಯ, ಹೊಣ್ಣಗಂಗಪ್ಪ, ಯಜಮಾನರ ವಂಶಸ್ಥರ ಕುಟುಂಬ, ಶಂಕರ್, ನಾಗೇಂದ್ರ ಪ್ರಸನ್ನ ಲೋಕೇಶ್, ಸಿದ್ದರಾಜು ಶಿವಗಂಗೆ, ಹೊತಾಶವಿಜಯ್ ದನಲಕ್ಷ್ಮೀ ಹನುಮಂತರಾಜು, ಎಸ್ .ಎಸ್ .ಚಂದ್ರಕುಮಾರ್, ಆನಂತರಾಮು, ಎಸ್. ಆರ್ .ಸುರೇಶ್ , ಶಿವರುದ್ರಮ್ಮಮನೋಹರ್ ಬಿ ಎನ್ ಗಂಗಾಧರಯ್ಯ ಎಸ್ ಜಿ, ರಂಗಸ್ವಾಮಯ್ಯ, , ಮಂಜುನಾಥ್,ಮುದ್ದಪ್ಪ, ಮಲ್ಲಯ್ಯ, ತುಳಸೀಧರ, ಹೇಮಂತ್ , ಮಂಜುನಾಥ್, ವಸಂತಕುಮಾರ್, ಬರಗೇನಹಳ್ಳಿ ಪರಮೇಶ್ವರ ಬರಗೇನಹಳ್ಳಿ , ಯಶವಂತ್‌ಗೌಡ ಇತರರಿದ್ದರು.

ನೀರು ತೆಗೆಯುವ ಪ್ರಮಾಣ ಶೇ.378.85 : ರಾಜ್ಯದಲ್ಲೇ ಹೆಚ್ಚು ಗರಿಷ್ಠ ಮಟ್ಟ

ಅಂತರ್ಜಲ ಮಟ್ಟ ನಗರದಲ್ಲಿ ತೀವ್ರ ಕುಸಿತ

• **ಬೆಂಗಳೂರು:** ಬೆಂಗಳೂರು ನಗರದ ಅಂತರ್ಜಲ ಮಟ್ಟವು ತೀವ್ರ ಆತಂಕಕಾರಿ ಮಟ್ಟಕ್ಕೆ ತಲುಪಿದೆ. ಕರ್ನಾಟಕದ ಡೈನಾಮಿಕ್ ಅಂತರ್ಜಲ ಸಂಪನ್ಮೂಲ ವರದಿ – 2025 ರ ಪ್ರಕಾರ, ಬೆಂಗಳೂರು ನಗರದ ಅಂತರ್ಜಲ ಅತಿಯಾದ ಶೋಷಣೆ ಸೂಚ್ಯಂಕ ಪಟ್ಟಿಯಲ್ಲಿದೆ.

ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತಲಿನ ತಾಲೂಕುಗಳಲ್ಲಿ ಅಂತರ್ಜಲದ ಬಳಕೆ ಲಭ್ಯತೆಗಿಂತ ಹೆಚ್ಚಾಗಿದೆ. ಬೆಂಗಳೂರು ಪೂರ್ವ ತಾಲೂಕಿನಲ್ಲಿ ಅಂತರ್ಜಲ ಹೊರತೆಗೆಯುವಿಕೆಯ ಪ್ರಮಾಣವು ಶೇ. 378.85 ರಷ್ಟಿದ್ದು, ಇದು ಇಡೀ ರಾಜ್ಯದಲ್ಲೇ ಗರಿಷ್ಠ ಮಟ್ಟವಾಗಿದೆ.

ನಗರ ಪ್ರದೇಶಗಳು ಕಾಂಕ್ರೀಟ್‌ಮಯವಾಗಿರುವುದರಿಂದ ಮಳೆ ನೀರು ಭೂಮಿಗೆ ಇಳಿಯುವ ಪ್ರಮಾಣ ಗ್ರಾಮೀಣ ಪ್ರದೇಶಗಳಿಗಿಂತ ತೀರಾ ಕಡಿಮೆ ಇದೆ. ಬೆಂಗಳೂರು ನಗರದಲ್ಲಿ ಈ ಪ್ರಮಾಣವು ಕೇವಲ ಶೇ. 5.7 ರಷ್ಟಿದೆ ಎಂದು ಬಿಎಆರ್‌ಸಿ ಸಹಯೋಗದೊಂದಿಗೆ ನಡೆಸಿದ ವಿಶೇಷ ಅಧ್ಯಯನ ತಿಳಿಸಿದೆ.

ಬೆಂಗಳೂರು ನಗರದಲ್ಲಿ ಕೈಗಾರಿಕಾ ಬಳಕೆಗಾಗಿ ಅತಿ ಹೆಚ್ಚು ಅಂತರ್ಜಲವನ್ನು ಹೊರತೆಗೆಯಲಾಗುತ್ತಿದೆ. ಜೊತೆಗೆ ನಗರದ ಹೊರವಲಯಗಳಲ್ಲಿ ಕೃಷಿ ಮತ್ತು ಗೃಹ ಬಳಕೆಗಾಗಿ ಅಂತರ್ಜಲದ ಮೇಲಿನ ಅವಲಂಬನೆ ಹೆಚ್ಚಿದೆ.



ಪೈಪ್‌ಲೈನ್ ಸೋರಿಕೆ ಹಾಗೂ ಮರುಪೂರಣ

ಬೆಂಗಳೂರು ನಗರದಲ್ಲಿ ಕಾವೇರಿ 5ನೇ ಹಂತದ ಯೋಜನೆಯಲ್ಲಿ ನೀರು ಪೂರೈಕೆಯ ಪ್ರಮಾಣ ಹೆಚ್ಚಾಗಿರುವುದರಿಂದ, ಪೈಪ್‌ಲೈನ್ ಸೋರಿಕೆಯಿಂದಾಗಿ ಅಂತರ್ಜಲಕ್ಕೆ ಸ್ವಲ್ಪ ಮಟ್ಟಿನ ಮರುಪೂರಣವಾಗುತ್ತಿದೆ (0.083 ಬಿಸಿಎಂ). ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಸ್ವಲ್ಪ ಸುಧಾರಣೆ ಕಂಡಿದೆ ಎಂದು ವರದಿ ತಿಳಿಸಿದೆ.

ಆತಂಕಕಾರಿ ಅಂಕಿಅಂಶ

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಎರಡೂ ಜಿಲ್ಲೆಗಳಲ್ಲಿ ಅಂತರ್ಜಲ ಹೊರತೆಗೆಯುವಿಕೆಯ ಪ್ರಮಾಣವು ಲಭ್ಯವಿರುವ ಸಂಪನ್ಮೂಲಕ್ಕಿಂತ ಶೇ. 100 ಕ್ಕಿಂತ ಹೆಚ್ಚಿದೆ. ಇದು ಭವಿಷ್ಯದ ಜಲ ಭದ್ರತೆಗೆ ದೊಡ್ಡ ಸವಾಲಾಗಿ ಪರಿಣಮಿಸಲಿದೆ.
ವರದಿಯು ಅಂತರ್ಜಲ ಮರುಪೂರಣಕ್ಕೆ ಹೆಚ್ಚಿನ ಒತ್ತು ನೀಡುವಂತೆ ಸೂಚಿಸಿದೆ. ಮಳೆನೀರು ಕೊಯ್ಲು ರಚನೆಗಳ ನಿರ್ಮಾಣ, ಕೆರೆಗಳ ಪುನಶ್ಚೇತನ ಮತ್ತು ನೀರಿನ ಮಿತ ಬಳಕೆ ಇಂದಿನ ತುರ್ತು ಅಗತ್ಯವಾಗಿದೆ. ಸರ್ಕಾರವು ನೀರಿದ್ದರೆ ನಾಳೆ ಎಂಬ ವಿನೂತನ ಯೋಜನೆಯ ಮೂಲಕ ಅಂತರ್ಜಲ ಸಂರಕ್ಷಣೆಗೆ ಮುಂದಾಗಿದೆ. ಸಾರ್ವಜನಿಕರ ಸಹಭಾಗಿತ್ವವೂ ಇಲ್ಲಿ ಅತಿ ಮುಖ್ಯವಾಗಿದೆ. ನಗರದ ಒಡಲಲ್ಲಿ ಜಲ ಬತ್ತದಂತೆ ತಡೆಯಲು ಇಂದೇ ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ಪೀಳಿಗೆಗೆ ನೀರಿನ ಹಾಹಾಕಾರ ತಪ್ಪಿದ್ದಲ್ಲ ಎಂಬ ಎಚ್ಚರಿಕೆಯನ್ನು ಈ ವರದಿ ನೀಡಿದೆ.

ಉದ್ಘಾಟನೆ



ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಚಿಕ್ಕಬಾಣಾವರದಲ್ಲಿ ನಡೆದ ಪೊಲೀಸ್ ಠಾಣೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ.ಸಲೀಂ , ಸಚಿವ ಕೆ.ಎಚ್.ಮುನಿಯಪ್ಪ, ಸಂಸದ ಡಾ. ಕೆ.ಸುಧಾಕರ್, ಶಾಸಕರಾದ ಎಸ್.ಆರ್. ವಿಶ್ವನಾಥ್, ಎಸ್. ಮುನಿರಾಜು ಇತರರಿದ್ದರು.

ಕಿರುಸುದ್ದಿ

ಕಾನೂನು ವಿದ್ಯಾರ್ಥಿಗಳ ಹೊಣೆಗಾರಿಕೆ ಹೆಚ್ಚಲಿ



• **ಬೆಂಗಳೂರು:** ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ಸಮಾಜ ಬದಲಾವಣೆ ಸಾಧ್ಯವಾಗುತ್ತದೆ. ಕಾನೂನು ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಾಗಿದೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅಭಿಮತ ವ್ಯಕ್ತಪಡಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ ಅಖಿಲ ಭಾರತ ಕಾನೂನು ಮತ್ತು ಸಾಂಸ್ಕೃತಿಕ ಉತ್ಸವ – ಲೆಕ್ಸೋರಿಯಾ-2026 ಉದ್ಘಾಟಿಸಿದ ಅವರು, ಕಾನೂನು ಸಮಾಜದ ಶಕ್ತಿ, ಕಾನೂನು ವಿದ್ಯಾರ್ಥಿಗಳು ಸಮ-ಸಮಾಜ ನಿರ್ಮಾಣಕ್ಕೆ ಶ್ರಮಿಸಬೇಕು. ಎಲ್ಲ ವರ್ಗದವರಿಗೂ ಕಾನೂನು ಸೌಲಭ್ಯ ಒದಗಿಸಬೇಕು. ವ್ಯಕ್ತಿ ಮೌಲ್ಯ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ ಎಸ್.ಎಂ., ಪ್ರಾಂಶುಪಾಲ ಪ್ರೊ.ವಿ.ಸುದೇಶ್ ಮತ್ತಿತರರಿದ್ದರು.

ನಾಳೆಯಿಂದ ಕಲಾಗ್ರಾಮದಲ್ಲಿ ನಾಟಕ ಪ್ರದರ್ಶನ

• **ಬೆಂಗಳೂರು:** ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಶನ್ ವತಿಯಿಂದ ಏ.11ಹಾಗೂ 12ರಂದು ಸಂಜೆ 4.30ಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕಲಾಗ್ರಾಮದಲ್ಲಿ ಕನ್ನಡ ನಾಟಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಿರ್ದೇಶಕ ಶ್ರೀನಿಧಿ ಬಿ.ಎಸ್. ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏ.11ರಂದು ಸಂಜೆ 4.30ಕ್ಕೆ ಶ್ರೀಪಾದ್ ಎಸ್. ನಿರ್ದೇಶನದ ಗಾಂಪರ ಗುಂಪು ನಾಟಕ, ಸಂಜೆ 7ಗಂಟೆಗೆ ಕಿಶೋರ್ ಕುಮಾರ್ ನಿರ್ದೇಶನದ ಲಕ್ಷ್ಮಿ ಕಟಾಕ್ಷ, ಏ.12 ಸಂಜೆ 7ಕ್ಕೆ ಚಿದಾನಂದ್ ಎಸ್. ನಿರ್ದೇಶನದ ಅನವರತ ನಾಟಕ ಪ್ರದರ್ಶನವಾಗಲಿದೆ ಎಂದು ತಿಳಿಸಿದರು.

ಆಟವಾಡುತ್ತಿದ್ದ ಬಾಲಕಿ ಮೇಲೆ ಅತ್ಯಾಚಾರ: ಬಂಧನ

• **ಬೆಂಗಳೂರು:** ಆಟವಾಡುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ಬಿಲ್ಡಿಂಗ್ ಮೇಲೆ ಕರೆದೊಯ್ದು ಅತ್ಯಾಚಾರವೆಸಗಿದ ಆರೋಪದಡಿ ಬಿಹಾರ ಮೂಲದ ಕಾರ್ಮಿಕನನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೊಹಮ್ಮದ್ ಮುನ್ನಾ (25) ಬಂಧಿತ ಆರೋಪಿ. 11 ವರ್ಷ ಪ್ರಾಯದ ಅಪ್ರಾಪ್ತೆ ಮೇಲೆ ಅತ್ಯಾಚಾರವೆಸಗಿದ ಆರೋಪದಲ್ಲಿ ಪೋಕ್ಸೋ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯ ಪೋಷಕರು ಕಲಬುರಗಿ ಮೂಲದವರಾಗಿದ್ದು, ಹಲವು ವರ್ಷಗಳಿಂದ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದರು. ದಂಪತಿ ಗಾರೆ ಕೆಲಸ ಮಾಡುತ್ತಿದ್ದಾರೆ. ಬಾಲಕಿಯ ಕೈಯಲ್ಲಿ 150 ರೂ. ಇರುವುದನ್ನು ತಾಯಿ ಗಮನಿಸಿ ಪ್ರಶ್ನಿಸಿದಾಗ ಸರಿಯಾಗಿ ಹೇಳಿರಲಿಲ್ಲ, ಬಳಿಕ ಹಣ ನೀಡಿ ಈ ವಿಚಾರವನ್ನು ಯಾರಿಗೂ ಹೇಳಬಾರದೆಂದು ಹೇಳಿ ಕಳುಹಿಸಿದ. ತನ್ನೊಂದಿಗೆ ವರ್ತಿಸಿದ್ದ ಎಂದು ಬಾಲಕಿ ಹೇಳಿದ್ದಳು.

90 ದಿನದಲ್ಲಿ 90 ಕೋಟಿ ರೂ.ಮೊತ್ತದ ಮಾದಕವಸ್ತು ವಶ | ಜೈಲು ಪಾಲಾದ ಎರಡು ಸಾವಿರಕ್ಕೂ ಹೆಚ್ಚು ಜನ

ಮಾದಕದ್ರವ್ಯ ವಿರುದ್ಧ ಸಿಸಿಬಿ ಸಮರ

▸ **ಚಂದನ್ ಲಕ್ಕೂರು**

ದಿಗಂತ ವಿಶೇಷ

• **ಬೆಂಗಳೂರು:** ನಗರದಲ್ಲಿ ಮಾದಕ ವಸ್ತುಗಳ ವಿರುದ್ಧ ನಡೆಯುತ್ತಿರುವ ಸಮರವು 2026ರ ಮೊದಲ ಮೂರು ತಿಂಗಳಲ್ಲೇ ತೀವ್ರಗೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಮಾರ್ಚ್ 31 ರವರೆಗಿನ ಸಿಸಿಬಿ ಪೊಲೀಸರ ಕಾರ್ಯಾಚರಣೆಯಲ್ಲಿ ಬರೋಬ್ಬರಿ 89.68 ಕೋಟಿ ರೂ. ಮೌಲ್ಯದ ಮಾದಕ ವಸ್ತುವನ್ನು ಜಪ್ತಿ ಮಾಡಿ 2 ಸಾವಿರಕ್ಕೂ ಅಧಿಕ ಮಂದಿಯನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

ಸಿಸಿಬಿ ಪೊಲೀಸರು ಜಪ್ತಿ ಮಾಡಲಾದ ಒಟ್ಟು 983.283 ಕೆ.ಜಿ ಮಾದಕವಸ್ತುವಲ್ಲಿ ಗಾಂಜಾ ಅತಿ ಹೆಚ್ಚಿನ ಪ್ರಮಾಣದಲ್ಲಿದೆ. ಸುಮಾರು 905 ಕೆ.ಜಿ.ಗೂ ಅಧಿಕ ಗಾಂಜಾ ಮತ್ತು 27 ಕೆ.ಜಿ. ಹೈಡ್ರೋ ಗಾಂಜಾ, 32.89 ಕೆ.ಜಿ. ಎಂಡಿಎಂಎ ವಶಕ್ಕೆ ಪಡೆಯಲಾಗಿದೆ. ಮೌಲ್ಯದ ದೃಷ್ಟಿಯಿಂದ ನೋಡಿದಾಗ ಎಂಡಿಎಂಎ ಅತ್ಯಂತ ದುಬಾರಿಯಾಗಿದೆ. 32.89 ಕೆ.ಜಿ. ತೂಕದ ಎಂಡಿಎಂಎ ಮೌಲ್ಯವು 52.1 ಕೋಟಿ ರೂ.ಗಳಾಗಿವೆ. ಇದು ಒಟ್ಟು ಜಪ್ತಿಯ ಮೌಲ್ಯದ ಅರ್ಧಕ್ಕಿಂತಲೂ ಹೆಚ್ಚಿದೆ.

ಸಿಸಿಬಿ ಪೊಲೀಸರಿಂದ 2199 ಮಂದಿ ಬಂಧನ: ಪೊಲೀಸರು 90 ದಿನದ ಅವಧಿಯಲ್ಲಿ ಒಟ್ಟು 2199 ಮಂದಿಯನ್ನು ಬಂಧಿಸಲಾಗಿದ್ದು, ಈ ಪೈಕಿ ಕೇವಲ 213 ಪ್ರಕರಣಗಳು ಮಾರಾಟಗಾರರು ಅಥವಾ ಪೆಡ್ಲರ್‌ಗಳಿಗೆ ಸಂಬಂಧಿಸಿದ್ದಾಗಿವೆ. ಉಳಿದ 1,410 ಪ್ರಕರಣಗಳು ಮಾದಕವಸ್ತು ಸೇವನೆ ಮಾಡುವವರ ಮೇಲೆ ದಾಖಲಾಗಿವೆ. ಇದು ಕೇವಲ ಪೂರೈಕೆದಾರರನ್ನು ಹಿಡಿಯುವುದು ಮಾತ್ರವಲ್ಲದೆ, ಬೇಡಿಕೆಯನ್ನು ತಗ್ಗಿಸಲು ಗ್ರಾಹಕರ ಮೇಲೆಯೂ ಕಠಿಣ ಕಣ್ಣಿಟ್ಟಿರುವುದನ್ನು ಸೂಚಿಸುತ್ತದೆ. ಕೊಕೇನ್, ಹೆರಾಯಿನ್ ಮತ್ತು ಎಲ್‌ಎಸ್‌ಡಿ ಸ್ಟ್ರಿಪ್ಸ್‌ಗಳಂತಹ ದುಬಾರಿ ಮೌಲ್ಯದ ಡ್ರಗ್ಸ್‌ಗಳೂ ಜಪ್ತಿಯಾಗಿವೆ.

ಮಕ್ಕಳ ಮೇಲೆ ಪೋಷಕರು ಗಮನವಹಿಸಲಿ: ಪೊಲೀಸ್ ಇಲಾಖೆಯು ನಿರಂತರ ದಾಳಿಗಳನ್ನು ನಡೆಸುತ್ತಿದ್ದರೂ ಈ ಜಾಲವನ್ನು ಬುಡಸಹಿತ ಕಿತ್ತೆಸೆಯಲು ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಕಾಲೇಜು ಆಡಳಿತ ಮಂಡಳಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ, ವಿದ್ಯಾರ್ಥಿಗಳ ನಡವಳಿಕೆಯ ಮೇಲೆ ನಿಗಾ ಇಡಬೇಕಿದೆ. ಪೋಷಕರು ತಮ್ಮ ಮಕ್ಕಳ ಗೆಳೆತನ ಮತ್ತು ಹಠಾತ್ ವರ್ತನೆಯ ಬದಲಾವಣೆಗಳನ್ನು ಗಮನಿಸಿ, ಆರಂಭಿಕ ಹಂತದಲ್ಲೇ ಮಾದಕವಸ್ತು ಸೇವನೆ ಮತ್ತು ಮಾರಾಟ ಕುರಿತು ಆಪ್ತಸಮಾಲೋಚನೆ ನಡೆಸಬೇಕಾದ ಅನಿವಾರ್ಯತೆ ಇದೆ.



90 ದಿನದಲ್ಲಿ ವಶ ಸಿಸಿಬಿ ಪೊಲೀಸರು ಜಪ್ತಿ ಮಾಡಿದ ಡ್ರಗ್ಸ್	
ವಶಪಡಿಸಿಕೊಂಡ ಡ್ರಗ್ಸ್	983.283 ಕೆ.ಜಿ.
ಬಂಧಿತ ಆರೋಪಿಗಳು	2,199
ಮಾದಕ ವಸ್ತುವಿನ ಮೌಲ್ಯ	89.68 ಕೋಟಿ ರೂ.

ಮಾದಕ ದ್ರವ್ಯ ಜಾಲದಲ್ಲಿ ಭಾಗಿಯಾಗಿ ಜೈಲಿನಿಂದ ಬಂದವರ ಮೇಲೆ ನಾರ್ಕೋಟಿಕ್ಸ್ ವಿಂಗ್ ಹದ್ದಿನ ಕಣ್ಣಿಟ್ಟಿರುತ್ತದೆ. ಅವರು ಮತ್ತೆ ಹಳೆಯ ದಾರಿ ತುಳಿದರೆ ಪಿಟ್ ಎನ್‌ಡಿಪಿಎಸ್ ಕಾಯ್ದೆಯಡಿ ಮರಳಿ ಜೈಲಿಗಟ್ಟುವುದು ನಿಶ್ಚಿತ. ಸಾರ್ವಜನಿಕ ಆಸ್ತಿಗೆ ನಷ್ಟ ಉಂಟು ಮಾಡುವವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ನಾವು ಹಿಂಜರಿಯುವುದಿಲ್ಲ.



■ ರಾಜಾ ಇಮಾಮ್ ಖಾಸೀಂ, ಡಿಸಿಪಿ (ಅಪರಾಧ ವಿಭಾಗ)





ವಿದ್ಯಾರ್ಥಿಗಳ ಮೇಲೆ ಬೀರುವ ದುಷ್ಪರಿಣಾಮ
- ಮಾನಸಿಕ ಆರೋಗ್ಯದ ಕುಸಿತ
- ಅಪರಾಧ ಲೋಕಕ್ಕೆ ಪ್ರವೇಶ
- ಭವಿಷ್ಯಕ್ಕೆ ಕೊಡಲಿ ಪೆಟ್ಟು
- ಕುಟುಂಬದಿಂದ ಅಂತರ ಕಾಯ್ದುಕೊಳ್ಳುವುದು

ಮದ್ಯ ಜತೆ ಮಾತ್ರೆ ಸೇವನೆ

• **ಬೆಂಗಳೂರು:** ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತಿಯೊಬ್ಬರು ಝೋಂಬಿ ಡ್ರಗ್ (ಕ್ಸೈಲಿನ್ ಮಿಶ್ರಿತ ಮಾದಕ ವಸ್ತು) ಸೇವಿಸಿ ವಿಚಿತ್ರವಾಗಿ ವರ್ತಿಸುತ್ತಿದ್ದಾರೆ ಎಂಬ ವಿಡಿಯೋ ವೈರಲ್ ಆಗಿತ್ತು. ಈ ಕುರಿತು ಸಾರ್ವಜನಿಕರಲ್ಲಿ ಮೂಡಿದ್ದ ಆತಂಕಕ್ಕೆ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತೆರೆ ಎಳೆದಿದ್ದಾರೆ.

ಇನ್ಸ್ಟಾಗ್ರಾಂ ಖಾತೆಯೊಂದರಲ್ಲಿ, ವ್ಯಕ್ತಿಯೊಬ್ಬರು ಮಾದಕ ವಸ್ತುವಿನ ಪ್ರಭಾವಕ್ಕೆ ಒಳಗಾದವರಂತೆ ಕಾಣಿಸಿಕೊಳ್ಳುತ್ತಿರುವ ವಿಡಿಯೋ ಹರಿದಾಡುತ್ತಿರುವುದು ಪೊಲೀಸರ ಗಮನಕ್ಕೆ ಬಂದಿತ್ತು. ಕೂಡಲೇ ಎಚ್ಚೆತ್ತ ಬಾಗಲೂರು ಪೊಲೀಸ್ ಠಾಣೆಯ ಅಧಿಕಾರಿಗಳು, ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಸಂಸ್ಥೆಯ ಸಮೀಪ ಆ ವ್ಯಕ್ತಿಯನ್ನು ಪತ್ತೆಹಚ್ಚಿ ವಶಕ್ಕೆ ಪಡೆದಿದ್ದರು. ತದನಂತರ ಆತನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿತ್ತು.

▸▸ ಜಾಲತಾಣದಲ್ಲಿ ಯುವಕನ ವಿಚಿತ್ರ ವರ್ತನೆ: ಆಯುಕ್ತರ ಸ್ಪಷ್ಟನೆ

ವೈದ್ಯಕೀಯ ವರದಿ: ಪೊಲೀಸರು ನಡೆಸಿದ ತನಿಖೆ ಮತ್ತು ವೈದ್ಯಕೀಯ ವರದಿಗಳ ಪ್ರಕಾರ, ಸದರಿ ವ್ಯಕ್ತಿ ಯಾವುದೇ ರೀತಿಯ ಮಾದಕ ವಸ್ತು ಅಥವಾ ಮನೋಪ್ರೇರಕ ಪದಾರ್ಥಗಳನ್ನು ಸೇವಿಸಿಲ್ಲ ಎಂಬುದು ದೃಢಪಟ್ಟಿದೆ. ಆತ ಮದ್ಯ ಸೇವಿಸಿದ್ದರಿಂದ, ದೈಹಿಕ ಸಮತೋಲನ ತಪ್ಪಿ ವಿಡಿಯೋದಲ್ಲಿ ಕಂಡುಬಂದಂತೆ ಒಂದೇ ಕಡೆ ಅಸ್ಥಿರವಾಗಿ ನಿಲ್ಲುವಂತಾಗಿತ್ತು.

ಸಾರ್ವಜನಿಕರು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ಇಂತಹ ಸತ್ಯಾಸತ್ಯತೆ ಇಲ್ಲದ ಮಾಹಿತಿಯನ್ನು ಹಂಚಿಕೊಂಡು ವಿನಾಕಾರಣ ಭೀತಿ ಸೃಷ್ಟಿಸಬಾರದು. ಇದು ವ್ಯಕ್ತಿಯ ಘನತೆಗೆ ಧಕ್ಕೆ ತರುವ ವಿಷಯವಾಗಿದ್ದು, ವದಂತಿ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಯಾವುದೇ ಅನುಮಾನಾಸ್ಪದ ಘಟನೆಗಳು ಕಂಡುಬಂದಲ್ಲಿ ನೇರವಾಗಿ ಪೊಲೀಸರಿಗೆ ಮಾಹಿತಿ ನೀಡಿ ಸಹಕರಿಸಿ.
■ ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಆಯುಕ್ತ

ಜೆಡಿಎಸ್ ಜನತಾ ಸಮಾವೇಶ ಕುರಿತು ಪೂರ್ವಭಾವಿ ಸಭೆ

ಸಮಾವೇಶ ಯಶಸ್ಸಿಗೆ ಶ್ರಮಿಸಲು ಮನವಿ

• **ಬೆಂಗಳೂರು:** ಶನಿವಾರ ನಡೆಯಲಿರುವ ಜೆಡಿಎಸ್ ಜನತಾ ಸಮಾವೇಶವನ್ನು ನಿಟ್ಟಿನಲ್ಲಿ ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಅವರು ಪಕ್ಷದ ರಾಜ್ಯ ಕಚೇರಿಯಲ್ಲಿ ಮಹಿಳಾ ಮುಖಂಡರು ಮತ್ತು ನಾಯಕರ ಸಭೆ ನಡೆಸಿದರು.

ಕೊಮ್ಮಘಟ್ಟದ ನೈಸ್ ಗ್ರೌಂಡ್‌ನಲ್ಲಿ ನಡೆಯಲಿರುವ ಸಮಾವೇಶದಲ್ಲಿ ಪಕ್ಷದ ಮಹಿಳಾ ಕಾರ್ಯಕರ್ತರು ಮತ್ತು ನಾಯಕಿಯರು ದೊಡ್ಡ ಪ್ರಮಾಣದಲ್ಲಿ ಪಾಲ್ಗೊಳ್ಳಬೇಕು. ಸಮಾವೇಶದ ಯಶಸ್ಸಿಗೆ ಎಲ್ಲರೂ ಒಮ್ಮತ ಮತ್ತು ಒಗ್ಗಟ್ಟಿನಿಂದ ದುಡಿಮೆ ಮಾಡಬೇಕು ಎಂದು ಸಭೆಯಲ್ಲಿ ತಿಳಿಸಿದರು.

ಜಿಬಿಎ ಚುನಾವಣೆಯ ದೃಷ್ಟಿಯಿಂದ ಪಕ್ಷದ ಸಮಾವೇಶವು ಅತ್ಯಂತ ಮಹತ್ವ ಪಡೆದುಕೊಂಡಿದೆ. ನಗರದ ಎಲ್ಲಾ 28 ವಿಧಾನಸಭೆ ಕ್ಷೇತ್ರಗಳಿಂದ ಮಹಿಳಾ ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಳ್ಳಬೇಕು.



ಅಲ್ಲದೆ, ರಾಜ್ಯ ಸರ್ಕಾರ ಬೆಂಗಳೂರಿನ ವಿಚಾರದಲ್ಲಿ ನಡೆಸುತ್ತಿರುವ ಅಕ್ರಮ ಮತ್ತು ಅನಾಚಾರಗಳ ಬಗ್ಗೆ ಜನತೆಗೆ ಮನವರಿಕೆ ಮಾಡಿಕೊಡಬೇಕು. ಮನೆ ಮನೆಗೂ ತೆರಳಿ ಸರ್ಕಾರ ವಿರುದ್ಧ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಗ್ರೇಟರ್ ಬೆಂಗಳೂರು ಚುನಾವಣೆಗೆ ಕಾರ್ಯಕರ್ತರು ಮತ್ತು ಮುಖಂಡರನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕೂಡ ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು. ಹೆಚ್ಚು ಪ್ರಮಾಣದಲ್ಲಿ ಮಹಿಳೆಯರು ಸಮಾವೇಶದಲ್ಲಿ ಪಾಲ್ಗೊಳ್ಳುವ ಬಗ್ಗೆ ನಾಯಕಿಯರ ಜೊತೆ ಚರ್ಚೆ ನಡೆಸಲಾಯಿತು ಎಂದು ಅವರು ಮಾಧ್ಯಮಗಳಿಗೆ ತಿಳಿಸಿದರು.

ಜಿಬಿಎ ರಚನೆಯಾಗಿ 5 ಐದು ಪಾಲಿಕೆಗಳು ಅಸ್ತಿತ್ವಕ್ಕೆ ಬಂದ ನಂತರ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಕೂಡ ಪಕ್ಷ ಬಲವರ್ಧನೆಗೆ ಆದ್ಯತೆ ಕೊಡಬೇಕು. ಅತಿ ಮುಖ್ಯವಾಗಿ ಬೂತ್ ಮತ್ತು ವಾರ್ಡ್ ಮಟ್ಟದಲ್ಲಿ ಮಹಿಳಾ ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಹೇಳಿದರು. ಸಭೆಯಲ್ಲಿ ಪಕ್ಷದ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಗ್ರೇಟರ್ ಬೆಂಗಳೂರು ಮಹಿಳಾ ಅಧ್ಯಕ್ಷೆ ಶೈಲಾ ಸಂತೋಜಿರಾವ್, ಬೆಂಗಳೂರು ವಿಭಾಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಾರ್ಥನಾಗೆ ಉತ್ತಮ ಫಲಿತಾಂಶ



• **ಕೆಂಗೇರಿ:** ಯಶವಂತಪುರ ವಿಧಾನಸಭಾ ಕ್ಷೇತ್ರದ ತಲಘಟ್ಟಪುರದಲ್ಲಿರುವ ಜ್ಞಾನ ಸ್ವೀಕಾರ್ ಪಿಯು ಕಾಲೇಜಿನ ಭೀಮನ ಕುಪ್ಪೆ ಗ್ರಾಮದ ವಿದ್ಯಾರ್ಥಿನಿ ಪ್ರಾರ್ಥನಾ ಪಿ. ಗೌಡ, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯಾಗಿರುವ ಪ್ರಾರ್ಥನಾ, ವಾಣಿಜ್ಯ ವಿಭಾಗದಲ್ಲಿ 600 ಕ್ಕೆ 550 ಅಂಕಗಳನ್ನು ಪಡೆದಿದ್ದಾರೆ. ಕನ್ನಡ- 84, ಇಂಗ್ಲಿಷ್- 90, ಅರ್ಥಶಾಸ್ತ್ರ -94 ಬಿಸಿನೆಸ್ ಸ್ಟಡೀಸ್ -98, ಲೆಕ್ಕ ಶಾಸ್ತ್ರ- 88 ಹಾಗೂ ಸಂಖ್ಯಾಶಾಸ್ತ್ರ -96 ಅಂಕಗಳನ್ನು ಪಡೆದು ಕಾಲೇಜಿಗೆ ಮತ್ತು ಪೋಷಕರಿಗೆ ಕೀರ್ತಿ ತಂದು ಕೊಟ್ಟಿದ್ದಾರೆ.

18 ಸಾಧಕರಿಗೆ ಅಂಬೇಡ್ಕರ್ ಪ್ರಶಸ್ತಿ

• **ಬೆಂಗಳೂರು:** ಸುಮಂಗಲಿ ಸೇವಾಶ್ರಮದ ಪದ್ಮಶ್ರೀ ಡಾ. ಎಸ್.ಜಿ. ಸುಶೀಲಮ್ಮ ಸೇರಿದಂತೆ 18 ಜನರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ – ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ನೀಡಲಾಗುವ ಪ್ರತಿಷ್ಠಿತ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರಕಟಿಸಲಾಗಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏ.15ರಂದು ಟೌನ್ ಹಾಲ್‌ನಲ್ಲಿ ಆಯೋಜಿಸಲಾಗಿದೆ.

ವಿವಿಧ ಜಿಲ್ಲೆಗಳ ಸುಮಾರು 19ಕ್ಕೂ ಹೆಚ್ಚು ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಪ್ರಮುಖವಾಗಿ ಸಮಾಜ ಸೇವೆಯಲ್ಲಿ ಪದ್ಮಶ್ರೀ ಡಾ. ಎಸ್.ಜಿ. ಸುಶೀಲಮ್ಮ, ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಒಡನಾಡಿಗಳಾಗಿದ್ದ ಎಸ್.ಎಲ್. ಸತ್ಯಪ್ರಸಾದ್, ಕಲೆ ಮತ್ತು ಸಾಹಿತ್ಯದಲ್ಲಿ ಜಾನಪದ ಗಾಯಕ ಹಾಗೂ ನಟ ಗುರುರಾಜ್ ಹೊಸಕೋಟೆ, ಹಿರಿಯ ಪತ್ರಕರ್ತ ಮೋಹನ್ ಭೀಮರಾವ್ ಕುಲಕರ್ಣಿ, ಸ್ವಾತಂತ್ರ್ಯ ಹೋರಾಟಗಾರ 98 ವರ್ಷ ವಯಸ್ಸಿನ ಎಚ್.ಕೆ. ಪಾಪಣ್ಣ, ಕರಾಟೆ ಪಟು ಮತ್ತು ವ್ಯಾಕರಣ ನಿಪುಣ 80 ವರ್ಷದ ನಾರಾಯಣ್ ಸೇರಿದಂತೆ ಮತ್ತಿತರ ಸಾಧಕರಿಗೆ ಪ್ರಶಸ್ತಿ ಘೋಷಣೆ ಮಾಡಲಾಗಿದೆ.



ಸಚಿವಾಲಯ ನೌಕರರ ಸಂಘದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಅಧಿಕಾರಸ್ಥರಲ್ಲಿ ಅಂತಃಕರಣ ಇರಲಿ

• **ಬೆಂಗಳೂರು:** ಅಧಿಕಾರ ಅಹಂಕಾರವಾಗಬಾರದು, ಅಧಿಕಾರ ಅಂತಃಕರಣವಾಗಬೇಕು. ಅದರಂತೆ ಕುರ್ಚಿಯಲ್ಲಿ ಕುಳಿತ ವ್ಯಕ್ತಿ ಕುಬ್ಜನಾಗ ಬಾರದು. ಕುರ್ಚಿಗಿಂತ ಮನುಷ್ಯ ಎತ್ತರವಾದರೆ ಅದು ಪ್ರಜಾಪ್ರಭುತ್ವ, ಮನುಷ್ಯನಿಗಿಂತ ಕುರ್ಚಿ ಎತ್ತರವಾಗಿದ್ದರೆ ಅದು ಸರ್ವಾಧಿಕಾರ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.



ಕರ್ನಾಟಕ ಸರ್ಕಾರ ಸಚಿವಾಲಯ ಸಹಕಾರ ಸಂಘದ ವತಿಯಿಂದ ಸಚಿವಾಲಯ ನೌಕರರ ಸಂಘದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದ ಅವರು, ಅಕ್ಷರ ಯಾವತ್ತೂ ಅಹಂಕಾರವಾಗಬಾರದು, ಅಕ್ಷರ ಅಂತಃಕರಣವಾಗಬೇಕು. ನಮ್ಮಲ್ಲಿ ತಾಯ್ತನ ಇದ್ದರೆ ಬದುಕಿನಲ್ಲಿ ಮೇಲು ಕೀಳು ಇಲ್ಲದ ತತ್ವಜ್ಞಾನ ಕಲಿಯುತ್ತೇವೆ ಎಂದರು.

ಒಬ್ಬ ಜ್ಞಾನಿ ಅಜ್ಞಾನಿಯನ್ನು ನೆನಪಿಸಿಕೊಳ್ಳಬೇಕು. ಸಂತೋಷ ಪಡದೆ ಇರುವವನು ಸಂಕಟ ಪಡುವವನನ್ನು ನೆನಪಿಸಿಕೊಳ್ಳಬೇಕು. ಮಾತು ಬಲ್ಲವನು ಮೌನಿಯಾದವನನ್ನು ನೆನಪಿಸಿಕೊಳ್ಳಬೇಕು. ಈ ಎರಡು ಸೇರಿದಾಗ ಬದುಕು ಅರ್ಥವಾಗುತ್ತದೆ. ಆ ಬದುಕನ್ನು ಅರ್ಥ ಮಾಡಿಸುವುದನ್ನು ನಾವು ಮಕ್ಕಳಿಗೆ ಕಲಿಸಬೇಕು. ಆದರೆ, ನಾವು ಏಕಮುಖಿ ವಾದುದನ್ನೇ ಕಲಿಸಲು ಹೊರಟಿದ್ದೇವೆ ಎಂದು ತಿಳಿಸಿದರು.

ನಾವು ಶ್ರೀಮಂತವಾಗಿರುವುದನ್ನೇ ಸ್ವೀಕರಿಸುತ್ತೇವೆ. ಆದರೆ, ಬದುಕು ಶ್ರೀಮಂತವಾಗಿರುವುದಿಲ್ಲ. ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿ ಹೇಗೆ ಬೆಳೆಸುತ್ತೇವೆ ಎಂಬುವುದು ಮುಖ್ಯವಾಗುತ್ತದೆ. ನಾವು ಬೆಳೆಯುತ್ತಾ ಬೆಳೆಯುತ್ತಾ ನಮ್ಮ ಮನಸ್ಸು ಮಗುವಾಗಬೇಕು, ಮನಸ್ಸು ಮಗುವಾಗದಿದ್ದರೆ ನಾವು ಮನುಷ್ಯರಾಗುವುದಿಲ್ಲ, ಅಹಂಕಾರ ಬೆಳೆಯುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಚಿವಾಲಯ ಸಹಕಾರ ಸಂಘದ ಅಧ್ಯಕ್ಷ ಎಚ್.ಹನುಮೇಗೌಡ, ಉಪಾಧ್ಯಕ್ಷೆ ಗೀತಾ ಸೇರಿದಂತೆ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಆರ್‌ಎನ್‌ಎಸ್ ಕಾಲೇಜಿಗೆ ಉತ್ತಮ ಫಲಿತಾಂಶ



• **ಬೆಂಗಳೂರು:** ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಚೆನ್ನಸಂದ್ರದ ಆರ್.ಎನ್.ಎಸ್. ಪದವಿ ಪೂರ್ವ ಕಾಲೇಜು ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ರಾಜ್ಯಮಟ್ಟದಲ್ಲಿ 19ಕ್ಕೂ ಹೆಚ್ಚು ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆಂದು ಕಾಲೇಜು ಆಡಳಿತ ಮಂಡಳಿ ತಿಳಿಸಿದೆ.

ವಾಣಿಜ್ಯ ವಿಭಾಗದಲ್ಲಿ ಸಹನಾ ಆರ್. 600 ಅಂಕಗಳಿಗೆ 598(ಶೇ.99.66) ಅಂಕ ಪಡೆಯುವ ಮೂಲಕ ರಾಜ್ಯಕ್ಕೆ 2ನೇ ಸ್ಥಾನ ಪಡೆದಿದ್ದಾಳೆ. ಅಮೃತಾ ಪಿ.ಎಸ್. (596), ಸಾಹಿಲ್ ಅರ್ಷತ್ (595), ನವ್ಯಾ ಬಿ.ಎಂ. (595), ಅಭಿಜ್ಞಾ ರಾವ್ ಜಿ.ಬಿ. (595), ನಿಹಾರ(594) ಅತ್ಯುತ್ತಮ ಅಂಕಗಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಕಿರಣ್ ಕುಮಾರ್ ಎಂ. 595 ಅಂಕಗಳಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ಚಿನ್ಮಯಿ ಅನಂತ ರಾಮು 594 ಅಂಕ ಪಡೆದು ದ್ವಿತೀಯ ಸ್ಥಾನದಲ್ಲಿದ್ದಾರೆ. ಲೇಖನ ಎಂ.ಡಿ. (590), ಅನುಶ್ರೀ ಎಚ್. (589), ವರ್ಷಾ ಎಲ್. (589) ಅತ್ಯುತ್ತಮ ಅಂಕಗಳಿಸಿದ್ದಾರೆ. ಅಲ್ಲದೆ, ದಿವ್ಯಾ ಟಿ.ಆರ್., ಮಾನ್ವಿ ಕಶ್ಯಪ್, ಸೋನಂ ಎಸ್., ಗಾನವಿ ಸಿ., ಪೂರ್ವಿ ಎಸ್., ಕೃತಿಕಾ ಹಿರೇಮಠ್ ಹಾಗೂ ಯಶ್ ಎನ್. ಸಹ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



ಕಾಲೇಜಿನ ಬಹುತೇಕ ವಿದ್ಯಾರ್ಥಿಗಳು ವಿವಿಧ ವಿಷಯಗಳು ಸೇರಿದಂತೆ ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಸಂಖ್ಯಾಶಾಸ್ತ್ರ ಮತ್ತು ಸಂಸ್ಕೃತ ವಿಷಯದಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕ ವೃಂದ ಅಭಿನಂದನೆ ಸಲ್ಲಿಸಿದ್ದಾರೆ.

ವಿಶಿಷ್ಟಚೇತನರ ಸಬಲೀಕರಣಕ್ಕೆ ನೆರವು

• **ಬೆಂಗಳೂರು:** ದೇಶದಲ್ಲಿನ ಬಹುತೇಕ ಅಂಗವಿಕಲರು ಬಡತನ ರೇಖೆಗಿಂತ ಕೆಳಗೆ ಬದುಕುತ್ತಿದ್ದು ವಿಶಿಷ್ಟಚೇತನರ ಸಬಲೀಕರಣಕ್ಕೆ ಸರ್ಕಾರ ಮತ್ತು ಸಮಾಜ ಅಗತ್ಯ ನೆರವು ಒದಗಿಸಬೇಕು ಎಂದು ಸಮರ್ಥನಂ ಇಂಟರ್‌ನ್ಯಾಷನಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಡಾ. ಜಿ.ಕೆ. ಮಹಾಂತೇಶ್ ಮನವಿ ಮಾಡಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗ ವಿಶಿಷ್ಟಚೇತನರ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿದ ಅವರು, ವಿಶ್ವದ ಜನಸಂಖ್ಯೆಯ ಶೇ.15ರಷ್ಟು ಮಂದಿ ವಿವಿಧ ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ. ಉನ್ನತ ಶಿಕ್ಷಣದ ಹಂತದಲ್ಲಿ ಅಂಗವಿಕಲರ ಸಂಖ್ಯೆ ಅತ್ಯಲ್ಪವಾಗಿದ್ದು, ಉದ್ಯೋಗ ರಂಗದಲ್ಲೂ ಅನೇಕ ಕಾರಣಗಳಿಂದಾಗಿ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ವಿಶಿಷ್ಟಚೇತನರ ಪಿಂಚಣಿಯನ್ನು ಅವಲಂಬಿಸದೆ ಸ್ವಾವಲಂಬಿ ಬದುಕು ಸಾಗಿಸುವ ವಾತಾವರಣ ನಿರ್ಮಾಣವಾಗಲಿ ಎಂದು ಆಶಿಸಿದರು. ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ತತ್ವದಂತೆ ಎಲ್ಲ ರೀತಿಯ ತಾರತಮ್ಯಗಳನ್ನು ತೊಲಗಿಸಿ ಸಾಮಾಜಿಕ-ಆರ್ಥಿಕ ಪ್ರಗತಿಯಲ್ಲಿ ವಿಶಿಷ್ಟಚೇತನರನ್ನೂ ಒಳಗೊಳ್ಳುವ ವಿಶಾಲ ಮನೋಭಾವ ಬೆಳೆಸಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು.

ಇಂದು ನಗರದಲ್ಲಿ...

- ಸೆಂಟರ್ ಫಾರ್ ಗ್ಲೋಬಲ್ ಲಾಗ್ವೇಜಸ್: ರಷ್ಯಾದ ಗಗನಯಾತ್ರಿ ಡೆನಿಸ್ ಮ್ಯಾಟ್ವೀವ್ ಅವರೊಂದಿಗೆ ಸಂವಾದ ಸ್ಥಳ ಹೊಸ ಅಕಾಡೆಮಿಕ್ ಬ್ಲಾಕ್ ಸಭಾಂಗಣ, ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿ, ಬೆಳಗ್ಗೆ 10
- ಉದ್ಯಮಿ ಹೂಡಿಕೆದಾರರ ಸಮಾವೇಶ. ಸ್ಥಳ : ಐಟಿಸಿ ವಿಂಡ್ಸರ್ ಹೋಟೆಲ್. ಬೆಳಗ್ಗೆ 10.45
- ವಿಶ್ವ ಮಹೋತ್ಸವ ಆಚರಣೆ ಸಂಭ್ರಮ ಹಾಗೂ ಕನ್ನಡ ನಾಟಕೋತ್ಸವ-2026ರ ಕೆ.ಜಿ.ಸಂಪತ್‌ಕುಮಾರ್ ನಿರ್ದೇಶನದ ಭಾಗವತರ ನಾಟಕ ಮಂಡಳಿ ನಾಟಕ ಪ್ರದರ್ಶನ. ಸ್ಥಳ : ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ. ಸಂಜೆ 6.30

[illegible]

By Order of the Court, Senior Sheristedar, XXVII Addl. Chief Judicial Magistrate Court, Bengaluru City.

BEFORE THE MOTOR ACCIDENT CLAIMS TRIBUNAL AT BANGALORE (SCCH-20)
MVC.No.420/2026

BETWEEN: Manjula & another ... **PETITIONER**
AND: Mrs.Lakshmi & another ...**RESPONDENTS**

NOTICE TO RESPONDENT No. 1

Mrs.Lakshmi, W/o Mahadeva, R/at 1st main road, Gangappa Garden Bhuvaneshwari, K.P.Agrahara, Bangalore-560023. (Owner of the Bolero bearing Reg No.KA-02-AJ-8930)

WHEREAS, the petitioner in MVC. No.420/2026, has filed the above claim petition against the respondents seeking compensation for a Sum of Rs.50,00,000/- an account of death of Narayanaswamy S/o Muniramanna in a road traffic accident involving your vehicle Bolero bearing Reg No.KA-02-AJ-8930, which occurred on 06-12-2025 at about 04.50 PM, on National Highway Road, Myalapura Gate to Ramasandra Gate, Bangalore, you are hereby directed to be present before the Hon'ble court (Mayo Hall SCCH-20) on **01-06-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on 07-04-2026.

By order of the court, Sheristedar, Court of Small Causes, Mayo Hall Unit, Bangalore.

M. SUBRAMANI, Advocate
No. 13, 12th Cross, Udayaravi Divine Paradise Building, 3rd floor, Cubbonpet, Bangalore-560002.

[illegible]

BEFORE THE MOTOR ACCIDENT CLAIMS TRIBUNAL AT BANGALORE
MVC. No. 270/2026

BETWEEN: Gopi Krishna.G ...**PETITIONER**
AND: N. Sunil Kumar & others ... **RESPONDENTS**

NOTICE TO RESPONDENT No. 1

N. Sunil Kumar, C/o Narayana Swamy, No.27, 7th Main, 4th cross, Sree Chowdeshwari Temple, Kaveri Nagar, Mahadevapura Post, Bangalore-560048 (Owner of the vehicle bearing Reg No.KA-51-AL-7281)

WHEREAS, the petitioner in MVC. No.270/2026, has filed the above claim petition against the respondents seeking compensation for a Sum of Rs.20,00,000/- for the injuries sustained by Gopi Krishna.G in a road traffic accident involving your vehicle Tempo Traveler bearing Reg No.KA-51-AL-7281, which occurred on 26-12-2025 at about 05.30 P.M, near Baldwin School, Manduru Village, Bangalore, you are hereby directed to be present before the Hon'ble court (Mayo Hall SCCH-21) on **01-06-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on 07-04-2026.

By order of the court, Sheristedar, Court of Small Causes, Mayo Hall Unit, Bangalore.

M. SUBRAMANI, Advocate
No. 13, 12th Cross, Udayaravi Divine Paradise Building, 3rd floor, Cubbonpet, Bangalore-560002.

BEFORE THE MOTOR ACCIDENT CLAIMS TRIBUNAL AT BANGALORE
MVC.No.9855/2025

Anshid.K.N ... **PETITIONER** -V/s-
Safiulla.S & others ... **RESPONDENTS**

NOTICE TO RESPONDENT No. 1

Safiulla.S S/o Mahaboob Pera, R/at No.63, 1st Cross, Doddakannalli, Sarjapura Main Road, Bangalore-560035. (Owner vehicle bearing Reg No. KA-01-JN-7176)

WHEREAS, the petitioner in MVC. No.9855/2025, has filed the above claim petition against the respondents seeking compensation for a Sum of Rs.20,00,000/- for the injuries sustained by Anshid.K.N. in a road traffic accident involving your vehicle Motorcycle bearing Reg No.KA-01-JN-7176, which occurred on 02-12-2025 at about 11.15 P.M, in front of Kshema Hospital, Kodatyhi Gate, Sarjapura Main Road, Bangalore, you are hereby directed to be present before the Hon'ble court (Mayo Hall SCCH-21) on **18-05-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on 02-04-2026.

By order of the court, Sheristedar, Court of Small Causes, Mayo Hall Unit, Bangalore.

M. SUBRAMANI, Advocate
No. 13, 12th Cross, Udayaravi Divine Paradise Building, 3rd floor, Cubbonpet, Bangalore-560002.

IN THE COURT OF THE PRL. CIVIL JUDGE AND JMFC. AT ANEKAL
C.Mis.No.630/2026

BETWEEN : G. LALITHA, W/o late H. Gopal, Aged about 73 years, ...**PETITIONER**
AND: THE CHIEF OFFICER, T.M.C.Anekal Taluk, Anekal. ... **RESPONDENT**

PUBLIC NOTICE

Whereas the petitioner have filed the above petition for seeking death certificate of husband of the petitioner namely H.GOPAL S/O LATE HAMBALAPPA who is the Husband of the petitioner and he was died on 20/08/2022 at petitioner home, 224, Ward No: 22 Narayanapura, anekal Taluk 562106, Bengaluru District for necessary relief take notice that if any interested persons in respect of Death certificate of H.GOPAL are hereby called upon to appear before this Hon'ble court either personally or through an Advocate duly instructed on **15-05-2026** at 11:00 AM otherwise the matter will be heard and decided ex parte.

Given under my hand and seal of the court on 09-04-2026.

By order of the court, Sheristedar, Civil Judge Jr Dvn and JMFC Court at Anekal.

KUMARI. DEEPA.M, Advocate
Taluk Legal Aid Committee, Anekal, Bengaluru-562106.

ಸಾರ್ವಜನಿಕ ಪ್ರಕಟಣೆ

[illegible]

CHANGE OF NAME

I, **JITENDRA VAGARAM** S/o VAGARAM aged 21 years, residing at NO 395, 1ST FLOOR, CELEBRITY LAYOUT, DODDATHOGUR, ELECTRONICITY PHASE 1, BENGALURU-560100, do hereby declare that I have changed my name from **JITENDER VAGARAM** TO **JITENDRA VAGARAM**, henceforth, and I shall be known and called as **JITENDRA VAGARAM**, for all purposes, vide affidavit dated 4TH APRIL 2026, sworn before Advocate and Notary **R VISHWANATH** at Bangalore.

CHANGE OF NAME

I, **JYOTHI BALLURGI**, D/o Subhash Ballurgi, age 48 years, R/at H No. E405, Maangalya Prosper - Signature Block, Royal Park Residency Layout, J P Nagar 9th Phase, South Bengaluru-560062 do hereby declare that both the names i.e. **JYOTHI SUBHASH BALLURGI** and **JYOTHI BALLURGI** are one and the same and refers to me only, henceforth I shall be known and called as **JYOTHI BALLURGI** for all purposes, vide affidavit dated 9-4-2026, sworn before Advocate and Notary **K.V. BACHI REDDY** at Bangalore.

IN THE COURT OF THE HON'BLE PRL. CIVIL JUDGE AND JMFC AT KOLAR
O.S. No. 678/2023

Plaintiff : Sri Chandrappa S/o. Late Erappa, Aged about 55 years, R/at Mageri Village, Kasaba Hobli, Bangarpet Taluk.

V/S

Defendants : 1) Smt. Rathnamma W/o. Late Malleppa, Aged about 68 years, And Others

NOTICE TO DEFENDANT No. 1 TO 3 UNDER ORDE 5 RULE 20 R/W SECTION 151 OF CPC

1. Smt. Rathnamma W/o. Late Malleppa Aged about 68 year,
2.Sri Venkatesh Gowda S/o. Late Malleppa Aged about 43 years,
3. Sri Chowdegowda S/o. Late Malleppa Aged about 36 years, R/at Mageri Village, Kasaba Hobli, Bangarpet Taluk, Kolar District.

WHEREAS the plaintiff above named has filed the above suit against the defendants for the relief of Declaration of Title and Permanent Injunction and such other relief/s in respect of suit schedule property Before the Hon'ble Prl. Civil Judge and JMFC at Kolar, You being the defendant No. 1 to 3 in the above case are evading to take notice issued by this Hon'ble court and hence you are hereby summoned to appear before this Hon'ble Court in person or by a pleader duly instructed by you on 09-06-2026 at to answer the same, failing which the above suit will be disposed off ex-parte in your absence.

Given under my hand seal of this court on 07-04-2026.

By order of the Court
Sheristedar, Prl. Civil Judge & JMFC at Kolar.

Advocate for Plaintiff
Sathish Kumar. A Advocate, Beside Madhusudana Bus Guarage, Basavaraja Building, Gulpet Main Road, Kolar Town, Kolar. KOLAR, DATE: 02-04-2026

[illegible]

IN THE COURT OF THE XXIV ADDL. CITY CIVIL & SESSIONS JUDGE, AT BENGALURU (CCH-6)
O.S No. 1374/2024

BETWEEN: (1) Sri Raghurama Reddy, S/o late Nanjundappa, Aged about 72 years. **(2) Sri Babu**, S/o late Nanjundappa, aged about 67 years, **(3) Sri Nagaraju**, S/o late Hanumappa, aged about 40 years, All are residents of No. 380, Reddy Colony, Yamalur Main Road, Yamalur Village and Post, Bengaluru-560 037.... **PLAINTIFFS**
AND: Sri Venkatesh and others .... **DEFENDANTS**

SUMMONS TO DEFENDANTS 9, 11 & 12 BY SUBSTITUTED SERVICE UNDER ORDER V RULE 20 OF THE CODE OF CIVIL PROCEDURE, 1908
DEFENDANTS 9, 11 & 12

